ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಡಿಸೆಂಬರ್ 29 ಭಾನುವಾರ 2024

ಸಂಪುಟ: 45 | ಸಂಚಿಕೆ: 252 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ನೇತೃತ್ವದ ಸಮಿತಿಯಿಂದ

ಬಸ್ ದರ ಶೇ.15 ಹೆಚ್ಚಳಕ್ಕೆ ಶಿಫಾರಸ್ಸು

● ಹಾಲಿ 3650 ಕೋಟಿ ನಷ್ಟ ಭರಿಸಲು ದರ ಪರಿಷ್ಕರಣೆ ಅನಿವಾರ್ಯ ● ಸಂಸ್ಥೆಯ 200 ಎಕರೆ ಆಸ್ತಿಯಿಂದ ಆದಾಯ ಗಳಿಸುವ ಮಾರ್ಗೋಪಾಯಕ್ಕೂ ಸೂಚನೆ ● ಶಕ್ತಿಯಿಂದ ಪ್ರಯಾಣಿಕರ ಸಂಖ್ಯೆಯಲ್ಲಿ ಗಣನೀಯ ಏರಿಕೆ ● ದರ ಹೆಚ್ಚಳ ಪ್ರಸ್ತಾಪಕ್ಕೆ ಬಿಜೆಪಿ ಭಾರಿ ವಿರೋಧ

ಬೆಂಗಳೂರು, ಡಿ. 28(ಕೆಎಂಶಿ)– ರಾಜ್ಯ ರಸ್ತೆ ಸಾರಿಗೆ ಬಸ್ ಪ್ರಯಾಣ ದರವನ್ನು ಶೇಕಡ 15ರಷ್ಟು ಹೆಚ್ಚಳ ಮಾಡುವಂತೆ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ನೇತೃತ್ವದ ಉನ್ನತ ಮಟ್ಟದ ಸಮಿತಿ ಶಿಫಾರಸು ಮಾಡಿದೆ.

ನಿಗಮಗಳು ಕಳೆದ 2020ರಿಂದ ಪ್ರಯಾಣ ದರ ಪರಿಷ್ಕರಣೆ ಮಾಡದೆ, ಭಾರಿ ನಷ್ಟಕ್ಕೆ ಗುರಿಯಾಗಿವೆ. ನಿಗಮಕ್ಕೆ ವಾರ್ಷಿಕ 3,650 ಕೋಟಿ ರೂ. ಹೊರೆಯಾಗುತ್ತಿದ್ದು, ಪ್ರಯಾಣ ದರ ಪರಿಷ್ಕರಣೆ ನಂತರ ನಷ್ಟದ ಪ್ರಮಾಣ 1,800 ಕೋಟಿ ರೂ.ಗಳಿಗೆ ಇಳಿಯುತ್ತದೆ. ನಿಗಮಕ್ಕೆ ಆಗುತ್ತಿರುವ ನಷ್ಟವನ್ನು ಪ್ರತಿ ಬಾರಿಯೂ ಭರಿಸಲಾಗದು, ಸಂಪನ್ಮೂಲ ಕ್ರೋಡೀಕರಣಕ್ಕೆ ದರ ಹೆಚ್ಚಳದ ಜೊತೆಗೆ ಪಾರ್ಸಲ್ ಸೇವೆಯನ್ನೂ ಅನುಷ್ಠಾನಗೊಳಿಸಿ, ನಿಗಮದ ಸೇವೆಗಳನ್ನು ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ತಿಳಿಸಿ, ಸಂಸ್ಥೆಯಲ್ಲಿರುವ 200 ಎಕರೆ ಭೂಮಿಯನ್ನು ಆದಾಯ ಕ್ರೋಢೀಕರಣಕ್ಕಾಗಿ ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಕೈಗಾರಿಕಾ ಮೂಲಸೌಕರ್ಯ ■6ನೇ ಪುಟಕ್ಕೆ



ಡಾ.ಶಾಲಿನಿ ರಜನೀಶ್



ಡಾ.ಮನಮೋಹನ್‌ಸಿಂಗ್ ಪಂಚಭೂತಗಳಲ್ಲಿ ಲೀನ

ಪುತ್ರಿಯಿಂದ ತಂದೆಯ ಚಿತೆಗೆ ಅಗ್ನಿಸ್ಪರ್ಶ





ನವದೆಹಲಿ, ಡಿ.28–ದೇಶ ಕಂಡ ಅಪರೂಪದ ರಾಜಕಾರಣಿ ಹಾಗೂ ದೇಶದ ಶ್ರೇಷ್ಠ ಅರ್ಥಶಾಸ್ತ್ರಜ್ಞ ಡಾ.ಮನಮೋಹನ್ ಸಿಂಗ್ ಅವರ ಅಂತ್ಯ ಸಂಸ್ಕಾರ ಇಂದು ದೆಹಲಿಯ ನಿಗಮ ಬೋಧ್ ಘಾಟ್‌ನಲ್ಲಿ ನಡೆದಿದ್ದು, ಸಕಲ ಸರ್ಕಾರಿ ಗೌರವಗಳೊಂದಿಗೆ ಮತ್ತು ಸಿಖ್ ಧರ್ಮದ ಸಂಪ್ರದಾಯದಂತೆ ಸಿಂಗ್ ಅವರ ಅಂತಿಮ ಸಂಸ್ಕಾರ ನಡೆಯಿತು.

ಡಾ. ಮನಮೋಹನ್‌ಸಿಂಗ್ ಅವರ ಪುತ್ರಿ ತಮ್ಮ ತಂದೆಯ ಚಿತೆಗೆ ಅಗ್ನಿಸ್ಪರ್ಶ ಮಾಡುವ ಮೂಲಕ ಅಂತಿಮ ಸಂಸ್ಕಾರ ನೆರವೇರಿಸಿದರು. ಈ ವೇಳೆ ಉಪಸ್ಥಿತರಿದ್ದ ನಾಯಕರು ಅವರಿಗೆ ಅಂತಿಮ ಗೌರವ ಸಲ್ಲಿಸಿದರು. ಮಾಜಿ ಪ್ರಧಾನಿ ಡಾ. ಮನಮೋಹನ್‌ಸಿಂಗ್ ಅವರ ನವದೆಹಲಿಯ ಸ್ವಗೃಹದಿಂದ ಕಾಂಗ್ರೆಸ್‌ನ ಪ್ರಧಾನ ಕಚೇರಿಗೆ ಪಾರ್ಥಿವ ಶರೀರವನ್ನು ತಂದ ಬಳಿಕ ಅಲ್ಲಿ ಅವರಿಗೆ ಅಂತಿಮ ಗೌರವ ಸಲ್ಲಿಸಲಾಯಿತು. ನಂತರ ನಿಗಮಬೋಧ್ ಘಾಟ್‌ಗೆ ಅಂತಿಮ ಯಾತ್ರೆ ಸಾವಿರಾರು ಮಂದಿಯ ಸಮ್ಮುಖದಲ್ಲಿ ಸಾಗಿತು. ಪಾರ್ಥಿವ ಶರೀರಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೂಡ ಹೆಗಲು ಕೊಟ್ಟರು.

ಮನಮೋಹನ್‌ಸಿಂಗ್ ಅವರಿಗೆ ಅಂತಿಮ ವಿದಾಯ ಹೇಳಲು ದೆಹಲಿಯ ನಿಗಮ ಬೋಧ್ ಘಾಟ್‌ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹಸಚಿವ ಅಮಿತ್ ಶಾ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಎಐಸಿಸಿ ವರಿಷ್ಠೆ ಸೋನಿಯಾ ಗಾಂಧಿ, ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿವಿಧ ರಾಜ್ಯಗಳ ಸಿಎಂಗಳು ಸಹಿತ ಕೇಂದ್ರ ಸಚಿವರುಗಳು, ಕಾಂಗ್ರೆಸ್ ನಾಯಕರುಗಳು ಹಾಜರಿದ್ದರು. ಈ ಎಲ್ಲಾ ನಾಯಕರು ಅಗಲಿದ ■6ನೇ ಪುಟಕ್ಕೆ

ಪೊಲೀಸ್ ಠಾಣೆಯಲ್ಲೇ ಪೇದೆಗಳ ಮೇಲೆ ಹಲ್ಲೆ, ದಾಂಧಲೆ

ಪಾಂಡವಪುರ ಪುರಸಭಾ ಮಾಜಿ ಅಧ್ಯಕ್ಷರ ಪುತ್ರನ ಬಂಧನ

ಪಾಂಡವಪುರ, ಡಿ. 28– ಪಾಂಡವಪುರ ಪುರಸಭೆಯ ಮಾಜಿ ಅಧ್ಯಕ್ಷರೊಬ್ಬರ ಪುತ್ರ ಪೊಲೀಸ್ ಠಾಣೆಯಲ್ಲೇ ಪೊಲೀಸರ ಮೇಲೆ ಹಲ್ಲೆ ನಡೆಸಿ, ಜೈಲು ಪಾಲಾಗಿದ್ದಾನೆ.

ಮಾಜಿ ಪುರಸಭಾಧ್ಯಕ್ಷ ಜಗದೀಶ್ ಪುತ್ರ ಸಾಗರ್, ಪೊಲೀಸರ ಮೇಲೆ ಕೈ ಮಾಡಿ ಜೈಲು ಪಾಲಾಗಿದ್ದು, ಈತ ಠಾಣೆಯಲ್ಲೇ ಕಾನ್‌ಸ್ಟೇಬಲ್ ಅಭಿಷೇಕ್ ಗೌಡ, ಹೆಡ್‌ಕಾನ್‌ಸ್ಟೇಬಲ್ ಆನಂದ್, ಮಹಿಳಾ ಪೇದೆ ಲಕ್ಷ್ಮಿ ಅವರ ಮೇಲೆ ಹಲ್ಲೆ ನಡೆಸಿದ್ದಾನೆ. ತಕ್ಷಣವೇ ಈತನನ್ನು ಬಂಧಿಸಿ, ಕಾನ್‌ಸ್ಟೇಬಲ್ ಅಭಿಷೇಕ್‌ಗೌಡ ನೀಡಿದ ದೂರನ್ನು ದಾಖಲಿಸಿಕೊಂಡ ಸಬ್‌ಇನ್‌ಸ್ಪೆಕ್ಟರ್ ಮಹದೇವ ಅವರು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ವಿವರ: ಆರೋಪಿ ಸಾಗರ್ ಇಂದು ಬೆಳಗ್ಗೆ 9 ಗಂಟೆ ಸುಮಾರಿನಲ್ಲಿ ಕೆ. ಲಕ್ಷ್ಮೀನಾರಾಯಣ ಎಂಬುವರ ಜಮೀನಿಗೆ ನುಗ್ಗಿ ಅಲ್ಲಿ ಕೆಲಸ ಮಾಡುತ್ತಿದ್ದ ರಾಮಣ್ಣ, ಮಹಾದೇವ ಹಾಗೂ ಲಕ್ಷ್ಮೀನಾರಾಯಣ ಅವರನ್ನು ಅವಾಚ್ಯ ಶಬ್ಧಗಳಿಂದ ನಿಂದಿಸಿ, ಕೊಲೆ ಬೆದರಿಕೆ ಹಾಕಿದ್ದಲ್ಲದೇ ಹಲ್ಲೆ ನಡೆಸಿದ್ದಾನೆ ಈ ಹಿನ್ನೆಲೆಯಲ್ಲಿ ಲಕ್ಷ್ಮೀನಾರಾಯಣ ಬೆಳಗ್ಗೆ 11 ಗಂಟೆಗೆ ಪಾಂಡವಪುರ ಟೌನ್ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು.

ಈ ದೂರನ್ನಾಧರಿಸಿ ಸಬ್‌ಇನ್‌ಸ್ಪೆಕ್ಟರ್ ಮಹದೇವ ನೀಡಿದ ಸೂಚನೆಯಂತೆ ಕಾನ್‌ಸ್ಟೇಬಲ್ ಅಭಿಷೇಕ್‌ಗೌಡ ಅವರು ಸಾಗರ್‌ಗೆ ಕರೆ ಮಾಡಿ ದೂರಿನ ವಿಚಾರ ತಿಳಿಸಿ ಠಾಣೆಗೆ ಬಂದು ಸಬ್‌ಇನ್‌ಸ್ಪೆಕ್ಟರ್‌ಅನ್ನು ಭೇಟಿ ಮಾಡುವಂತೆ ಹೇಳಿದ್ದಾರೆ.

ಬೆಳಗ್ಗೆ 11.50ಕ್ಕೆ ಠಾಣೆಗೆ ಸಾಗರ್ ಆಗಮಿಸಿದ್ದು, ಅದೇ ವೇಳೆ ದೂರುದಾರರಾದ ಲಕ್ಷ್ಮೀನಾರಾಯಣ, ಠಾಣೆಯ ಎಸ್‌ಹೆಚ್‌ಓ ಆನಂದ್ ಅವರ ಬಳಿ ಇದ್ದ ಚೇರ್ ಮೇಲೆ ಕುಳಿತುಕೊಳ್ಳಲು ಹೋದಾಗ ಹಠಾತ್ತನೇ ಚೇರ್ ಎಳೆದುಕೊಂಡ ಸಾಗರ್, ಲಕ್ಷ್ಮೀನಾರಾಯಣ ಅವರನ್ನು ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದಾನೆ. ಈ ವೇಳೆ ಇವರಿಬ್ಬರ ನಡುವೆ ಮಾತಿಗೆ ಮಾತು ಬೆಳೆದಿದ್ದು, ಮಧ್ಯೆ ■6ನೇ ಪುಟಕ್ಕೆ



ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಸಾಗರ್ ದಾಂಧಲೆ ಮಾಡುತ್ತಿರುವುದು.

ವಾಲ್ಮೀಕಿ ರಸ್ತೆಯಲ್ಲಿ ಕಾರು ಬೆಂಕಿಗಾಹುತಿ!



ಇದ್ದಕ್ಕಿದ್ದಂತೆ ಬೆಂಕಿ ಹೊತ್ತಿಕೊಂಡು ಸುಟ್ಟು ಕರಕಲಾದ ಕ್ವಿಡ್ ಕಾರು.

ಮೈಸೂರು,ಡಿ.28(ಆರ್‌ಕೆ)– ನಿಂತಿದ್ದ ಕಾರಿಗೆ ಇದ್ದಕ್ಕಿದ್ದಂತೆ ಬೆಂಕಿ ಹೊತ್ತಿಕೊಂಡು ಸುಟ್ಟು ಕರಕಲಾಗಿರುವ ಘಟನೆ ಮೈಸೂರಿನ ವಿವಿ ಮೊಹಲ್ಲಾ, 3ನೇ ಮೇನ್‌ನಲ್ಲಿ ಇಂದು ಮಧ್ಯಾಹ್ನ ಸಂಭವಿಸಿದೆ.

ಮೈಸೂರಿನ ದಟ್ಟಗಳ್ಳಿ ಕನಕದಾಸನಗರ ನಿವಾಸಿ ವಿಭಾ ಸುರೇಶ್ ಎಂಬುವರಿಗೆ ಸೇರಿದ ಕ್ವಿಡ್ (ಕೆಎ–09 ಎಂಇ 9373) ಕಾರು ದಹನವಾಗಿದ್ದು, ವಿಷಯ ತಿಳಿಯುತ್ತಿದ್ದಂತೆಯೇ ಸರಸ್ವತಿಪುರಂ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸುವ ಕಾರ್ಯ ನಡೆಸಿದರಾದರೂ ಅಷ್ಟರಲ್ಲಿ ಕಾರು ಸಂಪೂರ್ಣ ಸುಟ್ಟು ಕರಕಲಾಯಿತು.

ಬೆಂಗಳೂರಿನ ಖಾಸಗಿ ಕಂಪನಿ ಉದ್ಯೋಗಿಯಾದ ವಿಭಾ ಅವರು, ತಮ್ಮ ಸ್ನೇಹಿತೆಯೊಂದಿಗೆ ಮಧ್ಯಾಹ್ನ 1.40 ಗಂಟೆಗೆ ಬಂದು ವಿವಿ ಮೊಹಲ್ಲಾದ ವಾಲ್ಮೀಕಿ ರಸ್ತೆಯ 3ನೇ ಮೇನ್ ಬಳಿ ಹೋಟೆಲ್ ಮುಂದೆ ಕಾರು ನಿಲ್ಲಿಸಿ ಊಟ ಮಾಡುತ್ತಿದ್ದಾಗ ಇದ್ದಕ್ಕಿದ್ದಂತೆ ಕಾರಿನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣ ಸಾರ್ವಜನಿಕರು ಬೆಂಕಿ ನಂದಿಸಲು ಯತ್ನಿಸಿದರಾದರೂ ಪ್ರಯೋಜನವಾಗಲಿಲ್ಲ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಆದರೆ ಅಷ್ಟರಲ್ಲಿ ಕಾರು ಸಂಪೂರ್ಣ ಸುಟ್ಟು ಹೋಗಿತ್ತು.

ಕಾರಿನಲ್ಲಿ ಯಾರೂ ಇರಲಿಲ್ಲವಾದ್ದರಿಂದ ಪ್ರಾಣಾಪಾಯ ಸಂಭವಿಸಲಿಲ್ಲ. ವಿವಿ ಪುರಂ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕಾರು ನಿಲ್ಲಿಸುವ ಮೊದಲು ಯಾರೋ ಅಲ್ಲಿಗೆ ಕೆಂಡಸಹಿತ ಬೂದಿ ಸುರಿದಿದ್ದರು. ಅದರ ಮೇಲೆ ನಿಲ್ಲಿಸಿದ ಕಾರಿನ ಇಂಜಿನ್ ಶಾಖದಿಂದ ಬೆಂಕಿ ಹೊತ್ತುಕೊಂಡಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಡಾ.ಸಿದ್ದಲಿಂಗಶಿವಾಚಾರ್ಯ ಮಹಾಸ್ವಾಮಿಗಳ ವರ್ಧಂತಿ



ವಾಟಾಳು ಶ್ರೀ ಸೂರ್ಯಸಿಂಹಾಸನ ಮಠದ ಡಾ. ಸಿದ್ದಲಿಂಗಶಿವಾಚಾರ್ಯ ಸ್ವಾಮಿಗಳ ವರ್ಧಂತಿ ದಿನದಂದು ಮೈಸೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎ.ಸಿ.ಮಂಜುನಾಥ್, ಶ್ರೀಗಳ ಆಶೀರ್ವಾದ ಪಡೆದರು. ಈ ವೇಳೆ ವಕೀಲರಾದ ಜ್ಞಾನೇಂದ್ರಮೂರ್ತಿ ತೊಂಟೇಶ್, ಚೇತನ್‌ಗೌಡ ಉಪಸ್ಥಿತರಿದ್ದರು

ಮೈಸೂರಲ್ಲಿ ಹಿಮೋಫಿಲಿಯಾ ಸಮಸ್ಯೆ ಕುರಿತು ಕೌನ್ಸಿಲ್ ಸಭೆ ಆರಂಭ

ಮೈಸೂರು, ಡಿ.28(ಜಿಎ)–ಹಿಮೋಫಿಲಿಯಾ ಸಮಸ್ಯೆಯಿಂದ ಬಳಲುತ್ತಿರುವವರಿಗಾಗಿ ಹಿಮೋಫಿಲಿಯಾ ಮೈಸೂರು ಸೊಸೈಟಿ ವತಿಯಿಂದ ನಗರದ ಹೋಟೆಲ್ ಕೋರಂನಲ್ಲಿ ಆಯೋಜಿಸಿರುವ ಎರಡು ದಿನಗಳ ಪ್ರಾದೇಶಿಕ ಕೌನ್ಸಿಲ್ ಸಭೆ ಶನಿವಾರ ಆರಂಭವಾಗಿದ್ದು, ಭಾನುವಾರವೂ ಮಂದುವರಿಯಲಿದೆ ಎಂದು ಸೊಸೈಟಿ ಅಧ್ಯಕ್ಷ ಡಾ.ಎಸ್.ಕೆ. ಮಿತ್ತಲ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಭೆಯಲ್ಲಿ ಪ್ರಮುಖ ಪರಿಣಿತರು ಹಿಮೋಫಿಲಿಯಾ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಚಿಕಿತ್ಸೆ ಪಡೆಯುವ, ಮುನ್ನೆಚ್ಚರಿಕೆ ವಹಿಸುವ ಬಗ್ಗೆ ಅರಿವು ಮೂಡಿಸಲಿದ್ದಾರೆ. ಇವರಿಗೆ ಯಾವ ರೀತಿಯ ಸೌಲಭ್ಯ ದೊರೆಯಲಿವೆ ಎಂಬ ಮಾಹಿತಿ ಮಾತ್ರವಲ್ಲದೆ, ಸ್ಥಳೀಯ ಆಸ್ಪತ್ರೆಗಳಲ್ಲಿಯೂ ರಕ್ತ ಹೆಪ್ಪುಗಟ್ಟಿದ ಸಮಸ್ಯೆಯಿಂದ ಬಳಲುತ್ತಿರುವ ಇವರ ಚಿಕಿತ್ಸೆಗೆ ಅವಕಾಶ ಕಲ್ಪಿಸಬೇಕು ಎಂಬ ಮೊದಲಾದ ಬೇಡಿಕೆಗಳನ್ನು ಸರ್ಕಾರದ ಎದುರು ಇಡಲಾಗುವುದು ಎಂದರು.

ಡಿ.29ರಂದು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ಎಂಎಂಸಿಆರ್‌ಐ ನಿರ್ದೇಶಕಿ ಡಾ.ದಾಕ್ಷಾಯಿಣಿ, ಪ್ರೇಮರೂಪ್ ಆಳ್ವಾ ಇನ್ನಿತರರು ಪಾಲ್ಗೊಳ್ಳಲಿದ್ದು, ದಕ್ಷಿಣ ಭಾರತದ ಸುಮಾರು 30 ಅಧ್ಯಾಯಗಳ ಪ್ರಮುಖರು ಭಾಗವಹಿಸಿ ಸಲಹೆ ನೀಡಲಿದ್ದಾರೆ ಎಂದರು. ಗೋಷ್ಠಿಯಲ್ಲಿ ದತ್ತಾತ್ರೇಯ ಶಿಂಧೆ, ವಂಶಿ ದುಗಂ, ಜಿ.ಪ್ರವೀಣ್ ಕುಮಾರ್, ಜಿಮ್ಮಿ ಮ್ಯಾನುಯಲ್ ಇದ್ದರು.

ಅಶೋಕಪುರಂ ರೈಲ್ವೆ ನಿಲ್ದಾಣಕ್ಕೆ ಶೀಘ್ರವೇ 8 ರೈಲುಗಳ ಸೇವೆ ವಿಸ್ತರಣೆ

● ಮಾಹಿತಿ ಹಂಚಿಕೊಂಡ ಸಂಸದ ಯದುವೀರ್ ● ಜನರಿಗೆ ಅನುಕೂಲ ಕಲ್ಪಿಸಿದ ನೈರುತ್ಯ ರೈಲ್ವೆ ಇಲಾಖೆಗೆ ಧನ್ಯವಾದ





ಮೈಸೂರು, ಡಿ.28 (ಎಸ್‌ಬಿಡಿ) – ಮೈಸೂರಿನ ನವೀಕೃತ ಅಶೋಕಪುರಂ ರೈಲ್ವೆ ನಿಲ್ದಾಣಕ್ಕೆ ಶೀಘ್ರದಲ್ಲೇ 8 ರೈಲುಗಳ ಸೇವೆ ವಿಸ್ತರಣೆಯಾಗಲಿದೆ. ಈ ವಿಷಯ ತಿಳಿಸಿರುವ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶೀಘ್ರದಲ್ಲೆ ಮೈಸೂರಿನ ಅಶೋಕಪುರಂ ರೈಲ್ವೆ ನಿಲ್ದಾಣದವರೆಗೆ ಎಂಟು ರೈಲುಗಳ ಸೇವೆ ವಿಸ್ತಾರಗೊಳ್ಳಲಿದೆ ಎಂದು ತಿಳಿಸಲು ಹರ್ಷಿಸುತ್ತೇನೆ. ಟ್ರ್ಯಾಕ್ 1 ರಿಂದ 5ರವರೆಗೆ ಸಂಪೂರ್ಣ ವಿದ್ಯುದೀಕರಣಗೊಳಿಸಿ, ಅಶೋಕಪುರಂ ಯಾರ್ಡ್‌ನ ಮೂಲಕ ರೈಲು ಸೇವೆ ಕಲ್ಪಿಸುವ ಮೂಲಕ ಜನರಿಗೆ ಅನುಕೂಲ ಮಾಡಿದ ನೈರುತ್ಯ ರೈಲ್ವೆ ಇಲಾಖೆಯ ಪರಿಶ್ರಮ ಹಾಗೂ ಕಾರ್ಯಕ್ಷಮತೆ ಪ್ರಶಂಸನೀಯ. ಇದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದು ಹೇಳಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್ ನೇತೃತ್ವದಲ್ಲಿ ಭಾರತೀಯ ರೈಲು ಸೇವೆ ಸಂಪೂರ್ಣವಾಗಿ ಪರಿವರ್ತನೆಗೊಂಡಿದೆ ಎಂಬುದಕ್ಕೆ ಈ ಪ್ರಯತ್ನ ಸಾಕ್ಷಿಯಾಗಿದೆ. ಅಶೋಕಪುರಂವರೆಗಿನ ರೈಲು ಸೇವೆಗಳ ವಿಸ್ತರಣೆಯು ಮೈಸೂರು ಮತ್ತು ಸುತ್ತಮುತ್ತಲ ಪ್ರದೇಶದ ಪ್ರಯಾಣಿಕರಿಗೆ ಬಹಳಷ್ಟು ಅನುಕೂಲವಾಗಲಿದೆ. ನೈರುತ್ಯ ರೈಲ್ವೆಯು ಸಂಪರ್ಕ ಮತ್ತು ಮೂಲ ಸೌಕರ್ಯವನ್ನು ಸುಧಾರಿಸುವಲ್ಲಿ ದಾಪುಗಾಲಿನೊಂದಿಗೆ ಯಶಸ್ವಿಯಾಗಿ ಮುನ್ನಡೆಯುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಎಂಟು ರೈಲುಗಳಿವು: ಚೆನ್ನೈ ಸೆಂಟ್ರಲ್ –ಮೈಸೂರು ಕಾವೇರಿ ಎಕ್ಸ್‌ಪ್ರೆಸ್ (16021/22), ಚೆನ್ನೈ ಸೆಂಟ್ರಲ್–ಮೈಸೂರು ಎಕ್ಸ್‌ಪ್ರೆಸ್(12609/10), ಬೆಂಗಳೂರು ಸಿಟಿ ಜಂಕ್ಷನ್– ಮೈಸೂರು ಮಾಲ್ಗುಡಿ ಎಕ್ಸ್‌ಪ್ರೆಸ್(20624/23), ಹೈದರಾಬಾದ್–ಮೈಸೂರು ಎಕ್ಸ್‌ಪ್ರೆಸ್(12785/86), ಬೆಂಗಳೂರು ಸಿಟಿ ಜಂಕ್ಷನ್– ಮೈಸೂರು ಮೆಮು ರೈಲು(06525/26), ಬೆಂಗಳೂರು ಸಿಟಿ ಜಂಕ್ಷನ್–ಮೈಸೂರು ಮೆಮು ರೈಲು(06559/60), ಬೆಂಗಳೂರು ಸಿಟಿ ಜಂಕ್ಷನ್– ಮೈಸೂರು ಮೆಮು ರೈಲು(06255/56) ಹಾಗೂ ಬೆಂಗಳೂರು ಸಿಟಿ ಜಂಕ್ಷನ್– ಮೈಸೂರು ಮೆಮು (06257/58) ರೈಲು ಸೇವೆ ಶೀಘ್ರದಲ್ಲೇ ಅಶೋಕಪುರಂ ರೈಲು ನಿಲ್ದಾಣದವರೆಗೆ ವಿಸ್ತರಣೆಯಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಮೈಸೂರಿನ ಶ್ರೀ ಯೋಗ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಹೊಸ ವರ್ಷದಂದು

ತಿರುಪತಿ ಮಾದರಿ 2 ಲಕ್ಷ ಲಾಡು ವಿತರಣೆ

100ಕ್ಕೂ ಹೆಚ್ಚು ಬಾಣಸಿಗರಿಂದ ಲಡ್ಡು ತಯಾರಿಕೆ, 2 ಕೆಜಿ ತೂಕದ 10 ಸಾವಿರ ಲಾಡುಗಳು, 150 ಗ್ರಾಂನ 2 ಲಕ್ಷ ತಯಾರು



ಮೈಸೂರಿನ ಶ್ರೀ ಯೋಗ ನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ತಯಾರಾಗಿರುವ ಲಾಡುಗಳನ್ನು ದೇವಸ್ಥಾನದ ಸಂಸ್ಥಾಪಕರಾದ ಶ್ರೀ ಭಾಷ್ಯಂ ಸ್ವಾಮೀಜಿ, ದೇವಸ್ಥಾನದ ಆಡಳಿತ ಮಂಡಳಿ ಆಡಳಿತಾಧಿಕಾರಿ ಶ್ರೀನಿವಾಸ್, ಡಾ.ರಾಜಕುಮಾರ್ ಅವರ ಪುತ್ರಿ ಲಕ್ಷ್ಮಿ, ಅಳಿಯ ಗೋವಿಂದರಾಜ್, ಮೈಸೂರು ವಿವಿ ಕುಲಪತಿ ಪ್ರೊ.ಎಂ.ಕೆ.ಲೋಕನಾಥ್ ವೀಕ್ಷಿಸಿದರು.

ಮೈಸೂರು, ಡಿ.28(ಜಿಎ)–ಮೈಸೂರಿನ ವಿಜಯನಗರದಲ್ಲಿರುವ ಶ್ರೀಯೋಗ ನರಸಿಂಹಸ್ವಾಮಿ ದೇವಸ್ಥಾನದ ವತಿಯಿಂದ ಹೊಸ ವರ್ಷದ ದಿನವಾದ ಜ.1ರಂದು ದೇವಸ್ಥಾನದಲ್ಲಿ ಎರಡು ಲಕ್ಷ ಲಡ್ಡು ವಿತರಿಸಲು ನಿರ್ಧರಿಸಲಾಗಿದ್ದು, ಇದಕ್ಕಾಗಿ ಶ್ರೀ ಯೋಗನರಸಿಂಹ ಸ್ವಾಮಿ ದೇವಾಲಯದಲ್ಲಿ 100ಕ್ಕೂ ಹೆಚ್ಚು ಬಾಣಸಿಗರು ಲಡ್ಡು ತಯಾರಿಕೆಯಲ್ಲಿ ತೊಡಗಿದ್ದಾರೆ.

ದೇವಸ್ಥಾನದ ಆವರಣದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ದೇವಸ್ಥಾನದ ಸಂಸ್ಥಾಪಕರಾದ ಶ್ರೀ ಭಾಷ್ಯಂ ಸ್ವಾಮೀಜಿ ಈ ವಿಷಯ ತಿಳಿಸಿ, ವಿಶೇಷವಾಗಿ ತಿರುಪತಿ ಮಾದರಿಯಲ್ಲಿ 2ಕೆ.ಜಿ ತೂಕದ ಲಾಡುಗಳನ್ನು ಸಿದ್ಧಪಡಿಸಲಾಗುತ್ತಿದ್ದು, ಸುಮಾರು 100ಕ್ಕೂ ಹೆಚ್ಚು ಬಾಣಸಿಗರಿಂದ ಲಡ್ಡು ತಯಾರಿ ನಡೆದಿದೆ. ಜನವರಿ 1ರಂದು ದೇವಾಲಯದಲ್ಲಿ ಲಾಡು ವಿತರಣೆ ನಡೆಯಲಿದೆ. ಹೊಸ ವರ್ಷದಂದು ವಿಶೇಷ ಧಾರ್ಮಿಕ ಕಾರ್ಯಕ್ರಮ ನಡೆಯಲಿದ್ದು, ಜನವರಿ 1ರಂದು ಮುಂಜಾನೆ 4 ಗಂಟೆಯಿಂದ ಇಡೀ ದಿನ ಲಾಡು ವಿತರಿಸಲಾಗುತ್ತದೆ ಎಂದರು.

1994ರಲ್ಲಿ ನಟ ದಿ ಡಾ.ರಾಜಕುಮಾರ್ ಅವರು ತಿರುಪತಿ ಮಾದರಿಯ ಲಾಡು ತಯಾರಿಸಿ ವಿತರಿಸುವಂತೆ ಹೇಳಿ ಪ್ರೇರೇಪಿಸಿ ಸ್ವತಃ 1000 ಹಣ ನೀಡಿದರು. ಒಂದು ಸಾವಿರ ಲಡ್ಡು ವಿತರಣೆಯಿಂದ ಪ್ರಾರಂಭವಾದ ಈ ಕೈಂ ಕಾರ್ಯ ಇಂದು 2 ಲಕ್ಷಕ್ಕೂ ಹೆಚ್ಚಿನ ಲಡ್ಡು ವಿತರಿಸುವ ಹಂತಕ್ಕೆ ಮುಟ್ಟಿದೆ. ಹೊಸ ವರ್ಷದಂದು ಮುಂಜಾನೆ ಸುಮಾರು 4 ಗಂಟೆಗೆ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ಪ್ರಸಾದವಾಗಿ ಲಡ್ಡು ವಿತರಣೆ ಆರಂಭವಾಗಲಿದೆ ಎಂದು ತಿಳಿಸಿದರು.

ದೇವಸ್ಥಾನದ ಆಡಳಿತ ಮಂಡಳಿ ಆಡಳಿತಾಧಿಕಾರಿ ಶ್ರೀನಿವಾಸ್ ಮಾತನಾಡಿ, 2 ಕೆಜಿ ತೂಕದ 10 ಸಾವಿರ ಲಡ್ಡುಗಳು, 150 ಗ್ರಾಂ ತೂಕದ 2 ಲಕ್ಷ ಲಡ್ಡುಗಳು ತಯಾರಾಗುತ್ತಿದೆ. ಜನವರಿ 1ರ ಮುಂಜಾನೆ ದೇವರಿಗೆ ವಿಶೇಷ ಪೂಜೆ ನೆರವೇರಿದ ನಂತರ ಲಡ್ಡು ವಿತರಣೆಯಾಗಲಿದೆ. ರಾತ್ರಿವರೆಗೂ ಪ್ರಸಾದ ವಿತರಿಸಲಾಗುತ್ತದೆ. ಎಲ್ಲರೂ ದೇವರ ದರ್ಶನ ಪಡೆದು ಲಡ್ಡು ಸ್ವೀಕರಿಸುವಂತೆ ಮನವಿ ಮಾಡಿದರು.

ಚಾಮರಾಜನಗರ ಕಿಚ್ಚುಗುತ್ತಿ ಮಾರಮ್ಮ ದೇವಸ್ಥಾನದಲ್ಲಿ ನಡೆದ ಘಟನೆಯಿಂದ ಭಕ್ತರಲ್ಲಿ ಇಂದಿಗೂ ಆತಂಕ ಇದೆ. ಆದ್ದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಮೈಸೂರು ಮಹಾನಗರ ಪಾಲಿಕೆ ಲಡ್ಡುಗಳನ್ನು ಪರಿಶೀಲನೆ ಮಾಡಿ ತೆರಳಿದ್ದಾರೆ. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಬಂದೋಬಸ್ತ್ ಮಾಡಲಾಗುತ್ತಿದೆ. ಹಾಗೇ ಅಡುಗೆ ತಯಾರಿಕೆ ಸ್ಥಳದಲ್ಲಿ ಸಿಸಿಟಿವಿ ಅಳವಡಿಸಲಾಗಿದೆ. ಮಹಿಳೆಯರಿಗೆ, ಪುರುಷರಿಗೆ, ಅಂಗವಿಕಲರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು.

ಪದಾರ್ಥಗಳು: ಲಡ್ಡು ತಯಾರಿಕೆಗೆ 100 ಕ್ವಿಂಟಾಲ್ ಕಡ್ಲೆಹಿಟ್ಟು, 200 ಕೆಜಿ ಸಕ್ಕರೆ, 10000 ಲೀಟರ್ ಖಾದ್ಯ ತೈಲ, 500 ಕೆಜಿ ಗೋಡಂಬಿ, 500 ಕೆಜಿ ಒಣ ದ್ರಾಕ್ಷಿ, 250 ಕೆಜಿ ಬಾದಾಮಿ, 1000 ಕೆಜಿ ಡೈಮಂಡ್ ಸಕ್ಕರೆ, 2000 ಕೆಜಿ ಬೂರಾ ಸಕ್ಕರೆ, 50 ಕೆಜಿ ಪಿಸ್ತಾ, 50 ಕೆಜಿ ಏಲಕ್ಕಿ, 50 ಕೆಜಿ ಜಾಯಿಕಾಯಿ ಮತ್ತು ಜಾಪತ್ರೆ, 50ಕೆಜಿ 10 ಕೆಜಿ ಪಚ್ಚೆ ಕರ್ಪೂರ, 200 ಕೆಜಿ ಲವಂಗ ಬಳಸಲಾಗಿದೆ. ಈ ಸಂದರ್ಭದಲ್ಲಿ ಡಾ.ರಾಜಕುಮಾರ್ ಅವರ ಪುತ್ರಿ ಲಕ್ಷ್ಮಿ, ಅಳಿಯ ಗೋವಿಂದರಾಜ್, ಮೈಸೂರು ವಿವಿ ಕುಲಪತಿ ಪ್ರೊ. ಎಂ.ಕೆ.ಲೋಕನಾಥ್ ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟದಲ್ಲಿ ಗೋಲ್ಡ್ ಇನ್ನರ್‌ವ್ಹೀಲ್ ಕ್ಲಬ್‌ನಿಂದ 'ತಾಯಿಯ ಮಡಿಲು' ಕುಟೀರ ಆರಂಭ

ಮೈಸೂರು, ಡಿ.28(ಜಿಎ)–ಮೈಸೂರು ಗೋಲ್ಡ್ ಇನ್ನರ್‌ವ್ಹೀಲ್ ಕ್ಲಬ್ ವತಿಯಿಂದ ಚಾಮುಂಡಿಬೆಟ್ಟದಲ್ಲಿ ಶಿಶುಗಳಿಗೆ ಹಾಲುಣಿಸಲೆಂದು 'ತಾಯಿಯ ಮಡಿಲು' ಕುಟೀರ ಸ್ಥಾಪಿಸಿದ್ದು, ಜ.3ರಂದು ಅನಾವರಣಗೊಳಲಿದೆ ಎಂದು ಕ್ಲಬ್ ಅಧ್ಯಕ್ಷೆ ಪ್ರೇಮಾ ರವಿ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಯಂದಿರು ಸಾರ್ವಜನಿಕ ಸ್ಥಳಗಳಲ್ಲಿ ತಮ್ಮ ಶಿಶುಗಳಿಗೆ ಹಾಲುಣಿಸಲು ಮುಜುಗರ ಪಡುವ ಸ್ಥಿತಿ ಇದೆ. ಗೌಪ್ಯತೆ ಇರುವುದಿಲ್ಲ. ಹೀಗಾಗಿ ತಮ್ಮ ಕ್ಲಬ್ ವತಿಯಿಂದ ಸುಮಾರು 40 ಸಾವಿರ ರೂ. ವೆಚ್ಚದಲ್ಲಿ ಬೆಟ್ಟದ ಪೊಲೀಸ್ ಠಾಣೆ ಪಕ್ಕದಲ್ಲಿ ಈ ಕುಟೀರ ತೆರೆಯಲಾಗಿದೆ. ಇಲ್ಲಿ ಏಕಕಾಲದಲ್ಲಿ ಮೂವರು ತಾಯಂದಿರುವ ತಮ್ಮ ಶಿಶುಗಳಿಗೆ ಹಾಲುಣಿಸಲು ಅವಕಾಶ ಕಲ್ಪಿಸಲಾಗಿದೆ. ಹೀಗಾಗಿ ಬೆಟ್ಟಕ್ಕೆ ಭೇಟಿ ನೀಡುವ ತಾಯಂದಿರು ಪ್ರಯೋಜನ ಪಡೆಯಬೇಕೆಂದು ಮನವಿ ಮಾಡಿದರು. ಚಾಮುಂಡಿಬೆಟ್ಟದ ಗ್ರಾಪಂ ಅಧ್ಯಕ್ಷೆ ನಾಗರತ್ನ ಅಂದು ಬೆಳಗ್ಗೆ 10.30ಕ್ಕೆ ಅನಾವರಣಗೊಳಿಸಲಿದ್ದಾರೆ. ನಂತರ ಅದನ್ನು ಜಿಲ್ಲಾ ಪಂಚಾಯಿತ್ ಸುಪರ್ದಿಗೆ ನೀಡುತ್ತೇವೆ ಎಂದರು. ಗೋಷ್ಠಿಯಲ್ಲಿ ಅಂಜಲಿ, ಉಮಾ ಅನಿಲ್, ನಳಿನಿ, ಪ್ರತಿಭಾ ಇದ್ದರು.

ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ



ಮೈಸೂರಿನ ಬಸವೇಶ್ವರ ರಸ್ತೆಯಲ್ಲಿರುವ ಕುದೇರು ಮಠದಲ್ಲಿ ಮಠದ ಕಿರಿಯ ಶ್ರೀಗಳು ಬಸವೇಶ್ವರ ಸೇವಾ ಸಮಿತಿಯ ಹೊಸ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಿದರು. ಈ ವೇಳೆ ಸಮಿತಿ ಅಧ್ಯಕ್ಷ ಕೆ.ಗುರುಸ್ವಾಮಿ, ಕಾರ್ಯದರ್ಶಿ ಬಿ.ಶಿವರುದ್ರಪ್ಪ, ಖಜಾಂಚಿ ಬಿ.ಸುರೇಶ್ ಮತ್ತಿತರರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.12.2024 ಭಾನುವಾರ, ಮಳೆ ನಕ್ಷತ್ರ: ಪೂಷಾ, 29.12.2024 ರಿಂದ 16.01.2025 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಧನುರ್ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಸುಪ್ರಭ ನಾಗೇಶ್‌ರಾವ್ ಸೇವಾ ಪ್ರತಿಷ್ಠಾನ :** 5ನೇ ವರ್ಷದ ಪ್ರಸ್ತುತಿ ವಿಶ್ವ ಶಾಂತಿಗಾಗಿ ವಿಷ್ಣು ಸಹಸ್ರನಾಮ ಪಾರಾಯಣ, ಸ್ಥಳ: #622, 2ನೇ ಮೇನ್, 2ನೇ ಕ್ರಾಸ್, ಶಾರದಾದೇವಿನಗರ, ಬೆಳಗ್ಗೆ 5 ರಿಂದ ರಾತ್ರಿ 10 ರವರೆಗೆ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭ್ಯುದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ಕುಂಭಾಭಿಷೇಕ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಮಹತೋಬಾರ ಶ್ರೀ ಧರ್ಮ ಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ.

■ **ಮೈಸೂರು ಅರಮನೆ ಮಂಡಳಿ:** ಬೆಳಗ್ಗೆ 10 ರಿಂದ ಅರಮನೆ ಫಲಪುಷ್ಪ ಪ್ರದರ್ಶನ–2024, ಸಂಜೆ 7 ರಿಂದ ಅರಮನೆ ವಿದ್ಯುತ್ ದೀಪಾಲಂಕಾರ, ಸ್ಥಳ: ಮೈಸೂರು ಅರಮನೆ ಆವರಣ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಇಂಪ್ಲಿಕೇಷನ್ಸ್ ಆಫ್ ಐಪಿಆರ್ ಇನ್ ರಿಸರ್ಚ್ ಅಂಡ್ ಇನ್ನೋವೇಷನ್ ಕುರಿತು ರಾಷ್ಟ್ರ ಮಟ್ಟದ ಕಾರ್ಯಾಗಾರ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಹಾಲ್, ಬೆಳಗ್ಗೆ 10ಕ್ಕೆ.

■ **ನೆರಳು ಚಾರಿಟಬಲ್ ಟ್ರಸ್ಟ್ :** ರಾಷ್ಟ್ರಕವಿ ಕುವೆಂಪು ಅವರ 121ನೇ ಜನ್ಮ ದಿನಾಚರಣೆ, ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷ ಡಾ. ಅಮ್ಮಸಂದ್ರ ಸುರೇಶ್, ಅತಿಥಿಗಳು : ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಡಾ.ಎನ್. ಗಂಗಾಧರಪ್ಪ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್. ಶಿವರಾಮು, ಸ್ಥಳ: ಕುತ್ತೆತ್ತೂರು ಸೀತಾರಾಮ ರಾವ್ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ವಿಶ್ರಾಂತ ಉದ್ಯೋಗಿಗಳ ಸಂಘ, ಹಾರ್ಟ್ ಸಂಸ್ಥೆ, ಡಾ. ಅಗರವಾಲ್ ಕಣ್ಣಿನ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಶ್ರೀ ರಾಮಕೃಷ್ಣ ವಿದ್ಯಾಶಾಲೆ, ರಾಮಕೃಷ್ಣನಗರ, ಬೆಳಗ್ಗೆ 10.30 ರಿಂದ.

■ **ಶ್ರೀ ವೇದಮಾತಾ ಗುರುಕುಲ ಧಾರ್ಮಿಕ ದತ್ತಿ :** ಶ್ರೀ ವೇದವಾಗ್ದೇವಿ ಸರ್ವಮಂತ್ರ ಸಂಗ್ರಹ ಗ್ರಂಥ ಲೋಕಾರ್ಪಣೆ, ಪ್ರಮಾಣ ಪತ್ರ ವಿತರಣೆ, ಅಧ್ಯಕ್ಷತೆ : ಶ್ರೀ ವೇದಮಾತಾ ಗುರುಕುಲದ ಮಹಾಪೋಷಕ ರಾಮಾರಾಧ್ಯರು, ಉದ್ಘಾಟನೆ : ಮಹಾರಾಜ ಸಂಸ್ಕೃತ ಪಾಠಶಾಲೆ ನಿವೃತ್ತ ಪ್ರಾಧ್ಯಾಪಕ ವಿದ್ವಾನ್ ಲೋಕೇಶ್ ಆರಾಧ್ಯ, ಸನ್ಮಾನ : ಪುರೋಹಿತರಾದ ಎಂ. ರಾಜುಸ್ವಾಮಿ ಆರಾಧ್ಯ, ವಿದ್ವಾನ್ ಡಾ. ಎನ್. ಶಶಿಶೇಖರ ದೀಕ್ಷಿತ್ ಅವರಿಂದ ವಿಶೇಷ ಉಪನ್ಯಾಸ, ಗ್ರಂಥ ಬಿಡುಗಡೆ : ಶ್ರೀ ಸುಬ್ರಹ್ಮಣ್ಯೇಶ್ವರ ದೇವಸ್ಥಾನದ ಆಗಮಿಕ ವಿದ್ವಾನ್ ಬಾಲಸುಬ್ರಹ್ಮಣ್ಯಶಾಸ್ತ್ರಿಗಳು, ಪ್ರಮಾಣ ಪತ್ರ ವಿತರಣೆ : ವಿದ್ವಾನ್ ಮೂಗೂರು ಮಧುದೀಕ್ಷಿತ್, ದಿನದರ್ಶಿಕೆ ಬಿಡುಗಡೆ : ರೋಟರಿ ಹೆರಿಟೇಜ್ ಕ್ಲಬ್ ಅಧ್ಯಕ್ಷ ಆರ್. ರಾಜೇಶ್, ಸ್ಥಳ:ನಟರಾಜ ಕಲ್ಯಾಣ ಮಂಟಪ, ಶಂಕರ ಮಠದ ಹತ್ತಿರ, ಬೆಳಗ್ಗೆ 10.30ಕ್ಕೆ.

■ **ಜನಸ್ಪಂದನ ಟ್ರಸ್ಟ್ :** ರಾಷ್ಟ್ರಕವಿ ಕುವೆಂಪು 120ನೇ ಜಯಂತ್ಯೋತ್ಸವ, ಪ್ರಾಸ್ತಾವಿಕ ನುಡಿ : ಜನಸ್ಪಂದನ ಟ್ರಸ್ಟ್ ಅಧ್ಯಕ್ಷ ಎಂ.ಕೆ. ಸೋಮಶೇಖರ್, ಪುಷ್ಪಾರ್ಚನೆ : ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಅಧ್ಯಕ್ಷತೆ : ಸಾಹಿತಿ ಡಾ. ಬಂಜಗೆರೆ ಜಯಪ್ರಕಾಶ್, ಕುವೆಂಪು ಕುರಿತು ಉಪನ್ಯಾಸ: ನಿವೃತ್ತ ಪ್ರಾಧ್ಯಾಪಕ ಪ್ರೊ. ಎನ್. ಬೋರಲಿಂಗಯ್ಯ, ಉಪಸ್ಥಿತರು : ಸಾಹಿತಿ ಪ್ರೊ. ಕಾಳೇಗೌಡ ನಾಗವಾರ, ಹಿರಿಯ ರಂಗಕರ್ಮಿ ಜನಾರ್ಧನ್, ಮುಖ್ಯ ಅತಿಥಿಗಳು : ಎಚ್.ಎ. ವೆಂಕಟೇಶ್, ಪ್ರೊ. ಕೆ. ಕಾಳಚನ್ನೇಗೌಡ, ಡಾ. ಆರ್.ಎಂ. ಉಗ್ರನರಸಿಂಹೇಗೌಡ, ಈ. ಧನಂಜಯ ಎಲಿಯೂರು, ಡಾ. ಅಮ್ಮಸಂದ್ರ ಸುರೇಶ್, ಕಮಲ್ ಗೋಪಿನಾಥ್, ಪ್ರೊ. ಭದ್ರಪ್ಪ ಹೆನ್ಲಿ, ಎಸ್.ಜಿ. ರಮೇಶ್, ಡಾ. ಕೃಷ್ಣ ಜನಮನ, ಸ್ಥಳ: ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ಅಂಬೇಡ್ಕರ್ ಸೇನೆ :** ಡಾ. ಬಿ.ಆರ್. ಅಂಬೇಡ್ಕರ್ ಅವರ 68ನೇ ಪರಿನಿಬ್ಬಾಣ ದಿನದ ಅಂಗವಾಗಿ ವಿಚಾರ ಸಂಕಿರಣ, ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಸಾನ್ನಿಧ್ಯ : ಬೋಧಿರತ್ನ ಭಂತೇಜಿ, ಉದ್ಘಾಟನೆ : ಶಾಸಕ ಜಿ.ಡಿ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಮಾಜಿ ಮೇಯರ್ ಪುರುಷೋತ್ತಮ್, ಚಿಕ್ಕಜವರಪ್ಪ, ನಾಗೇಂದ್ರ ಬಸವಟ್ಟಿಗೆ, ಸಿದ್ದರಾಜು ಹನುಮನಪುರ, ರವಿಕುಮಾರ್ ಹೂವಿನಕೊಳ, ಆರ್. ಗಣೇಶ್, ಕಂದೇಗಾಲ ಶ್ರೀನಿವಾಸ್, ರಾಜು ತರಿಕಲ್, ಎಂ. ನಾಗರಾಜು, ವಿ.ಸಿ. ಶ್ರೀನಿವಾಸಮೂರ್ತಿ, ಸುರೇಶ್ ಜೀಯಾರ, ಮೊಹಮ್ಮದ್ ಅಕ್ಬರ್ ಅಲೀಂ, ಸ್ಥಳ: ರೋಟರಿ ಭವನ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಶ್ರೀ ಮಹಾಲಿಂಗೇಶ್ವರ ದೇವಾಲಯ :** ಕೆ. ಹೆಮ್ಮನಹಳ್ಳಿಯ ಚಾರಿತ್ರಿಕ ಹಾರ್ಮೋನಿಯಂ ಶಿಕ್ಷಕರೂ ನಾಟಕದ ಗುರುಗಳಾಗಿದ್ದ ದಿವಂಗತ ದೇವರಗುಡಿ ಶೆಟ್ಟಿ ಮತ್ತು ಮಾದೇವ ಶೆಟ್ಟಿ ಸ್ಮರಣಾರ್ಥ ಶ್ರೀ ಮಹಾಲಿಂಗೇಶ್ವರ ಕೃಪಾಪೋಷಿತ ನಾಟಕ ಮಂಡಳಿ ಕಲಾವಿದರಿಂದ ಬೆಳ್ಳಾವೆ ನರಹರಿಶಾಸ್ತ್ರಿ ವಿರಚಿತ ಶ್ರೀ ಕೃಷ್ಣಗಾರುಡಿ ಪೌರಾಣಿಕ ನಾಟಕ ಪ್ರದರ್ಶನ, ಆರ್. ಮಂಜುನಾಥ್ ಹೆಮ್ಮನಹಳ್ಳಿ–ಹಾರ್ಮೋನಿಯಂ, ವಾದ್ಯಗೋಷ್ಠಿ–ಕೂರ್ಗಳ್ಳಿ ಲೋಕೇಶ್ ತಂಡ, ಮಹಿಳಾ ಕಲಾವಿದರು – ಮೇರಿ ವಸಂತ, ಗೀತಾಂಜಲಿ, ಲಕ್ಷ್ಮಿ, ನಿರ್ದೇಶನ : ಜವರಶೆಟ್ಟಿ ಮತ್ತು ಚಾಮಶೆಟ್ಟಿ (ದಾಸರು), ಸ್ಥಳ: ಹೆಮ್ಮನಹಳ್ಳಿ ಶ್ರೀ ದೊಡ್ಡಮ್ಮತಾಯಿ ದೇವಸ್ಥಾನದ ಎದುರು, ಮಧ್ಯಾಹ್ನ 3 ರಿಂದ.

■ **ಕನ್ನಡದ್ ಕನ್ನಡಿ :** ವಿಶ್ವಚೇತನ, ಯುಗದ ಕವಿ ಕುವೆಂಪು ಜನ್ಮ ದಿನದ ಪ್ರಯುಕ್ತ ವಿಶ್ವಮಾನವ ವಿಚಾರ ಸಂಕಿರಣ, ಸ್ಥಳ: ದಿ ಹೆರಿಟೇಜ್ ಹೌಸ್, ಸರಸ್ವತಿಪುರಂ, ಸಂಜೆ 4 ರಿಂದ.

■ **ಆರಾಧ್ಯ ಮಹಾಸಭಾ :** ಹೊಸ ವರ್ಷದ ದಿನದರ್ಶಿಕೆ ಬಿಡುಗಡೆ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಭಾರತೀಯ ಜ್ಯೋತಿರ್ ವಿಜ್ಞಾನ ಸಂಸ್ಥೆಯ ಕೆ.ಜಿ. ಪುಟ್ಟಹೊನ್ನಯ್ಯ, ಸ್ಥಳ: ಆರಾಧ್ಯ ಮಹಾಸಭಾ, ಚಾಮುಂಡಿಪುರಂ, ಸಂಜೆ 4ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ರಾಮಕೃಷ್ಣ ಚರಿತೆ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಬೆಂಗಳೂರು ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್. ಶ್ರೀಧರನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಸನಾತನ ಸಭಾ, ಜಯನಗರ, ಸಂಜೆ 6.15ರಿಂದ.

■ **ಶ್ರೀ ಕೃಷ್ಣ ಟ್ರಸ್ಟ್, ಶ್ರೀ ಕೃಷ್ಣ ಮಿತ್ರ ಮಂಡಳಿ :** ಹಿರಿಯ ಸ್ವಾಮೀಜಿ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಆರಾಧನೆ ಪ್ರಯುಕ್ತ, ಜ್ಞಾನ ಯಜ್ಞ ಸಂಭ್ರಮ ಕಾರ್ಯಕ್ರಮದಡಿ ಪಲಿಮಾರು ಮಠದ ಸಂಸ್ಥಾನಾಧೀಶರಾದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರಿಂದ ಮಹಾಭಾರತದಲ್ಲಿ ಭೀಷ್ಮ ಪರ್ವ ಕುರಿತು ಪ್ರವಚನ, ಸ್ಥಳ: ಶ್ರೀ ಕೃಷ್ಣಧಾಮ, ಸಾಹುಕಾರ್ ಚೆನ್ನಯ್ಯ ರಸ್ತೆ, ಸರಸ್ವತಿಪುರಂ, ಸಂಜೆ 6.30 ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮೈಸೂರು ಮಹಾರಾಣಿ ಕಲಾ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿ, ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ವಿದ್ವನ್ಮಣಿ, ದರ್ಶನ ವಾರಿಧಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ

■ **ನಿರಂತರ ಫೌಂಡೇಷನ್ :** ನಿರಂತರ ರಂಗ ಉತ್ಸವ, ಉಪಸ್ಥಿತರು : ನಿವೃತ್ತ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಪ್ರಭಾಕರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಸಂಜೆ 7ಕ್ಕೆ ಸಮುದಾಯ ರಾಯಚೂರು ಅಭಿನಯದ ರಕ್ತ ವಿಲಾಪ ನಾಟಕ ಪ್ರದರ್ಶನ, ರಚನೆ : ಡಾ. ವಿಕ್ರಮ ವಿಸಾಜಿ, ನಿರ್ದೇಶನ : ಪ್ರವೀಣ್ ರೆಡ್ಡಿ ಗುಂಜಹಳ್ಳಿ, ಸ್ಥಳ: ಕಿರುರಂಗ ಮಂದಿರ, ರಂಗಾಯಣ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ರೋಹಿಣಿ ಸುಧಾಮ್ ಮತ್ತು ಡಾ.ಪಿ.ಎಸ್. ಮುರಳೀಧರ್, ವ್ಯಾಖ್ಯಾನ–ಡಾ. ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಹಾದಿಯಲ್ಲಿ ಕಂಡ ಮುಖ– ಬಾನುಲಿ ಸರಣಿ, ಜನಪದ ಗಾಯಕಿ, ಆದಿವಾಸಿ ಕಲೆಗಳ ಅಭ್ಯಾಸಕಿ ಸುಮಾ ಪ್ರಶಾಂತ್ ಅವರೊಂದಿಗೆ ಸಂವಾದ. ಪ್ರಸ್ತುತಿ: ಅಬ್ದುಲ್ ರಶೀದ್, 9.05 ನಮ್ಮ ಆರೋಗ್ಯ–ಆಯಿಷ್ ಯಶೋಗಾಥೆ ಸರಣಿಯಲ್ಲಿ 'ವಾಕ್ ಸ್ತಂಭನ' ಮತ್ತು 'ಸಂವಹನ ತೊಂದರೆಗಳ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಚಿಕಿತ್ಸೆ' ಕುರಿತು ಕಾರ್ಯಕ್ರಮ, ಭಾಗವಹಿಸುತ್ತಾರೆ–ಡಾ. ಅಭಿಷೇಕ್.ಬಿ. ಪಿ, ದೀಪಿಕಾ.ಕೆ, ಮಹದೇವಪ್ಪ.ಕೆ.ವಿ, ವಿಜಯ್.ಎಂ, ವಂದನಾ. ಎನ್.ಕೆ, ವರ್ಷಾ.ಎನ್.ಕೆ ಮತ್ತು ನೀಲಮ್ಮ ಅಂಗಡಿ, ನಡೆಸಿಕೊಡುತ್ತಾರೆ: ಬೇಂದ್ರೆ ಮಂಜುನಾಥ್ ಮತ್ತು ದಿಗ್ವಿಜಯ್. ಬಿ., ಪ್ರಾಯೋಜಕರು–ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು, 9.35 ಚಿತ್ರಗೀತೆಗಳು, 10.00 ಕೇಳಿ ಗಿಳಿಗಳೇ–ಅರಿವು ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 KRISH -TRISH and Balty boy ನಾವು ಭಾರತೀಯರು 'ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ', 11.00 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಮಾನ್ಯ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿಯವರ ಮನದ ಮಾತು

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಪುಷ್ಪಾ. ವಿ.ಶಂಕರ್, 12.45 ಜನಪದ ಸಂಗೀತ –ಭಾಗ್ಯಮ್ಮ ಮತ್ತು ಸಂಗಡಿಗರಿಂದ ಗದ್ದೆ ಮಾಸ್ತಮ್ಮನ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, ನೀಲಿ ಕ್ರಾಂತಿ ಕುರಿತು ಮಾಹಿತಿ, 1.20 ಭಾವಗೀತೆಗಳು – ಎ.ಜೆ.ದಿವ್ಯಾ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ರಣಧೀರ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.45 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ರಿನಾ ಬಸು – ಹಾಡುಗಾರಿಕೆ, 4.45 ಚಿತ್ರಗೀತೆಗಳು, 6.51ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಟಿ.ವಿ. ವಿದ್ಯಾಶಂಕರ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಮನ್ ಕೀ ಬಾತ್–ಭಾರತದ ಜನತೆಯೊಂದಿಗೆ ಮಾನ್ಯ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ ರವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 9.15 ರಂಗಗೀತೆಗಳು–ಸ್ವಾಮಿಗೌಡ. ಬಿ.ಎಸ್.,9.30 Anugoonj, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ರಾಜ್ಯಶ್ರೀ ಜೋಸ್ಯಾರ್ ಶ್ರೀಕಾಂತ್ ಮತ್ತು ಐಶ್ವರ್ಯ ಮಣಿಕರ್ಣಿಕೆ–ಯುಗಳ ವೀಣಾ ವಾದನ

ಮೈಸೂರಲ್ಲಿ ವಿಜೃಂಭಣೆಯಿಂದ ನೆರವೇರಿದ ಇಸ್ಕಾನ್‌ನ ಶ್ರೀಕೃಷ್ಣ ಬಲರಾಮ ರಥಯಾತ್ರೆ



ಮೈಸೂರಿನಲ್ಲಿ ಶನಿವಾರ ಅಪಾರ ಭಕ್ತರ ನಡುವೆ ಇಸ್ಕಾನ್‌ನ ಶ್ರೀಕೃಷ್ಣ ಬಲರಾಮರ ರಥಯಾತ್ರೆ ವೈಭವದಿಂದ ನೆರವೇರಿತು.



ಇಸ್ಕಾನ್‌ನ ಶ್ರೀಕೃಷ್ಣ ಬಲರಾಮರ ರಥಯಾತ್ರೆಗೆ ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್ ಸೇರಿದಂತೆ ಇನ್ನಿತರ ಗಣ್ಯರು ರಥಯಾತ್ರೆಗೆ ಚಾಲನೆ ನೀಡಿದರು.

ಮೈಸೂರು,ಡಿ.28(ಪಿಎಂ)– ಇಸ್ಕಾನ್ ಮೈಸೂರು ವತಿಯಿಂದ ಹಮ್ಮಿಕೊಂಡಿದ್ದ ಶ್ರೀಕೃಷ್ಣ–ಬಲರಾಮರ ರಥಯಾತ್ರೆಯು ಅಪಾರ ಭಕ್ತರ ನಡುವೆ ಶನಿವಾರ ವಿಜೃಂಭಣೆಯಿಂದ ನೆರವೇರಿತು.

ಶ್ರೀಕೃಷ್ಣ–ಬಲರಾಮರ ವಿಗ್ರಹಗಳನ್ನು ಹೊತ್ತ ಅಲಂಕೃತ ಬೃಹತ್ ರಥವು ಮೈಸೂರಿನ ಹೃದಯ ಭಾಗದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿತು. ರಥದಲ್ಲಿ ಪ್ರತಿಷ್ಠಾಪಿಸಿದ್ದ ಶ್ರೀಕೃಷ್ಣ–ಬಲರಾಮರ ವಿಗ್ರಹಗಳನ್ನು ಕಂಡು ಭಕ್ತರು ಭಕ್ತಿಭಾವದ ಪರಾಕಾಷ್ಠೆ ಮೆರೆದರು. ಆ ಮೂಲಕ 27ನೇ ವರ್ಷದ ರಥಯಾತ್ರೆಯು ವೈಭವದಿಂದ ಜರುಗಿತು.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಇಸ್ಕಾನ್ ಮೈಸೂರು ಅಧ್ಯಕ್ಷ ಶ್ರೀಸ್ತೋಕ ಕೃಷ್ಣಸ್ವಾಮಿ ಅವರ ಸಾನ್ನಿಧ್ಯದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್ ಸೇರಿದಂತೆ ಇನ್ನಿತರ ಗಣ್ಯರು ರಥಯಾತ್ರೆಗೆ ಚಾಲನೆ ನೀಡಿದರು.

ಇದಕ್ಕೂ ಮುನ್ನ ಇಲ್ಲಿ ಹಮ್ಮಿಕೊಂಡಿದ್ದ ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಕೃಷ್ಣನ ಅನುಗ್ರಹವಿಲ್ಲದೇ ನಾವೇನೂ ಮಾಡಲು ಸಾಧ್ಯವಿಲ್ಲ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗದು ಎಂದು ಕೊಂಡಿದ್ದೆ. ಆದರೆ ಕೃಷ್ಣನ ಅನುಗ್ರಹ ದಿಂದ ಅದು ಸಾಧ್ಯವಾಗಿದೆ. ಸನಾತನ ಹಿಂದೂ ಧರ್ಮವನ್ನು ಉಳಿಸಿ ಬೆಳೆಸುವಂತಹ ಕಾರ್ಯಕ್ರಮ ಇದು. ಮಠ–ಮಾನ್ಯಗಳ ಇಂತಹ ಕಾರ್ಯಕ್ರಮಗಳಿಂದ ಅನೇಕ ಪ್ರತಿರೋಧದ ನಡುವೆಯೂ ಸನಾತನ ಹಿಂದೂ ಧರ್ಮ ಗಟ್ಟಿಯಾಗಿ ನಿಲ್ಲುವಂತಾಗಿದೆ ಎಂದು ತಿಳಿಸಿದರು.

ಮೈಸೂರು ಅನೇಕ ಪರಂಪರೆಗೆ ಸಾಕ್ಷಿಯಾಗಿದೆ. ಮೈಸೂರಿನ ಅನೇಕ ಮಠಗಳು ಸಂಸ್ಕೃತ ಹಾಗೂ ವೇದಾಧ್ಯಯನ ಹೇಳಿಕೊಡುತ್ತಿವೆ. ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನೂರಾರು ವಿದ್ಯಾರ್ಥಿಗಳಿಗೆ ಸಂಸ್ಕೃತ ಹೇಳಿಕೊಡಲಾಗುತ್ತಿದೆ. ಆ ಮೂಲಕ ನಮ್ಮ ಧರ್ಮ ಉಳಿಸಿ ಬೆಳೆಸಲು ಮಠಮಾನ್ಯಗಳು ತಮ್ಮದೇ ವಿಶಿಷ್ಟ ಕೊಡುಗೆ ನೀಡುತ್ತಿವೆ ಎಂದರು.

ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್ ಮಾತನಾಡಿ, ವರ್ಷವಿಡೀ ನಾವು ಕೃಷ್ಣನ ದರ್ಶನಕ್ಕಾಗಿ ದೇವಸ್ಥಾನಕ್ಕೆ ಭೇಟಿ ನೀಡುತ್ತೇವೆ. ಆದರೆ ವರ್ಷಕ್ಕೊಮ್ಮೆ ಕೃಷ್ಣ–ಬಲರಾಮರು ಮೈಸೂರಿನ ರಸ್ತೆಗಳಲ್ಲಿ ನಮ್ಮನ್ನು ನೋಡಲು ಬರುತ್ತಾರೆ. ಇದು ಈ ರಥಯಾತ್ರೆಯ ವಿಶೇಷ. ಇಸ್ಕಾನ್ ಸಂಸ್ಥಾಪಕ ಶ್ರೀಲ ಪ್ರಭುಪಾದರು 1967ರಲ್ಲಿ ಈ ರಥಯಾತ್ರೆಯನ್ನು ಅಮೆರಿಕದಲ್ಲಿ ಪ್ರಾರಂಭ ಮಾಡಿದರು ಎಂದು ಹೇಳಿದರು.

ಮಹಾಭಾರತವು ಇಡೀ ಪ್ರಪಂಚದಲ್ಲಿ ಲಕ್ಷ ಶ್ಲೋಕಗಳನ್ನು ಒಳಗೊಂಡ ಬೃಹತ್ ಗ್ರಂಥ. ಇದನ್ನು ವ್ಯಾಸ ಮಹರ್ಷಿ ರಚಿಸಿದರು. ಮಹರ್ಷಿ ವ್ಯಾಸರನ್ನು ವಿಷ್ಣುವಿನ ಇನ್ನೊಂದು ರೂಪವೆಂದು ಕರೆಯುವ ಶ್ಲೋಕವೊಂದು ಇದೆ. ಹಾಗಾಗಿ ಮಹಾಭಾರತ ವಿಷ್ಣುವಿನಿಂದ ರಚಿತವಾದ ಗ್ರಂಥ. ಇದು ಶ್ರೀಕೃಷ್ಣ ಚರಿತೆ. ಮಹಾಭಾರತದಲ್ಲಿ ಕೃಷ್ಣನ ಪಾತ್ರ ತೆಗೆದರೆ ಅಂತಹ ಮಹತ್ವವೇ ಇರುವುದಿಲ್ಲ. ಯುದ್ಧ ಬೇಡ ಸಾಕಾಗಿದ್ದೇನೆ ಎಂದು ಅರ್ಜುನ ಕೈಚೆಲ್ಲಿದಾಗ ಅವನಿಗೆ ಪೌರುಷವನ್ನು ತುಂಬಿ ಧರ್ಮಕ್ಕಾಗಿ ಬದುಕು ಎಂದು ಹೇಳಿಕೊಟ್ಟವನು ಕೃಷ್ಣ ಎಂದರು.

ಧರ್ಮದ ಬಗ್ಗೆ ಅಪಪ್ರಚಾರ ಮಾಡುವ ಸಂದರ್ಭದಲ್ಲಿ ನಾನು ಹುಟ್ಟಿ ಬರುತ್ತೇನೆಂದು ಕೃಷ್ಣ ಹೇಳಿದ್ದಾನೆ. ಆ ಮೂಲಕ ಸಜ್ಜನರ ರಕ್ಷಣೆ, ದುಷ್ಟರ ನಿರ್ನಾಮಕ್ಕಾಗಿ ನಾನು ಪ್ರಪಂಚದಲ್ಲಿ ಅಗತ್ಯವಿದ್ದಾಗ ಹುಟ್ಟಿ ಬರುತ್ತೇನೆಂದು ಹೇಳಿದ್ದು, ಇದು ಈ ಪ್ರಪಂಚಕ್ಕೆ ಕೊಟ್ಟ ದೊಡ್ಡ ಆಶ್ವಾಸನೆಯಾಗಿದೆ. ನಮ್ಮ ಜೀವನದಲ್ಲಿ ಕೃಷ್ಣನ ಶಕ್ತಿ–ಯುಕ್ತಿ ಮತ್ತು ಧರ್ಮವನ್ನು ಎಂದೂ ಮರೆಯಬಾರದು ಎಂದು ತಿಳಿಸಿದರು.

ದೇವಾಲಯ ತಲುಪಿ ಸಮಾಪ್ತಿ: ಚಾಮರಾಜ ಒಡೆಯರ್ ವೃತ್ತ, ದೊಡ್ಡ ಗಡಿಯಾರ ವೃತ್ತ, ಗಾಂಧಿ ಚೌಕ, ಚಿಕ್ಕ ಗಡಿಯಾರ ವೃತ್ತ, ಡಿ.ದೇವರಾಜ ಅರಸು ರಸ್ತೆ, ನಾರಾಯಣಶಾಸ್ತ್ರಿ ರಸ್ತೆ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತ ಸೇರಿದಂತೆ ಮೊದಲಾದ ರಸ್ತೆಗಳಲ್ಲಿ ಸಂಚರಿಸಿದ ರಥಯಾತ್ರೆಯು, ಜಯನಗರದ ಇಸ್ಕಾನ್ ದೇವಸ್ಥಾನ ತಲುಪಿ ಸಮಾಪ್ತಿಗೊಂಡಿತು. ಇಸ್ಕಾನ್ ಬೆಂಗಳೂರು ಉಪಾಧ್ಯಕ್ಷ ಶ್ರೀ ಶ್ರೀಧಾಮ ಕೃಷ್ಣ ದಾಸ, ಭಿಲಾಯಿ ಹರೇ ಕೃಷ್ಣ ಚಳವಳಿಯ ಅಧ್ಯಕ್ಷ ವ್ಯೋಮಪಾದ ದಾಸ, ಗುವಾಹಟಿ ಹರೇ ಕೃಷ್ಣ ಚಳವಳಿಯ ಜನಾರ್ಧನ ದಾಸ, ಆಂಧ್ರಪ್ರದೇಶದ ವಿಜಯವಾಡದ ಹರೇ ಕೃಷ್ಣ ಚಳವಳಿಯ ಅಧ್ಯಕ್ಷ ವಂಶೀಧರ ದಾಸ, ಇಸ್ಕಾನ್ ಮೈಸೂರು ಹಿರಿಯ ಉಪಾಧ್ಯಕ್ಷ ಕಾರುಣ್ಯ ಸಾಗರ ದಾಸ ಮತ್ತಿತರರು ಹಾಜರಿದ್ದರು.

ಬಾಂಗ್ಲಾದಲ್ಲಿ ಹಿಂಸೆ; ಮುಂದಿನ ದಿನಗಳಲ್ಲಿ ಕೃಷ್ಣನ ಶಕ್ತಿ ದರ್ಶನ

ಮಾಜಿ ಎಂಎಲ್‌ಸಿ ಗೋ.ಮಧುಸೂದನ್

ಮೈಸೂರು,ಡಿ.28(ಪಿಎಂ)– ಬಾಂಗ್ಲಾದೇಶದಲ್ಲಿ ಇಸ್ಕಾನ್‌ನವರಿಗೆ ಅಷ್ಟೊಂದು ಹಿಂಸೆ ಕೊಡುತ್ತಿದ್ದರು ಕೃಷ್ಣ ಏಕೆ ಏನು ಮಾಡಲಾಗುತ್ತಿಲ್ಲವೆಂಬ ಚರ್ಚೆ ನಡೆಯುತ್ತಿದೆ. ಆದರೆ ಕೃಷ್ಣ ಮೊದಲಿಗೆ ಕ್ಷಮೆ ನೀಡುತ್ತಾನೆ. ಆದಾಗ್ಯೂ ತಿದ್ದಿಕೊಳ್ಳದಿದ್ದರೆ ತನ್ನ ಶಕ್ತಿ ಪ್ರಯೋಗಿಸುತ್ತಾನೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್ ಹೇಳಿದರು. ಕೃಷ್ಣ ಬದುಕಿದ್ದಾಗಲೇ ಅಧರ್ಮಿಗಳಿಗೆ ತಿದ್ದಿಕೊಳ್ಳಲು ಸಾಕಷ್ಟು ಅವಕಾಶ ನೀಡಿದ್ದ. ಗುಜರಾತಿನಲ್ಲಿ ಕೃಷ್ಣನಿಗೆ ಸಂಬಂಧಿಸಿದಂತೆ ಒಂದು ಶಬ್ದ ಬಳಸುವುದೂ ಮಾತ್ರವಲ್ಲದೆ, ಆ ಶಬ್ದದ ಹೆಸರನ್ನು ಇಟ್ಟುಕೊಳ್ಳುತ್ತಾರೆ. ಏನೆಂದರೆ, ಕೃಷ್ಣನನ್ನು ಅಲ್ಲಿ 'ರಣಚೋಡ್' ಎಂದು ಕರೆಯುತ್ತಾರೆ. ಅಂದರೆ ಯುದ್ಧ ಬಿಟ್ಟು ಓಡಿ ಹೋದ ವ್ಯಕ್ತಿಯನ್ನು ರಣಚೋಡ್ ಎಂದು ಕರೆಯಲಾಗುತ್ತದೆ. ಇದರ ಮೂಲಾರ್ಥ ಕಾದು ಹೊಡೆಯುತ್ತೇನೆ ಎಂಬುದಾಗಿದೆ ಎಂದು ತಿಳಿಸಿದರು. ಸಿಂಹ ದಾಳಿ ವೇಳೆ ಎರಡು ಹೆಜ್ಜೆ ಹಿಂದೆ ಇಟ್ಟರೆ, ಅದು ಹಿಂದೇಟು ಹಾಕುತ್ತಿದೆ ಎಂದರ್ಥವಲ್ಲ. ಬದಲಿಗೆ ಅದು ಮತ್ತಷ್ಟು ಶಕ್ತಿಯುತವಾಗಿ ದಾಳಿ ಮಾಡುತ್ತದೆ. ಅಂತೆಯೇ ಕೃಷ್ಣನು ಮೊದಲಿಗೆ ಕ್ಷಮೆ ನೀಡುತ್ತಾನೆ. ಶಿಶುಪಾಲನಿಗೆ 101 ಬಾರಿ ಕ್ಷಮೆ ನೀಡಿದ್ದ. ಬಳಿಕ ತನ್ನ ಶಕ್ತಿ ಸಾಮರ್ಥ್ಯ ಪ್ರದರ್ಶಿಸಿದ್ದ. ಅದೇ ರೀತಿ ಬಾಂಗ್ಲಾದ ವಿಚಾರದಲ್ಲೂ ಕೃಷ್ಣ ಮುಂದಿನ ದಿನಗಳಲ್ಲಿ ತನ್ನ ಶಕ್ತಿ–ಯುಕ್ತಿ ಏನೆಂದು ತೋರಲಿದ್ದಾನೆ. ಕೃಷ್ಣ ಬೋಧನೆ ಇಡೀ ಪ್ರಪಂಚಕ್ಕೆ ಮಾರ್ಗದರ್ಶನವಾಗಲಿದೆ ಎಂದು ಹೇಳಿದರು.

ರಂಗಭೂಮಿ, ಸಂಗೀತದ ನಡುವೆ ಅವಿನಾಭಾವ ನಂಟು

ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ ಅಭಿಮತ



ನಿರಂತರ ರಂಗ ಉತ್ಸವದಲ್ಲಿ ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ ಮಾತನಾಡಿದರು. ಹಿಂದೂಸ್ತಾನಿ ಗಾಯಕ ಫೈಯಾಜ್ ಖಾನ್ ಚಿತ್ರದಲ್ಲಿದ್ದಾರೆ.

ಮೈಸೂರು, ಡಿ.28(ಎಸ್‌ಬಿಡಿ)– ರಂಗಭೂಮಿ ಹಾಗೂ ಸಂಗೀತದ ನಡುವೆ ಅವಿನಾಭಾವ ನಂಟಿದೆ ಎಂದು ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ ಅವರು ಹೇಳಿದರು.

ಮೈಸೂರಿನ ನಿರಂತರ ಫೌಂಡೇಷನ್ ವತಿಯಿಂದ ಕಿರುರಂಗಮಂದಿರದಲ್ಲಿ ನಡೆಯುತ್ತಿರುವ ನಿರಂತರ ರಂಗ ಉತ್ಸವದಲ್ಲಿ ಶನಿವಾರ ಉಸ್ತಾದ್ ಫೈಯಾಜ್ ಖಾನ್ ಅವರ 'ಸಂಗೀತ ಸಂಜೆ'ಗೆ ಚಾಲನೆ ನೀಡಿ ಮಾತನಾಡಿದ ಅವರು, ರಂಗಭೂಮಿಯೊಂದಿಗೆ ಸಂಗೀತ ಅವಿನಾಭಾವ ನಂಟು ಹೊಂದಿದೆ. ಬಿ.ವಿ.ಕಾರಂತರ ಕಾಲದಿಂದ ಸಂಗೀತವು ರಂಗಭೂಮಿಯ ಒಂದು ಭಾಗವಾಗಿದೆ ಎಂದರು.

ನಿರಂತರ ತಂಡ ರಂಗಭೂಮಿಯನ್ನು ಬದ್ಧತೆಯೊಂದಿಗೆ ಕಟ್ಟುತ್ತಿದೆ. ನಿರಂತರದ ನಾಟಕಗಳು ಮತ್ತು ಚಟುವಟಿಕೆಗಳು ಶಿಸ್ತು ಹಾಗೂ ಸಾಮಾಜಿಕ ಕಳಕಳಿಯಿಂದ ಕೂಡಿರುತ್ತವೆ. ಯುವ ಕಲಾವಿದರು ನಿರಂತರದೊಂದಿಗೆ ಹೆಜ್ಜೆ ಹಾಕುತ್ತಿರುವುದು ಸಂತಸದ ಸಂಗತಿ. ನಿರಂತರದ ಪ್ರಯೋಗಗಳು ಹೀಗೆಯೇ ನಿರಂತರವಾಗಿರಲಿ ಎಂದು ಹಾರೈಸಿದರು.

ಬಳಿಕ ಉಸ್ತಾದ್ ಫೈಯಾಜ್ ಖಾನ್ ಅವರು ಪಂಡಿತ್ ವೀರಭದ್ರಯ್ಯ ಹಿರೇಮಠ್(ಹಾರ್ಮೋನಿಯಂ) ಹಾಗೂ ಪಂಡಿತ್ ರಮೇಶ್ ಧನ್ನೂರ್(ತಬಲಾ) ಅವರ ವಾದ್ಯ ಸಹಕಾರದೊಂದಿಗೆ ಹಿಂದೂಸ್ತಾನಿ ಸಂಗೀತದ ರಸಧಾರೆ ಹರಿಸಿದರು. ಈ ವೇಳೆ ಪ್ರೊ.ಕಾಳೇಗೌಡ ನಾಗವಾರ, ಪ್ರೊ.ಕಾಳಚನ್ನೇಗೌಡ, ದೇವನೂರ ಬಸವರಾಜ್, ಡಾ.ನರೇಂದ್ರಸ್ವಾಮಿ, ಲೋಕೇಶ್ ಮೊಸಳೆ, ನಿರಂತರದ ಸುಗುಣ ಹಾಗೂ ಶ್ರೀನಿವಾಸ ಪಾಲಹಳ್ಳಿ ಮತ್ತಿತರರು ಉಪಸ್ಥಿತರಿದ್ದರು.

ವರುಣ ಕೆರೆಯಲ್ಲಿ 'ಪರಿಸರ ಪ್ರವಾಸೋದ್ಯಮ' ಅಭಿವೃದ್ಧಿ

10 ಕೋಟಿಯ ಡಿಪಿಆರ್ ರಾಜ್ಯ ಸರ್ಕಾರಕ್ಕೆ ಸಲ್ಲಿಕೆ

ಮೈಸೂರು, ಡಿ.28(ಜಿಎ)–ಈಗಾಗಲೇ ಪ್ರವಾಸಿಗರ ನೆಚ್ಚಿನ ತಾಣವಾಗಿರುವ ಮೈಸೂರು ಹೊರವಲಯದ ವರುಣ ಕೆರೆಗೆ ಮತ್ತಷ್ಟು ಮೆರುಗು ನೀಡಿ ಪರಿಸರದ ಅರಿವಿನ ಜೊತೆಗೆ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಪ್ರವಾಸೋದ್ಯಮ ಇಲಾಖೆಯು 10 ಕೋಟಿ ರೂ. ವೆಚ್ಚದಲ್ಲಿ ರೂಪು–ರೇಷೆ ಸಿದ್ಧಪಡಿಸಿಕೊಂಡಿದೆ.

ಮೈಸೂರಿಗೆ ಬರುವ ಪ್ರವಾಸಿಗರು ಮೈಸೂರಿನ ಅರಮನೆ, ಚಾಮುಂಡಿಬೆಟ್ಟ, ಕಾರಂಜಿಕೆರೆ, ಲಲಿತಮಹಲ್, ಕೆಆರ್‌ಎಸ್, ರಂಗನತಿಟ್ಟು ಹೀಗೆ ಅನೇಕ ಸ್ಥಳಗಳನ್ನು ವೀಕ್ಷಿಸುವುದು ಸಾಮಾನ್ಯ. ಆದರೆ, ಪರಿಸರದ ಅರಿವು ಮತ್ತು ಜಲಕ್ರೀಡೆಗಾಗಿ ಸೂಕ್ತ ವ್ಯವಸ್ಥೆ ಜೊತೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಪ್ರವಾಸೋದ್ಯಮ ಇಲಾಖೆಯೂ ವರುಣ ಕೆರೆಯಲ್ಲಿ 'ಪರಿಸರ ಪ್ರವಾಸೋದ್ಯಮ' ಉತ್ತೇಜಿಸಲು ಮುಂದಾಗಿದೆ. ಮೈಸೂರು ನಗರದಿಂದ 15 ಕಿ.ಮೀ. ದೂರದಲ್ಲಿರುವ ವರುಣ ಕೆರೆ ಬೋಟಿಂಗ್ ಪ್ರಿಯರ ನೆಚ್ಚಿನ ತಾಣವಾಗಿದೆ. ಕಳೆದ ಕೆಲವು ವರ್ಷಗಳಿಂದ ಖಾಸಗಿ ಸಂಸ್ಥೆಯವರು ವರುಣ ಕೆರೆಯಲ್ಲಿ ನಡೆಸುತ್ತಿರುವ ಜಲಕ್ರೀಡೆಗಳು ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಇದಕ್ಕೆ ಮತ್ತಷ್ಟು ಮೆರುಗು ನೀಡಲು ಪ್ರವಾಸೋದ್ಯಮ ಇಲಾಖೆ ಕಾವೇರಿ ನೀರಾವರಿ ನಿಗಮದ ಮೂಲಕ ವರುಣ ಕೆರೆ ಅಭಿವೃದ್ಧಿಗೆ 5 ಕೋಟಿ ರೂ. ಹಾಗೂ ಕೆರೆ ಹೊರಗೆ ಅಗತ್ಯ ಮೂಲಸೌಲಭ್ಯ ಕಲ್ಪಿಸಲು 5 ಕೋಟಿ ರೂ.ಗಳ ಡಿಪಿಆರ್ ಪ್ರತ್ಯೇಕವಾಗಿ ಸಿದ್ಧಪಡಿಸಿ ರಾಜ್ಯ ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿದೆ.

ವರುಣ ಕೆರೆಯೂ 166 ಎಕರೆ ವಿಸ್ತೀರ್ಣ ಹೊಂದಿದೆ. ಆದರೆ, ಕೆರೆಗೆ ತ್ಯಾಜ್ಯ ನೀರು ಸೇರ್ಪಡೆಯಾಗುತ್ತಿದೆ. ಇದನ್ನು ತಡೆಗಟ್ಟುವ ಉದ್ದೇಶದಿಂದ ಪ್ರವಾಸೋದ್ಯಮ ಇಲಾಖೆ 5 ಕೋಟಿ ರೂ. ವೆಚ್ಚದಲ್ಲಿ ಡಿಪಿಆರ್ ಸಿದ್ಧಪಡಿಸಿದ್ದು, ಅದರಲ್ಲಿ ಕೆರೆಗೆ ಸುರಕ್ಷತಾ ವಾಲ್ ಅಳವಡಿಸುವುದು, ಜತೆಗೆ ಒಳಚರಂಡಿ ನೀರು ಸೇರದಂತೆ ನೂತನ ತಂತ್ರಜ್ಞಾನ ಅಳವಡಿಸುವುದು ಪ್ರಮುಖ ಉದ್ದೇಶವಾಗಿದೆ. ಮತ್ತೊಂದೆಡೆ ಈ ಕೆರೆಗೆ ಈಗಾಗಲೇ ಸಾಕಷ್ಟು ಹಕ್ಕಿಗಳು ಬರುತ್ತಿದ್ದು, ಇವುಗಳ ಸಂಖ್ಯೆ ಹೆಚ್ಚಾದರೆ, ರಂಗನತಿಟ್ಟಿನಂತೆ ಇಲ್ಲಿಯೂ ಜನ ಪಕ್ಷಿ ವೀಕ್ಷಣೆ ಮಾಡಬಹುದು. ಬಾಕಿ 5 ಕೋಟಿ ವೆಚ್ಚದಲ್ಲಿ ಕೆರೆಯ ಹೊರಗೆ ಪ್ರವೇಶ ದ್ವಾರದಲ್ಲಿ ಕಮಾನು ಮತ್ತು ಗೇಟು ನಿರ್ಮಾಣ ಮಾಡುವುದು, ಕುಳಿತುಕೊಳ್ಳಲು ಕಲ್ಲು ಬೆಂಚು, ಮಕ್ಕಳಿಗಾಗಿ ಪರಿಸರ ಪಾರ್ಕ್ ನಿರ್ಮಾಣ, ಇಂಟರ್‌ಲಾಕಿಂಗ್ ಟೈಲ್ಸ್‌ನಿಂದ ಪಾರ್ಕಿಂಗ್ ವ್ಯವಸ್ಥೆ, ಸುರಕ್ಷತೆ ದೃಷ್ಟಿಯಿಂದ ಫೆನ್ಸಿಂಗ್ ಅಳವಡಿಕೆ, ವಾಕಿಂಗ್ ಬ್ರಿಡ್ಜ್ ಮಾಡುವ ಬಗ್ಗೆಯೂ ಪ್ರಸ್ತಾಪವಿದೆ.

ವರುಣ ಕೆರೆಯನ್ನು ಪ್ರಾಯೋಗಿಕವಾಗಿ ಪರಿಸರ ಪ್ರವಾಸೋದ್ಯಮ ಅಡಿ ಅಭಿವೃದ್ಧಿಪಡಿಸಿ, ಯಶಸ್ವಿಯಾದರೆ ನಗರದ ಹೆಬ್ಬಾಳ ಕೆರೆ, ಲಿಂಗಾಂಬುದಿಕೆರೆ ಸೇರಿದಂತೆ ಇತರ ಕೆರೆಗಳನ್ನು ಇದೇ ರೀತಿ ಅಭಿವೃದ್ಧಿಪಡಿಸಬಹುದು. ಆಯಾ ಭಾಗದ ಜನರು ಇಂತಹ ಕಡೆ ಹೊತ್ತು ಕಳೆಯಲು ಅನುಕೂಲವಾಗುತ್ತದೆ ಎಂಬುದು ಪ್ರವಾಸೋದ್ಯಮ ಇಲಾಖೆಯ ಚಿಂತನೆಯಾಗಿದೆ.



ಇತ್ತೀಚೆಗೆ ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ಮತ್ತು ಅಧಿಕಾರಿಗಳು ವರುಣ ಕೆರೆಗೆ ಭೇಟಿ ನೀಡಿ, ನೂತನ ಯೋಜನೆಯ ಕುರಿತು ಚರ್ಚಿಸಿದರು.

“ ಪ್ರವಾಸೋದ್ಯಮ ಇಲಾಖೆ ಹಾಗೂ ಕಾವೇರಿ ನೀರಾವರಿ ನಿಗಮದ ವತಿಯಿಂದ 10 ಕೋಟಿ ರೂ. ವೆಚ್ಚದ ಡಿಪಿಆರ್ ಸಿದ್ಧಪಡಿಸಿ, ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗಿದೆ. ಸರ್ಕಾರದ ಹಸಿರು ನಿಶಾನೆ ಸಿಕ್ಕ ನಂತರ ಈ ಯೋಜನೆ ಆರಂಭವಾಗಲಿದೆ. ಈಗಾಗಲೇ ವರುಣ ಕೆರೆಯಲ್ಲಿ ಖಾಸಗಿ ಸಂಸ್ಥೆಯವರು ಜಲಕ್ರೀಡೆ ಮೂಲಕ ಪ್ರವಾಸಿಗರನ್ನು ಆಕರ್ಷಿಸಿದ್ದಾರೆ. ಕೆರೆ ಅಭಿವೃದ್ಧಿ ಮತ್ತು ಹೊರಭಾಗದಲ್ಲಿ ಸೂಕ್ತ ವ್ಯವಸ್ಥೆ ಕಲ್ಪಿಸಿದ ನಂತರ ನಿರ್ವಹಣೆಗಾಗಿ ಟೆಂಡರ್ ಪ್ರಕ್ರಿಯೆ ನಡೆಸಲಾಗುತ್ತದೆ.



–ಎಂ.ಕೆ.ಸವಿತಾ, ಜಂಟಿ ನಿರ್ದೇಶಕಿ, ಪ್ರವಾಸೋದ್ಯಮ ಇಲಾಖೆ

“ ಜಿಲ್ಲಾ ಪ್ರವಾಸೋದ್ಯಮ ಪ್ರಚಾರ ಮಂಡಳಿ(ಡಿಟಿಪಿಸಿ) ವತಿಯಿಂದ ನಮಗೆ 10 ವರ್ಷಕ್ಕೆ ಗುತ್ತಿಗೆ ನೀಡಿದ್ದಾರೆ. ಪ್ರತಿ ತಿಂಗಳು 6 ಸಾವಿರಕ್ಕೂ ಹೆಚ್ಚು ಮಂದಿ ಭೇಟಿ ನೀಡುತ್ತಿದ್ದಾರೆ. ಮತ್ತಷ್ಟು ಪ್ರವಾಸಿಗರನ್ನು ಸೆಳೆಯಲು ಈಗಾಗಲೇ ಇರುವ ಜಲ ಕ್ರೀಡಾ ಚಟುವಟಿಕೆಗಳ ಜೊತೆಗೆ ಜಿಪ್ ಲೈನ್, ಸ್ಕೈ ಸೈಕಲ್ ಸೇರಿಸುವ ಉದ್ದೇಶವಿತ್ತು. ಆದರೆ, ಕೆರೆ ಕಲುಷಿತವಾಗಿರುವ ಹಿನ್ನೆಲೆಯಲ್ಲಿ ಅದನ್ನು ಕೈಬಿಡಲಾಗಿದೆ. ಈಗ ಪ್ರವಾಸೋದ್ಯಮ ಇಲಾಖೆ ಮತ್ತು ಕಾವೇರಿ ನೀರಾವರಿ ನಿಗಮ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸರ್ಕಾರಕ್ಕೆ ಸಲ್ಲಿಸಿರುವ ಡಿಪಿಆರ್ ಅನುಮೋದನೆಗೊಂಡರೆ, ವರುಣ ಕೆರೆಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಲಿದೆ.

–ಅಬ್ದುಲ್ ಅಲೀಮ್, ಜಲಕ್ರೀಡಾ ಸಂಸ್ಥೆ ಮುಖ್ಯಸ್ಥ, ಔಟ್ ಬ್ಯಾಕ್ ವರುಣ



ಏಳು ದಿನಗಳ ಶೋಕಾಚರಣೆ ಹಿನ್ನೆಲೆ

ಹೊಸ ವರ್ಷಾಚರಣೆ ಸಂಬಂಧ ಸರ್ಕಾರದ ಮಾರ್ಗಸೂಚಿ ನಿರೀಕ್ಷೆ

ಮೈಸೂರು, ಡಿ. 28(ಆರ್‌ಕೆ)– ಮಾಜಿ ಪ್ರಧಾನಿ ಡಾ. ಮನ್‌ಮೋಹನ್ ಸಿಂಗ್ ಅವರ ನಿಧನದಿಂದಾಗಿ ಕೇಂದ್ರ ಸರ್ಕಾರವು 7 ದಿನಗಳ ಶೋಕಾಚರಣೆ ಘೋಷಿಸಿರುವುದರಿಂದ ಹೊಸ ವರ್ಷಾಚರಣೆಗೆ ಅವಕಾಶ ನೀಡುವ ಸಂಬಂಧ ರಾಜ್ಯ ಸರ್ಕಾರದ ಮಾರ್ಗಸೂಚಿಯನ್ನು ನಿರೀಕ್ಷಿಸುತ್ತಿದ್ದೇವೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ದೇಶದಾದ್ಯಂತ ಮಾಜಿ ಪ್ರಧಾನಮಂತ್ರಿಗಳಿಗೆ ನಿಧನದ ಹಿನ್ನೆಲೆಯಲ್ಲಿ ಶೋಕ ಆಚರಿಸುತ್ತಿರುವುದರಿಂದ 2025ನೇ ವರ್ಷ ಬರಮಾಡಿಕೊಳ್ಳಲು ಔತಣ ಕೂಟ, ಪಾರ್ಟಿಗಳು, ನೃತ್ಯ, ಡಿಜೆ ಸಂಗೀತ ಕಾರ್ಯಕ್ರಮಗಳಿಗೆ ಅವಕಾಶ ನೀಡಬೇಕೇ, ಬೇಡವೇ. ಅವಕಾಶ ಕಲ್ಪಿಸಿದರೆ ಯಾವ ಕ್ರಮ ಅನುಸರಿಸಬೇಕು. ನಿಬಂಧನೆ, ನಿರ್ಬಂಧಗಳೇನು ಎಂಬುದರ ಬಗ್ಗೆ ಸರ್ಕಾರ ಎರಡು ದಿನಗಳಲ್ಲಿ ಮಾರ್ಗಸೂಚಿ ನೀಡುವುದಾಗಿ ಮಾಹಿತಿ ಬಂದಿದೆ. ಅದರಂತೆ ನಾವು ಮೈಸೂರಲ್ಲಿ ಕ್ರಮ ವಹಿಸಬೇಕಾಗುತ್ತದೆ ಎಂದು ಪೊಲೀಸ್ ಆಯುಕ್ತರು ತಿಳಿಸಿದರು. ಈಗಾಗಲೇ ಹೋಟೆಲು ಮಾಲೀಕರು, ವ್ಯವಸ್ಥಾಪಕರನ್ನು ಕರೆದು ಸಭೆ ಮಾಡಿದ್ದೇವೆ. ಹೊಸ ವರ್ಷಾಚರಣೆಗೆ ಎಲ್ಲಾ ಹೋಟೆಲು ರೂಂಗಳು ಬುಕ್ ಆಗಿವೆ. ಸಿದ್ಧತೆಯನ್ನೂ ಮಾಡಿರುವುದರಿಂದ ಈ ಹಂತದಲ್ಲಿ ನ್ಯೂ ಇಯರ್ ಪಾರ್ಟಿ ಮಾಡಲು ಅವಕಾಶ ನೀಡದಿದ್ದರೆ ತೊಂದರೆಯಾಗುವುದಲ್ಲದೇ, ಪ್ರವಾಸೋದ್ಯಮದ ಮೇಲೂ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂಬ ಅಭಿಪ್ರಾಯ ಬಂದಿದೆಯಾದರೂ, ಸರ್ಕಾರದ ಮಾರ್ಗಸೂಚಿ ಬರದೇ ನಾವು ಏನನ್ನೂ ಹೇಳಲು ಸಾಧ್ಯವಿಲ್ಲ ಎಂದು ಅವರು ತಿಳಿಸಿದರು.



ಸೀಮಾ ಲಾಟ್ಕರ್

ಮೈಸೂರು ನಗರದಾದ್ಯಂತ ಮುಂಜಾಗ್ರತೆಯಾಗಿ ಡಿ.31ರಂದು ವ್ಯಾಪಕ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದ್ದು, ಕುಡಿದು ವಾಹನ ಚಾಲನೆ ಮಾಡುವುದು, ರಸ್ತೆಗಳಲ್ಲಿ ಅನಗತ್ಯ ಕಿರಿಕಿರಿ ಉಂಟು ಮಾಡುವುದು ಸೇರಿದಂತೆ ದುರ್ವರ್ತನೆ ಕಂಡು ಬಂದಲ್ಲಿ ಪ್ರಕರಣ ದಾಖಲಿಸಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸೀಮಾ ಲಾಟ್ಕರ್ ಎಚ್ಚರಿಕೆ ನೀಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಸಂದರ್ಶಕ : 20 ವರ್ಷ ವಯಸ್ಸಿನ ನೀನು 30 ವರ್ಷ ಅನುಭವ ಎಂದು ಹಾಕಿದ್ದೀಯಲ್ಲ?

ಅಭ್ಯರ್ಥಿ : ಓವರ್‌ಟೈಂ ಮಾಡುತ್ತಿದ್ದೆ.

ಮೈಸೂರು ಮಿತ್ರ

ಭಾನುವಾರ, 29 ಡಿಸೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಮಾತುಗಳು ಪರಸ್ಪರ ಬೇರ್ಪಡಿಸಲು ಇರುವುದಲ್ಲ, ಪರಸ್ಪರ ಸೇರಿಸಲು ಇರುವುದಾಗಿದೆ. –ಮಹಾತ್ಮ ಗಾಂಧೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಣದಷ್ಟು ಮಾತಿಗಿಂತ ಕಣದಷ್ಟು ಕೆಲಸ ಲೇಸು.

ನಿಮ್ಮ ಪತ್ರಗಳು

ಸಾರ್ವಜನಿಕರಿಗೆ ಉಪಯೋಗವಾಗದೆ ಖಾಲಿ ಬಿದ್ದಿರುವ ಜಾಗ



ಮಾನ್ಯರೆ,

ಸುಮಾರು 50 ವರ್ಷಗಳ ಹಿಂದೆ ಅಂದಿನ ಸಿಐಟಿಬಿಯಿಂದ ಮೈಸೂರಿನ ಗಂಗೋತ್ರಿ ಲೇಔಟ್‌ನಲ್ಲಿ ಸುಮಾರು ಮುಕ್ಕಾಲು ಎಕರೆ ಜಾಗವು, ಹೆಚ್.ಸಿ. ದಾಸಪ್ಪ ಸಾರ್ವಜನಿಕ ಟ್ರಸ್ಟ್‌ಗೆ ಮಂಜೂರಾಗಿತ್ತು, ಆದರೆ ಈ ಜಾಗವು 50 ವರ್ಷಗಳಿಂದಲೂ ಸಾರ್ವಜನಿಕರ ಸೇವೆಗೆ ಉಪಯೋಗಕ್ಕೆ ಬಾರದ ಕಾರಣ ಈ ಜಾಗವನ್ನು ವಾಪಸ್ ಮುಡಾಕ್ಕೆ ಹಿಂದಿರುಗಿಸುವಂತೆ ಆಯುಕ್ತರು ಆದೇಶ ಹೊರಡಿಸಿದ್ದಾಗ ಇದರ ವಿರುದ್ಧ ಅಂದು ಶಾಸಕರಾಗಿದ್ದ ದಿವಂಗತ ವಾಸು ಅವರು ತಮ್ಮ ಸ್ವಂತ ಖರ್ಚಿನಲ್ಲಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಈ ಜಾಗವನ್ನು ಮತ್ತೆ ಹೆಚ್.ಸಿ.ದಾಸಪ್ಪನವರ ಸೇವಾ ಟ್ರಸ್ಟ್‌ನಿಂದ ಕೈತಪ್ಪದಂತೆ ನೋಡಿಕೊಂಡರು. ಈ ಜಾಗವನ್ನು ಟ್ರಸ್ಟ್‌ಗೆ ಉಳಿಸಿ ಕೊಟ್ಟ ಯಶಸ್ಸು ದಿವಂಗತ ವಾಸು ಅವರಿಗೆ ಸಲ್ಲುತ್ತದೆ.

ಇದರಿಂದ ಎಚ್ಚೆತ್ತುಕೊಂಡ ಒಕ್ಕಲಿಗರ ಸಮುದಾಯದ ಕೆಲವು ನಿವೃತ್ತ ಹಿರಿಯ ಸರ್ಕಾರಿ ಅಧಿಕಾರಿಗಳು ಹೆಚ್.ಸಿ.ದಾಸಪ್ಪನವರ ಕನಸನ್ನು ನನಸು ಮಾಡಲು 'ಹೆಚ್ .ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಯ' ಹೆಸರಿನಲ್ಲಿ ಸಮುದಾಯದ ಬಡ ವಿದ್ಯಾರ್ಥಿಗಳಿಗೆ ಉಚಿತ ಹಾಸ್ಟೆಲ್ ಮತ್ತು ಉನ್ನತ ಶಿಕ್ಷಣದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲು ಕಟ್ಟಡದ ಶಂಕುಸ್ಥಾಪನೆ ಮಾಡಬೇಕೆಂದು ಹಗಲು ರಾತ್ರಿ ಶ್ರಮಿಸಿ ಲಕ್ಷಾಂತರ ರೂಪಾಯಿಗಳ ವಂತಿಗೆ ಸಂಗ್ರಹಿಸಿ, ಆದಿಚುಂಚನಗಿರಿ ಶಾಖಾ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮತ್ತು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರುಗಳ ಅಮೃತ ಹಸ್ತದಿಂದ 26.2.2024 ರಂದು ಭೂಮಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಈಗಲಾದರೂ ನಮ್ಮ ಸಮುದಾಯ ಎಚ್ಚೆತ್ತುಕೊಂಡು ಇಲ್ಲಿ ಬಡ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಸಮುದಾಯ ಕೆಲಸ ಮಾಡಲಿ. ಹೆಚ್.ಸಿ ದಾಸಪ್ಪನವರ ಆದರ್ಶ ಮತ್ತು ಆಶಯ ಈಡೇರಿಸುವಲ್ಲಿ ಕೆಲಸ ಮಾಡಿ ಎಂದು ಮುಂದೆ ನಿಂತು ಕೆಲಸ ಮಾಡುವವರ ಕಾಲೆಳೆಯಬೇಡಿ ಎಂದು ಒಕ್ಕಲಿಗರ ಸಮುದಾಯಕ್ಕೆ ಕರೆ ನೀಡಿದರು. ಆದರೆ ಇಲ್ಲಿ ಕಟ್ಟಡದ ಕಾಮಗಾರಿ ಆರಂಭವಾಗುವಷ್ಟರಲ್ಲೇ ಹೆಚ್.ಸಿ.ದಾಸಪ್ಪನವರ ಕುಟುಂಬದ ಸದಸ್ಯರು ಈ ಜಾಗ ನಮ್ಮ ಕೈ ತಪ್ಪಿಹೋಗಬಹುದೆಂಬ ಭಯದಿಂದ ಜಿಲ್ಲಾ ನೋಂದಣಾಧಿಕಾರಿಯವರಿಗೆ ಮನವಿ ಸಲ್ಲಿಸಿ, ಈ ಜಾಗಕ್ಕೂ ನಿವೃತ್ತ ಹಿರಿಯ ಸರ್ಕಾರಿ ಅಧಿಕಾರಿಗಳು, ಈಗ ಮಾಡಿಕೊಂಡಿರುವ ಸದಸ್ಯರಿಗೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದು ಅವರುಗಳ ಸದಸ್ಯತ್ವ ಹಣವನ್ನು ವಾಪಸ್ ನೀಡುವುದಾಗಿ ಹೇಳಿ ಕಾಮಗಾರಿ ಕೆಲಸವೇ ಪ್ರಾರಂಭವಾಗದಂತೆ ತಡೆಯೊಡ್ಡಿದರು. ಸದ್ಯಕ್ಕೆ ಈಗ ಜಾಗ ಖಾಲಿ ಬಿದ್ದಿದೆ. ಇದು ಒಕ್ಕಲಿಗರ ಹಣೆಬರಹವೇ ಇಷ್ಟು ಎಂದು ಇತರೆ ಸಮುದಾಯಗಳು ಹಾಸ್ಯ ಮಾಡುವಂತಾಗಿದೆ. ಸಮುದಾಯದ ಒಳಿತಿಗಾಗಿ ಏನಾದರೂ ಒಳ್ಳೆಯ ಕೆಲಸ ಮಾಡಲು ಹೊರಟರೆ ಅದೇ ಸಮುದಾಯದವರು ಕಾಲೆಳೆಯುತ್ತಾರೆ ಎಂಬುದಕ್ಕೆ ಇದೊಂದು ಉದಾಹರಣೆ.

ದಶಕಗಳಿಂದ ನನೆಗುದಿಗೆ ಬಿದ್ದಿದ್ದ ಈ ಜಾಗದಲ್ಲಿ, ಹೆಚ್.ಸಿ. ದಾಸಪ್ಪನವರ ಕುಟುಂಬದವರು ಏನೂ ಮಾಡದೇ ಈಗ ಈ ಜಾಗದಲ್ಲಿ ಬಡ ವಿದ್ಯಾರ್ಥಿಗಳಿಗೆ ಉಚಿತ ಹಾಸ್ಟೆಲ್ ಕಟ್ಟಡ ನಿರ್ಮಾಣ ಮಾಡಲು ಮುಂದೆ ಬಂದ ನಿವೃತ್ತ ಅಧಿಕಾರಿಗಳಿಗೂ ಕೆಲಸ ಮಾಡಲು ಬಿಡದೇ ಕೇವಲ ವೈಯಕ್ತಿಕ ಪ್ರತಿಷ್ಠೆಗಾಗಿ ಒಕ್ಕಲಿಗರ ಸಮುದಾಯದ ಮರ್ಯಾದೆಯನ್ನು ಬೀದಿಯಲ್ಲಿ ಹರಾಜು ಹಾಕಿದ್ದಾರೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ರಾಷ್ಟ್ರಕವಿ ಕುವೆಂಪು ಪ್ರತಿಮೆ ಅಲಂಕರಿಸಿ

ಮಾನ್ಯರೆ,

ಮೈಸೂರಿನ ಕುವೆಂಪುನಗರದ ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತದ ಬಳಿ ರಾಷ್ಟ್ರಕವಿ ಕುವೆಂಪು ಅವರ ಪ್ರತಿಮೆ ಇದೆ. ಆ ಪ್ರತಿಮೆಯು ಬೆಳಕಿಲ್ಲದೆ ಕತ್ತಲೆಯಿಂದ ಕೂಡಿರುತ್ತದೆ. ರಾಷ್ಟ್ರಕವಿ ಕುವೆಂಪು ಅವರು ಎಲ್ಲೆಡೆ ಕನ್ನಡದ ಕಂಪನ್ನು ಬೀರಿದ್ದಾರೆ. ಇವರಿಗೆ ನಾವು ತೋರಿಸುವ ಗೌರವ ಇದೇನಾ. ಇವರ ಜನ್ಮದಿನದ ಸಂದರ್ಭದಲ್ಲಿ ಇವರ ಪ್ರತಿಮೆಗೆ ದೀಪಾಲಂಕಾರದಿಂದ ಗೌರವಿಸಿ. ದಸರಾ ಪ್ರಯುಕ್ತ ಎಲ್ಲೆಡೆ ವಿದ್ಯುತ್ ದೀಪ ಅಲಂಕಾರದಿಂದ ವಿದ್ಯುತ್ ಶಕ್ತಿಯನ್ನು ವ್ಯಯ ಮಾಡುವ ನಾವು ನಮ್ಮ ರಾಷ್ಟ್ರಕವಿ ಕುವೆಂಪು ಅವರನ್ನು ಕತ್ತಲೆಯಲ್ಲಿ ಕುಳ್ಳಿರಿಸುವುದು ಸರಿಯೇ. ಆದ್ದರಿಂದ ಕುವೆಂಪು ಅವರ ಜನ್ಮದಿನೋತ್ಸವ ಅಂಗವಾಗಿ ತ್ವರಿತವಾಗಿ ಕುವೆಂಪುರವರ ಪ್ರತಿಮೆಗೆ ಬೆಳಕನ್ನು ಚೆಲ್ಲಿ ಎಲ್ಲರ ದೃಷ್ಟಿ ಅತ್ತ ಬೀಳುವ ಹಾಗೆ ಮಾಡಿ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಸಿಎಂ ಸಿದ್ದರಾಮಯ್ಯನವರು ನಿರ್ಲಿಪ್ತರೆ? ಒಂದು ಪ್ರಶ್ನೆ

ಮಾನ್ಯರೆ,

ಮೈಸೂರಿನಲ್ಲಿರುವ ಹಿಂದಿನ ಕೆ.ಆರ್.ಎಸ್. ರಸ್ತೆ ಅಥವಾ ಪ್ರಿನ್ಸೆಸ್ ರಸ್ತೆಯನ್ನು 'ಸಿದ್ದರಾಮಯ್ಯ ಆರೋಗ್ಯ ರಸ್ತೆ' ಎಂದು ನಾಮಕರಣ ಮಾಡಲು ಹೊರಟಿರುವುದು ನನಗಂತೂ ಸರಿ ಎನಿಸಲಿಲ್ಲ. ಇಲ್ಲಿ ಜೀವಂತ ವ್ಯಕ್ತಿಗಳ ಹೆಸರನ್ನು ನಗರದ ರಸ್ತೆಗಳಿಗೆ ಇಡುವುದು ಮೊದಲಿಗೆ ಎಳ್ಳಷ್ಟೂ ಸರಿ ಎನಿಸದು. ಸಾಲದ್ದಕ್ಕೆ ಈ ಬಲವಂತದ ನಾಮಕರಣ, ಅತ್ತ ಜನ ಏನೆಂದರೂ, ಅರಸೊತ್ತಿಗೆಯ ಬಗ್ಗೆ ಮೈಸೂರಿಗರಿಗೆ ಇರುವ ಅದಮ್ಯ ಪ್ರೀತಿ ಗೌರವಕ್ಕೆ ಬಗೆಯುವ ದ್ರೋಹ ಎಂದೇ ಇದನ್ನು ನಾವು ಭಾವಿಸುತ್ತೇವೆ. ಈಗ ನನಗೆ ಮಹಾ ಚೇತನ ಡಿವಿಜಿಯವರ ಕುರಿತಾದ ಪ್ರಸಂಗವೊಂದು ನೆನಪಿಗೆ ಬಂದಿತು.

ಒಮ್ಮೆ ಡಿವಿಜಿಯವರು ಬದುಕಿರುವಾಗ ಘನ ಸರ್ಕಾರವು ಬಹಳ ದೊಡ್ಡ ಪ್ರಶಸ್ತಿಯೊಂದನ್ನು ಅವರಿಗೆ ನೀಡುತ್ತದೆ. ಈ ಸಮಯದಲ್ಲಿ ಡಿವಿಜಿಯವರ ಅಭಿಮಾನಿಗಳು, ಅವರ ಮನೆಗೆ ತೆರಳಿ 'ಈ ಸಂದರ್ಭದಲ್ಲಿ ನಿಮ್ಮ ಮನೆಯ ಮುಂದಿನ ರಸ್ತೆಗೆ ನಿಮ್ಮ ಹೆಸರಿಡಬೇಕೆಂದಿದ್ದೇವೆ ಎನ್ನುವ ಪ್ರಸ್ತಾಪವನ್ನು ಮುಂದಿಡುತ್ತಾರೆ. ಆಗ ಬಹಳ ಸಂಕೋಚದಿಂದ ಡಿವಿಜಿಯವರು, ಅಯ್ಯಾ.. ನನ್ನ ಪಾಡಿಗೆ ಹೇಗೋ ನಾನು ಮರ್ಯಾದೆಯಿಂದ ಮನೆಯೊಳಗೆ ಜೀವಿಸುತ್ತಿರುವೆ. ದಯಮಾಡಿ ಬೀದಿಗೆ ನನ್ನ ಹೆಸರಿಟ್ಟು ನನ್ನನ್ನು ಎಲ್ಲರೂ ತುಳಿಯುವಂತೆ ಮತ್ತು ಎಳೆದಾಡುವಂತೆ ಮಾಡಬೇಡಿರಿ' ಎಂದು ವಿನಂತಿಸಿ, ಅವರ ಅಭಿಮಾನಿಗಳ ಪ್ರೀತಿಯ ಪ್ರಸ್ತಾಪವನ್ನು ನಯವಾಗಿ ತಿರಸ್ಕರಿಸಿದರಂತೆ. ಈ ಬಗೆಯ ನಿರ್ಲಿಪ್ತ ಮನಃಸ್ಥಿತಿಯನ್ನು ಸಿದ್ದರಾಮಯ್ಯನವರು ಪ್ರದರ್ಶಿಸಬಲ್ಲರೆ? ಕಾದು ನೋಡೋಣ.

–ನಾಗಮಂಗಲ ನರಸಿಂಹ ಮೂರ್ತಿ, ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಬಡವರ ಬಂಧು ಪರ್ವತೀ ಡಾಕ್ಟರ್

ಒಂದು ಕಾಲಕ್ಕೆ ಬಿಜಾಪುರ ಜಿಲ್ಲೆಗೆ ಒಳಗಾಗಿದ್ದ, ಈಗ ತಾನೇ ಒಂದು ಜಿಲ್ಲೆಯಾಗಿರುವ ಬಾಗಲಕೋಟೆಯು ಅನೇಕ ಮಹನೀಯರುಗಳಿಗೆ ಜನ್ಮ ನೀಡಿದ ಊರು. ದಾಸ ಸಾಹಿತ್ಯಕ್ಕೆ ಅಪೂರ್ವ ಕಾಣಿಕೆ ನೀಡಿರುವ ಪ್ರಸನ್ನ ವೆಂಕಟದಾಸರು, ನಾಟಕ ಕ್ಷೇತ್ರವು ಎಂದೂ ಮರೆಯಲಾರದ ಕೆರೂರು ವಾಸುದೇವಾಚಾರ್ಯರು, ಕಾಂಗ್ರೆಸ್ ಧುರೀಣರೂ, ನಿರ್ಭಯ ವ್ಯಕ್ತಿತ್ವದವರೂ ಆಗಿದ್ದ ಬೆಣ್ಣೂರ ವಕೀಲರು, ಡಾ. ಭೀಮರಾವ್ ಪರ್ವತೀಕರರು ಹೀಗೆ ಅನೇಕರು ಈ ಊರಿನಲ್ಲಿ ಅಳಿಸಲಾಗದ ತಮ್ಮ ಹೆಜ್ಜೆ ಗುರುತನ್ನು ಉಳಿಸಿ ಹೋಗಿದ್ದಾರೆ. ಬಾಗಲಕೋಟೆಯ ಬಹುತೇಕ ಭಾಗಗಳು ಆಲಮಟ್ಟಿ ಹಿನ್ನೀರಿನಲ್ಲಿ ಮುಳುಗಡೆ ಆಗಿವೆ. ಆ ಊರನ್ನು ಬಿಡಲಾಗದೆ ಇನ್ನೂ ಅಳಿದುಳಿದ ತುಂಡು ಊರಿಗೆ ಅಂಟಿಕೊಂಡವರು ಹಲವರಿದ್ದಾರೆ. ಬಾಗಲಕೋಟೆಯೊಡನೆ ಅವರ ಭಾವನಾತ್ಮಕ ನಂಟು ಅಂಥಹುದು. ಇಲ್ಲಿ ಅನೇಕ ದೇಶಭಕ್ತರು ಸ್ವಾತಂತ್ರ್ಯ ಚಳುವಳಿಯ ಹೋರಾಟದಲ್ಲಿ ಭಾಗವಹಿಸಿ, ಸದ್ದಿಲ್ಲದೆ ತೆರೆಮರೆಗೆ ಸರಿದಿದ್ದಾರೆ. ಇಲ್ಲಿಯ ಹೋಳಿಹುಣ್ಣಿಮೆ, ಸಂಕ್ರಮಣ, ನವರಾತ್ರಿಯಲ್ಲಿ ನಡೆಯುವ ಉತ್ಸವ, ಬನ್ನಿ ನೀಡುವಿಕೆ ಎಲ್ಲವೂ ಇಲ್ಲಿನ ಜನರಿಗೆ ಮರೆಯಲಾರದ ಅನುಭವ ನೀಡಿರುವಂಥವುಗಳೇ.

ನಾನು ಬಾಗಲಕೋಟೆಗೆ ಸೊಸೆಯಾಗಿ ಹೋದಾಗ ನಮ್ಮ ಅತ್ತೆಯ ಮನೆಯಲ್ಲಿ ಎಲ್ಲರೂ ಬಹಳ ಪ್ರೀತಿಯಿಂದ, ಅಂತಃಕರಣದಿಂದ, ಗೌರವದಿಂದ ನೆನಪು ಮಾಡಿಕೊಳ್ಳುತ್ತಿದ್ದ ಹೆಸರೆಂದರೆ ಪರ್ವತೀ ಡಾಕ್ಟರದು ಎಂಬುದು ನನ್ನ ಗಮನಕ್ಕೆ ಬಂತು. ಸಹಜವಾಗಿಯೇ ಅವರ ಬಗ್ಗೆ ನನ್ನ ಕುತೂಹಲ ಕೆರಳಿತು. ಊರಿನವರ ಬಾಯಲ್ಲಿಯೂ ಪರ್ವತೀ ಡಾಕ್ಟರರ ಬಗ್ಗೆ ಆಗಾಗ್ಗೆ ಕೇಳುತ್ತಲೇ ಇದ್ದೆ. ಅವರು ತೀರಿಕೊಂಡಾಗ ನಮ್ಮ ಮಾವನವರು ಹೇಗೆ ಕಟ್ಟೆಯ ಮೇಲೆ ಕುಳಿತೇ ಜೋರಾಗಿ ಅತ್ತರೆಂಬುದನ್ನು ಅತ್ತೆಯವರು ಹೇಳಿದರೆ, ಮಿಕ್ಕವರು ಅವರ ಅತೀ ಸ್ವಚ್ಛತೆಯ ಬಗ್ಗೆ, ರೋಗಿಯ ಬದುಕಿನ ಸಾವಿನ ಬಗ್ಗೆ ಖಚಿತವಾಗಿ ಹೇಳುತ್ತಿದ್ದ ಮಾತುಗಳನ್ನು, ಬಡವರ ಬಗ್ಗೆ ಅವರಿಗೆ ಇದ್ದ ಅಪಾರ ಕರುಣೆಯನ್ನು ಕುರಿತು ಹೇಳುತ್ತಿದ್ದರು. ಒಟ್ಟಾರೆ, ಎಲ್ಲರ ಬಾಯಿಂದ ತಪ್ಪದೇ ಬರುತ್ತಿದ್ದ ಮಾತೆಂದರೆ ಅಂಥಾ ಡಾಕ್ಟರು ಇನ್ನುಮುಂದೆ ನೋಡಲೂ ನಮಗೆ ಸಿಗಲಿಕ್ಕಿಲ್ಲ ಎಂಬುದು.

ಬಾಗಲಕೋಟೆಯ ಕಿಲ್ಲಾದಲ್ಲಿ ವಾಸವಾಗಿದ್ದ ಸಾಧಾರಣ ಕುಟುಂಬದಲ್ಲಿ ಐದನೆಯವರಾಗಿ 1886ರಲ್ಲಿ ಹುಟ್ಟಿದ ಭೀಮರಾವ ಪರ್ವತೀಕರರು ಓದಿನಲ್ಲಿ ಬಹಳ ಚುರುಕಾಗಿದ್ದವರು. ಆಗ ಮೆಟ್ರಿಕ್ ಪರೀಕ್ಷೆಗಳನ್ನು ಪುಣೆ ಎಜುಕೇಷನ್ ಬೋರ್ಡಿನವರೇ ನಡೆಸುತ್ತಿದ್ದುದು. ಇವರು ಪರೀಕ್ಷೆ ಬರೆಯಬೇಕಾದುದು ಜಿಲ್ಲಾ ಕೇಂದ್ರವಾಗಿದ್ದ ವಿಜಾಪುರದಲ್ಲಿ. ಉತ್ತಮ ಅಂಕಗಳೊಡನೆ ಉತ್ತೀರ್ಣನಾಗಿದ್ದ ಮಗನನ್ನು ತನ್ನಂತೆ ಕೋರ್ಟಿನಲ್ಲಿ ಹೇಗಾದರೂ ಒಂದು ನೌಕರಿಗೆ ಹಚ್ಚಬೇಕೆಂಬ ತಂದೆಯವರ ಆಸೆಯನ್ನು ಮೊಟಕುಗೊಳಿಸಿ, ಅವನನ್ನು ಡಾಕ್ಟರನ್ನಾಗಿಸಬೇಕೆಂಬ ತನ್ನ ಹಂಬಲವನ್ನು ಗೆಲ್ಲುವಂತೆ ಮಾಡಿದಾಕೆ ಅವರ ತಾಯಿ–ತುಳಸಾಬಾಯಿ. ಪತ್ನಿಯ ಒತ್ತಾಯಕ್ಕೆ ಮಣಿದು ಮಗನನ್ನು ಡಾಕ್ಟರ್ ಮಾಡಲು ಒಪ್ಪಿದರು ತಂದೆ ಜಯರಾಯರು. ಹೈದರಾಬಾದಿನ ನಿಜಾಮರು ಸ್ಕಾಲರ್‌ಶಿಪ್ಪನ್ನು ನೀಡುತ್ತಿದ್ದುದರಿಂದ ಇವರು ಹೈದರಾಬಾದಿಗೆ ಕಳುಹಿಸಲ್ಪಟ್ಟರು. ಗುರಿಯು ನಿಚ್ಚಳವಾಗಿತ್ತು. ಶ್ರಮದ ಹಾದಿಗೆ ಮೈ ಮನಸುಗಳೆರಡೂ ತಯಾರಿತ್ತು.

ಉತ್ತಮ ಡಾಕ್ಟರಾಗಿ ಹೊರಹೊಮ್ಮಿದ ಇವರು ಅಲ್ಲಿಯೇ ಖಾಸಗೀ ಪ್ರಾಕ್ಟೀಸನ್ನೂ ಆರಂಭಿಸಿದ್ದರು. ಅನಾರೋಗ್ಯದಿಂದ ಬಳಲುತ್ತಿದ್ದ ನಿಜಾಮರೇ ಒಮ್ಮೆ ಇವರಿಂದ ಗುಣಮುಖರಾಗಿ, ನಿಜಾಮರಿಂದ ಸನ್ಮಾನಿತರೂ ಆದರು. ಬಾಗಲಕೋಟೆಯ ಸೆಳೆತದ ಜೊತೆಗೆ ತಂದೆ ತಾಯಿಯರ ಒತ್ತಾಯವೂ ಸೇರಿ, ಹೈದರಾಬಾದನ್ನು ತೊರೆದು ಊರಿಗೆ ಮರಳಿದರು. ಅಕ್ಕನ ಮಗಳಾದ ವೆಂಕೂಬಾಯಿಯೊಡನೆ ಲಗ್ನವೂ ಆಯಿತು. ನಿಜಾಮರ ಸ್ಕಾಲರ್‌ಶಿಪ್‌ನ ಒಪ್ಪಂದದ ಮೇರೆಗೆ ಅವರು ಡಿಗ್ರಿ ಮುಗಿದ ನಂತರ ಬ್ರಿಟಿಷ್ ಸೇನೆಯಲ್ಲಿ ಸೇವೆ ಸಲ್ಲಿಸಬೇಕಾಗಿತ್ತು. ಅದರಂತೆ ಸೇನೆಗೆ ಭರ್ತಿಯಾದರು. ಮೊದಲ ಮಹಾಯುದ್ಧದ ಸಮಯ. ಇವರು ಆಫ್ರಿಕಾಗೆ ಹೋಗಬೇಕೆಂಬ ಆದೇಶ ಬಂದಿತು. ಸಂಪ್ರದಾಯಸ್ಥ ಬ್ರಾಹ್ಮಣರು ಸಮುದ್ರಯಾನ ಮಾಡುವಂತಿಲ್ಲ ಎಂಬುವರ ಮಾತಿಗೆ ಎಲ್ಲೇ ಹೋದರೂ ನಮ್ಮ ಆಚಾರ–ವಿಚಾರಗಳು, ಸಂಸ್ಕಾರ ನಮ್ಮನ್ನು ಕಾಪಾಡುತ್ತದೆ, ಹೊಸತನ್ನು ಕಲಿಯುವ ಅವಕಾಶವನ್ನು ಕಳೆದುಕೊಳ್ಳಬಾರದೆಂದು ಹೇಳಿ ಪತ್ನಿಯೊಡನೆ ಹಡಗನ್ನು ಏರಿಯೇಬಿಟ್ಟರು.

> ❝ ತನ್ನ ದೇಶಕ್ಕಾಗಿ ಏನನ್ನಾದರೂ ಮಾಡಬೇಕೆಂಬ ಹಂಬಲ, ತನ್ನ ಜನರಿಗೆ ವೈದ್ಯಕೀಯ ನೆರವನ್ನು ನೀಡಬೇಕೆಂಬ ಉತ್ಕಟೇಚ್ಛೆ. ಇಲ್ಲಿಂದ ಮುಂದೆ ಡಾ.ಭೀಮರಾವ್ ಪರ್ವತೀಕರರು ಬಾಗಲಕೋಟೆಯ, ಸುತ್ತಮುತ್ತಲಿನ ಜನರಿಗೆ ಸಾಕ್ಷಾತ್ ದೇವರೇ ಆದರೆಂದರೆ ಅತಿಶಯೋಕ್ತಿಯಲ್ಲ. ತಮ್ಮ ದವಾಖಾನೆಗೆ ಬಂದವರೆಲ್ಲರಿಗೂ ಒಂದೇ ಬಗೆಯ ಶುಶ್ರೂಷೆ. ಬಡವರಿಗೆ ಉಚಿತ ಔಷಧಿ. ಕಾದು ಕುಳಿತ ಜನರನ್ನು ನೋಡಿ, ಅವರಲ್ಲಿ ಶಾಲೆಗೆ ಹೋಗುವ ಮಕ್ಕಳಿದ್ದರೆ, ಅವರನ್ನು ಮೊದಲು ತಪಾಸಿಸುತ್ತಿದ್ದರು. ಅವರಿಂದ ಮತ್ತು ಶಿಕ್ಷಕರಿಂದ ಫೀಸು ತೆಗೆದುಕೊಳ್ಳುತ್ತಿರಲಿಲ್ಲ. ತಪ್ಪದೇ ಮೆಡಿಕಲ್ ಜರ್ನಲ್‌ಗಳನ್ನು ಓದಿ, ತಮ್ಮ ಕ್ಷೇತ್ರದ ಬೆಳವಣಿಗೆಯನ್ನು ಅರಿತಿರುತ್ತಿದ್ದರು.

ಕಯಾಂಬುನಲ್ಲಿ ಗಾಯಾಳು ಸೈನಿಕರ ಔಷಧೋಪಚಾರಕ್ಕೆ ಮೊದಲಿಟ್ಟರು. ತಮ್ಮ ರೋಗಿಗಳೆಂದರೆ ಅವರಿಗೆ ಇನ್ನಿಲ್ಲದ ಮಮತೆ. ಅವರ ಆರೈಕೆಯೇ ಇವರ ಬದುಕಿನ ಧ್ಯೇಯ ಎಂದರೂ ತಪ್ಪಿಲ್ಲ. ದುಡ್ಡಿಗಾಗಿ ಎಂದೂ ಹಂಬಲಿಸದ ಅವರು ಜನಸೇವೆಯಲ್ಲೇ ಜನಾರ್ಧನನನ್ನು ಕಂಡವರು. ಅದರಲ್ಲೇ ತಮ್ಮ ಸರ್ವಸ್ವವನ್ನು ಕಂಡವರು. ಯುದ್ಧಭೂಮಿಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಒಬ್ಬ ಹಿರಿಯ ಅಧಿಕಾರಿಯ ಶುಶ್ರೂಷೆಯನ್ನು ಇವರು ಮಾಡಿದ ರೀತಿಯು ಇಂಗ್ಲೆಂಡಿನ ಹೌಸ್ ಆಫ್ ಕಾಮನ್ಸ್‌ನಲ್ಲಿ ಉಲ್ಲೇಖಗೊಂಡು, ಅವರಿಗೆ ಪ್ರಶಂಸಾ ಪತ್ರ ಬರೆಯುವುದರಲ್ಲಿ ಕೊನೆಗಂಡಿತ್ತು. ಯುದ್ಧ ಮುಗಿದರೂ ಅವರಿಗೆ ಅಲ್ಲೇ ಇರಬೇಕೆಂಬ ಆಜ್ಞೆ, ಅದಾಗಲೇ ಭಾರತದಲ್ಲಿ ಸ್ವಾತಂತ್ರ್ಯದ ಕಿಡಿ ಹೊತ್ತ ತೊಡಗಿತ್ತು. ಆಫ್ರಿಕಾದಲ್ಲಿ ನಡೆಯುತ್ತಿದ್ದ ಗಾಂಧೀಜಿಯವರ ಮೀಟಿಂಗುಗಳಿಗೆ ವೆಂಕೂಬಾಯಿ ಹೋಗುತ್ತಿದ್ದರು. ಗಾಂಧಿಯವರ ಅನುಯಾಯಿಗಳಾದರು. ಬ್ರಿಟಿಷ್ ಸರಕಾರದಲ್ಲಿದ್ದ ಪತಿ ಇವುಗಳಿಗೆ ಹೋಗುವಂತಿಲ್ಲದಿದ್ದರೂ ಪತ್ನಿಗೆ ಪ್ರೋತ್ಸಾಹ ನೀಡುತ್ತಿದ್ದರು. (ಭಾರತಕ್ಕೆ ಮರಳಿದ ಮೇಲೆ ಭಾರತ ಬಿಟ್ಟು ತೊಲಗಿ? ಚಳವಳಿಯಲ್ಲಿ ಭಾಗವಹಿಸಿ, ಜೈಲಿಗೂ ಹೋಗಿದ್ದರು.) ಡಾಕ್ಟರರೂ ಗಾಂಧಿಯವರ ಕಟ್ಟಾ ಅಭಿಮಾನಿಯಾದರು.

ವೆಂಕೂಬಾಯಿ ಹೆಣ್ಣು ಕೂಸೊಂದನ್ನು ಹಡೆದು, ಅನಾರೋಗ್ಯ ಪೀಡಿತರಾದರು. ಅವರ ಗರ್ಭಕೋಶವನ್ನೇ ತೆಗೆಯಬೇಕಾಯಿತು. ಎರಡು ತಿಂಗಳ ಮಗುವೂ ಕಣ್ಮುಚ್ಚಿತು. ವಿಧಿಯಾಟ. ಪರರ ನೋವನ್ನು ನಿವಾರಿಸುವುದರಲ್ಲಿ ತಮ್ಮ ನೋವನ್ನು ಮರೆಮಾಡಿಕೊಂಡರು. ಭೀಮರಾಯರಿಗೂ ಆರೋಗ್ಯ ಹದಗೆಟ್ಟು, ರಜೆ ಹಾಕಿ ಊರಿಗೆ ಮರಳಿದರು. ಹನ್ನೆರಡು ವರುಷ ಆಫ್ರಿಕಾದಲ್ಲಿ ಸೇವೆಗೈದು, ಕೊನೆಗೆ ನೌಕರಿಗೆ ರಾಜೀನಾಮೆ ನೀಡಿ, ಬಾಗಲಕೋಟೆಗೆ ಮರಳಿದರು.



ಡಾ.ಭೀಮರಾವ್ ಪರ್ವತೀಕರರು

ತನ್ನ ದೇಶಕ್ಕಾಗಿ ಏನನ್ನಾದರೂ ಮಾಡಬೇಕೆಂಬ ಹಂಬಲ, ತನ್ನ ಜನರಿಗೆ ವೈದ್ಯಕೀಯ ನೆರವನ್ನು ನೀಡಬೇಕೆಂಬ ಉತ್ಕಟೇಚ್ಛೆ, ಇಲ್ಲಿಂದ ಮುಂದೆ ಅವರು ಬಾಗಲಕೋಟೆಯ, ಸುತ್ತಮುತ್ತಲಿನ ಜನರಿಗೆ ಸಾಕ್ಷಾತ್ ದೇವರೇ ಆದರೆಂದರೆ ಅತಿಶಯೋಕ್ತಿಯಲ್ಲ. ತಮ್ಮ ದವಾಖಾನೆಗೆ ಬಂದವರೆಲ್ಲರಿಗೂ ಒಂದೇ ಬಗೆಯ ಶುಶ್ರೂಷೆ. ಬಡವರಿಗೆ ಉಚಿತ ಔಷಧಿ. ಕಾದು ಕುಳಿತ ಜನರನ್ನು ನೋಡಿ, ಅವರಲ್ಲಿ ಶಾಲೆಗೆ ಹೋಗುವ ಮಕ್ಕಳಿದ್ದರೆ, ಅವರನ್ನು ಮೊದಲು ತಪಾಸಿಸುತ್ತಿದ್ದರು. ಅವರಿಂದ ಮತ್ತು ಶಿಕ್ಷಕರಿಂದ ಫೀಸು ತೆಗೆದುಕೊಳ್ಳುತ್ತಿರಲಿಲ್ಲ. ತಪ್ಪದೇ ಮೆಡಿಕಲ್ ಜರ್ನಲ್‌ಗಳನ್ನು ಓದಿ, ತಮ್ಮ ಕ್ಷೇತ್ರದ ಬೆಳವಣಿಗೆಯನ್ನು ಅರಿತಿರುತ್ತಿದ್ದರು.


ರೋಗಿಗಳ ಮನೆಗೂ ಹೋಗಬೇಕಾಗಿ ಬಂದಾಗ ಅವರ ಅಸಿಸ್ಟಂಟ್ ಯಮುನಪ್ಪ ಅರ್ಧ ಗಂಟೆ ಮೊದಲೇ ರೋಗಿಯ ಮನೆಗೆ ಹೋಗಿ, ಒಯ್ದಿರುತ್ತಿದ್ದ ಸ್ಟೋವನ್ನು ಹಚ್ಚಿ, ಇಂಜಕ್ಷನ್ನಿನ ಸೂಜಿಯನ್ನು ಕುದಿಸಲು ಆರಂಭಿಸಿರುತ್ತಿದ್ದ. ಇವರು ನಂತರ ಬಂದು, ಅದನ್ನೊಮ್ಮೆ ಪರೀಕ್ಷಿಸಿ, ಸಿರಿಂಜಿನಲ್ಲಿ ಔಷಧಿ ತುಂಬಿ ರೋಗಿಯ ಕೋಣೆಗೆ ಹೋಗುತ್ತಿರುವಾಗ, ಯಾರಾದರೂ ಅಡ್ಡ ಬಂದರೆ, ಮತ್ತೆ ಹಿಂತಿರುಗಿ ಆ ಸೂಜಿಯನ್ನು ಕುದಿಯಲು ಇಡುತ್ತಿದ್ದರು! ಅಷ್ಟು ಮುಂಜಾಗ್ರತಾ ಕ್ರಮ! ಸ್ವಚ್ಛತೆಗೇ ಮೊದಲ ಆದ್ಯತೆ. ತಾವು ಬರೆದು ಕೊಟ್ಟ ಔಷಧಿಯನ್ನು ಅವರಿಗೇ ತೋರಿಸಿಯೇ ಬಳಸಬೇಕೆಂದು ಹೇಳುತ್ತಿದ್ದುದರ ಕಾರಣ, ಅಕಸ್ಮಾತ್ ತಪ್ಪು ಔಷಧಿಯನ್ನು ಸೇವಿಸುವಂತಾಗಬಾರದೆಂಬುದು. ಸದಾ ಖಾದಿಧಾರಿಗಳಾದ ಅವರದು ಜುಬ್ಬ ಮತ್ತು ಧೋತ್ರದ ಸರಳ ಉಡುಗೆ. ಹೊರಗೆ ಹೋಗುವಾಗ ಗಾಂಧಿ ಟೊಪ್ಪಿಗೆ. ವಿದ್ಯೆಗೆ ಮತ್ತು ಸ್ತ್ರೀ ಶಿಕ್ಷಣಕ್ಕೆ ಬಹಳ ಮಹತ್ವ ಕೊಡುತ್ತಿದ್ದ ಭೀಮರಾಯರು ಎಲ್ಲರಿಗೂ ವಿದ್ಯಾವಂತರಾಗಲು ಪ್ರೇರೇಪಿಸುತ್ತಿದ್ದರು. ಅನೇಕ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ಮಾಡಿದರು. ಸೇವಾದಳ, ವಾಸುದೇವ ವಿನೋದಿನಿ ನಾಟ್ಯ ಸಭೆ, ಸಕ್ರಿ ವಿದ್ಯಾ ಸಂಸ್ಥೆ ಮುಂತಾದವಕ್ಕೆಲ್ಲ ಇವರ ಅನುಪಮ ಸೇವೆ ಸಂದಿದೆ. ರೋಗಿಗಳನ್ನು ದೇವರಂತೆ ಕಾಣುತ್ತಿದ್ದ ಅಂತಹ ವೈದ್ಯರನ್ನು, ನಿಜ, ಮತ್ತೆ ನೋಡಲು ಸಾಧ್ಯವೇ?

ಇಂದು ಶ್ರೀ ಶಿವರಾತ್ರೀಶ್ವರ ಜಯಂತಿ: ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ

ಮೈಸೂರು,ಡಿ.28–ಶ್ರೀಮತ್ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಸಂಸ್ಥಾಪನಾಚಾರ್ಯ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1065ನೇ ಜಯಂತಿಯನ್ನು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಡಿ.29ರಂದು ಆಚರಿಸಲಾಗುತ್ತದೆ. ಎಲ್ಲ ಕಾರ್ಯಕ್ರಮಗಳು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ, ಮಠಾಧೀಶರ ಸಮ್ಮುಖದಲ್ಲಿ ನೆರವೇರುತ್ತವೆ.

ಪ್ರಾತಃಕಾಲ 3 ಗಂಟೆಗೆ ಕರ್ತೃಗದ್ದುಗೆಯಲ್ಲಿ ರುದ್ರಾಭಿಷೇಕ, ಸಹಸ್ರನಾಮಾವಳಿ, ಶಿವಾಷ್ಟೋತ್ತರ, ಶಿವರಾತ್ರೀಶ್ವರ ಅಷ್ಟೋತ್ತರ, ಆದಿ ಜಗದ್ಗುರುಗಳ ಉತ್ಸವ ಮೂರ್ತಿಗೆ ಶೋಡಶೋಪಚಾರ, ಮಹಾ ಮಂಗಳಾ ರತಿ ಹಾಗೂ ಪ್ರಾಕಾರೋತ್ಸವ ಇತ್ಯಾದಿ ವಿಶೇಷ ಪೂಜೆ ಗಳು ನೆರವೇರುತ್ತವೆ. ಬೆಳಗ್ಗೆ 5 ಗಂಟೆಗೆ ಶಿವದೀಕ್ಷೆ–ಲಿಂಗದೀಕ್ಷೆ ಸಂಸ್ಕಾರ ನೀಡಲಾಗುತ್ತದೆ. 8 ಗಂಟೆಗೆ ಉತ್ಸವ ಮೂರ್ತಿಯನ್ನು ಶ್ರೀಮಠಕ್ಕೆ ಬಿಜಯಂಗೈಸಲಾಗುತ್ತದೆ. 9.30 ಗಂಟೆಗೆ ಬೆಳ್ಳಿ ಪಲ್ಲಕ್ಕಿ ಉತ್ಸವ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಸಾಗಿ ಶ್ರೀಮಠವನ್ನು ತಲುಪುತ್ತದೆ.

10 ಗಂಟೆಗೆ ಜೆಎಸ್‌ಎಸ್ ಲಲಿತಕಲಾ ವೃಂದ, ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲೆಯ ಸಂಗೀತ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಂದ ಗಾಯನ ಏರ್ಪಡಿಸಲಾಗಿದೆ. 10.30 ಕ್ಕೆ ಜ್ಯೋತಿಷ್ಯ ಮಹಾಮಹೋಪಾಧ್ಯಾಯ ಸಿದ್ಧಾಂತಿ ಡಾ.ಕೆ.ಜಿ. ಪುಟ್ಟಹೊನ್ನಯ್ಯನವರು ಸಿದ್ಧಪಡಿಸಿ, ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದಿಂದ ಪ್ರಕಟಿಸಿರುವ ಶ್ರೀ ವಿಶ್ವಾವಸುನಾಮ ಸಂವತ್ಸರದ ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗ' ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ ಹೊಸ ವರ್ಷದ ಕನ್ನಡ ಮತ್ತು ಇಂಗ್ಲಿಷ್ ಟೇಬಲ್ ಕ್ಯಾಲೆಂಡರ್‌ಗಳನ್ನು ಬಿಡುಗಡೆ ಮಾಡಲಾಗುವುದು.



ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ: ವಿಶೇಷಚೇತನರ ರಾಜ್ಯಪ್ರಶಸ್ತಿ ಪುರಸ್ಕೃತರುಗಳಾದ ಕೆ.ಎಸ್.ರಾಜಣ್ಣ, ಹೆಚ್.ಜನಾರ್ಧನ್ (ಜನ್ನಿ), ಅರುಣ್ ಯೋಗಿರಾಜ್, ಶ್ರೀಮತಿ ಪುಟ್ಟೀರಮ್ಮ, ಶ್ರೀಮತಿ ಸರಸ್ವತಿ ಜುಲೈಕ ಬೇಗಂ, ಶ್ರೀಮತಿ ಬಿ.ಟಿ.ಲಲಿತಾನಾಯಕ್, ಬಸವರಾಜ ಬಡಿಗೇರ, ವಿದುಷಿ ಲಲಿತಾರಾವ್, ಡಾ.ಮೈಸೂರು ಸತ್ಯನಾರಾಯಣ, ಡಿ.ರಾಮು, ಕೆಂಚಯ್ಯ, ಎಂ.ಪಿ. ರಾಜಣ್ಣ, ಫಜ್ಲುರ್ ರಹಮಾನ್ ಖಾನ್, ಶ್ರೀಮತಿ ಮಾಲತಿಶ್ರೀ, ಶ್ರೀಮತಿ ಪ್ರೇಮಲತಾ ಕೃಷ್ಣಸ್ವಾಮಿ, ಮಡ್ಡೀಕೆರೆ ಗೋಪಾಲ್, ಪ್ರೊ. ಹಿ.ಚಿ. ಬೋರಲಿಂಗಯ್ಯ, ಡಾ.ಬಾನು ಮುಷ್ತಾಕ್, ಶ್ರೀಮತಿ ಮೀರಾ ಶಿವಲಿಂಗಯ್ಯ, ಶ್ರೀಮತಿ ಜೀಜಾ ಹರಿಸಿಂಗ್, ಗಂಜೀಫಾ ರಘುಪತಿ ಭಟ್, ತಂಬೂರಿ ಗುರುಸಿದ್ದಯ್ಯ, ಶ್ರೀಮತಿ ಸೋಬಾನೆ ಗೌರಮ್ಮ, ಹರವೆ ಮಹೇಶ್, ಡಾ. ಎಂ.ಜಿ. ಮಂಜುನಾಥ್, ದಾಸನೂರು ಕೂಸಣ್ಣ, ಪ್ರೊ. ಮುಜಾಫರ್ ಅಸ್ಸಾದಿ, ಶ್ರೀಮತಿ ರಾಮೇಶ್ವರಿ ವರ್ಮ, ನೂರ್ ಅಹಮ್ಮದ್ ಶೇಖ್, ಪ್ರಸಾದ್ ಕುಂದೂರು, ಅಬ್ರಾಹಂ ಡಿ.ಸಿಲ್ವಾ, ಚಂದ್ರಶೇಖರಾಚಾರ್, ಬಿ.ಎಸ್. ವಿದ್ಯಾರಣ್ಯ, ಡಿ.ಕೆ.ರಾಜೇಂದ್ರ, ವಿದ್ವಾನ್ ಮೈಸೂರು ಎಂ.ಮಂಜುನಾಥ್, ವಿದ್ವಾನ್ ಮೈಸೂರು ಎಂ.ನಾಗರಾಜು, ಶೀಧರ್ ದೀಕ್ಷಿತ್, ಡಿ.ಮಧುಸೂದನ್ ಹಾಗೂ ಕರುಣಾಮತಿ ಫೌಂಡೇಷನ್ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆಯ ಜಿ.ಸಿ.ಕಿರಣ್‌ಕುಮಾರ್ ಮತ್ತು ಶ್ರೀಮತಿ ಸೌಮ್ಯ ಅವರನ್ನು ಸನ್ಮಾನಿಸಲಾಗುವುದು.

ಇಂದು ವಿಶ್ವ ಮಾನವ ದಿನಾಚರಣೆ

ಮೈಸೂರು: ಜಿಲ್ಲಾಡಳಿತ ಹಾಗೂ ಕನ್ನಡ –ಸಂಸ್ಕೃತಿ ಇಲಾಖೆ ವತಿಯಿಂದ ಡಿ.29ರಂದು ಬೆಳಗ್ಗೆ 11.30 ಗಂಟೆಗೆ ಕಲಾಮಂದಿರದಲ್ಲಿ ವಿಶ್ವ ಮಾನವ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದು, ಶಾಸಕ ಕೆ. ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ.

ರೇಷ್ಮೆ ಸಚಿವ ಕೆ.ವೆಂಕಟೇಶ್, ಶಾಸಕರಾದ ಅನಿಲ್‌ಕುಮಾರ್, ರಮೇಶ್ ಬಂಡಿಸಿದ್ದೇಗೌಡ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ.ಮಾನಸ ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

ಆಧುನಿಕ ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿಕೆ ಕೂಡ ಮುಖ್ಯ

ವಿದ್ಯಾರ್ಥಿಗಳಿಗೆ ಉತ್ತರಾದಿ ಮಠದ ಪೀಠಾಧಿಪತಿ ಶ್ರೀ ಸತ್ಯಾತ್ಮತೀರ್ಥ ಸ್ವಾಮೀಜಿ ಕಿವಿಮಾತು

ಮೈಸೂರು, ಡಿ.28(ಬಿಎಲ್‌ಯು)– ವಿದ್ಯಾರ್ಥಿಗಳಿಗೆ ಆಧುನಿಕ ಶಿಕ್ಷಣದ ಜೊತೆಗೆ ಸಂಸ್ಕಾರ ಕೂಡ ಕಲಿಸಬೇಕಿದ್ದು, ಹಿರಿಯರು ಇದರ ಜವಾಬ್ದಾರಿ ನಿರ್ವಹಿಸಬೇಕು ಎಂದು ಉತ್ತರಾದಿ ಮಠದ ಪೀಠಾಧಿಪತಿ ಶ್ರೀ ಸತ್ಯಾತ್ಮತೀರ್ಥ ಸ್ವಾಮೀಜಿ ಸಲಹೆ ನೀಡಿದರು.

ಮೈಸೂರಿನ ಉತ್ತರಾದಿ ಮಠದ ಶ್ರೀ ಸತ್ಯಪ್ರಮೋದ ವಿದ್ಯಾರ್ಥಿನಿಲಯಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಉನ್ನತ ಶಿಕ್ಷಣಕ್ಕಾಗಿ ಮಕ್ಕಳನ್ನು ಪರ ಊರಿಗೆ ಕಳುಹಿಸುವುದು ಅನಿವಾರ್ಯವಾಗಿದೆ. ಆದರೆ ಇಂತಹ ಸಂದರ್ಭದಲ್ಲಿ ಮಕ್ಕಳು ಸ್ವೇಚ್ಛೆಯಾಗಿ ವರ್ತಿಸಬಾರದು ಹಾಗೂ ತಮ್ಮತನ ಬಿಡಬಾರದು ಎಂದರು.

ವಿದ್ಯಾರ್ಥಿಗಳಿಗೆ ಊಟ, ವಸತಿ ಸೌಕರ್ಯ ಕಲ್ಪಿಸುವುದು ಮುಖ್ಯವಾಗಿದೆ. ಕಲಿಕೆಗಾಗಿ ಉತ್ತಮ ವಾತಾವರಣವಿರುವ ವಸತಿ ಕೂಡ ಅಷ್ಟೇ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಶ್ರೀ ಮಠ ಮೂಲ ಸೌಕರ್ಯವಿರುವ ವಸತಿನಿಲಯದ ಜೊತೆಗೆ ವಿದ್ಯಾರ್ಥಿಗಳಿಗೆ ಸಂಸ್ಕಾರ ಕೂಡ ಕಲಿಸಲಿದೆ ಎಂದರು.

ಮೈಸೂರು ಬಹುವಿಧ ಶಿಕ್ಷಣ ಕೇಂದ್ರವಾಗಿದ್ದು, ಇಲ್ಲಿ ವಿಪ್ರ ಸಮುದಾಯದ ಮಕ್ಕಳಿಗೆ ಹಾಸ್ಟೆಲ್ ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಇನ್ನು ವರ್ಷದೊಳಗೆ ಇಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡ ಸಮರ್ಪಣೆಗೊಳ್ಳಲಿದೆ ಎಂದು ಶ್ರೀಗಳು ಭರವಸೆ ನೀಡಿದರು. ಮಠದ ಹಿರಿಯ ವಿದ್ವಾಂಸರಾದ ಗೋವಿಂದಾಚಾರ್ಯ, ಪುರುಷೋತ್ತಮಾಚಾರ್ಯ, ಶಶಿ ಆಚಾರ್ಯ, ಅನಿರುದ್ಧಾಚಾರ್ಯ, ಶೃಂಗಾರಿ ಶಂಕರ ಮಠದ ಧರ್ಮಾಧಿಕಾರಿ ರಾಮಚಂದ್ರನ್, ಬ್ರಾಹ್ಮಣ ಮಹಾಸಭಾ ಜಿಲ್ಲಾಧ್ಯಕ್ಷ ಡಿ.ಟಿ.ಪ್ರಕಾಶ್, ವಿದ್ಯಾರ್ಥಿನಿಲಯದ ಟ್ರಸ್ಟಿ ಗುರುರಾಜ್ ಕಾರ್ಯಕ್ರಮದಲ್ಲಿ ಹಾಜರಿದ್ದರು.



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿ ನಿರ್ಮಾಣ ಮಾಡುತ್ತಿರುವ ಉತ್ತರಾದಿ ಮಠದ ಶ್ರೀ ಸತ್ಯ ಪ್ರಮೋದ ವಿದ್ಯಾರ್ಥಿನಿಲಯಕ್ಕೆ ಉತ್ತರಾದಿ ಮಠದ ಪೀಠಾಧಿಪತಿ ಶ್ರೀ ಸತ್ಯಾತ್ಮತೀರ್ಥ ಸ್ವಾಮೀಜಿ ಭೂಮಿ ಪೂಜೆ ನೆರವೇರಿಸಿದರು.

ವಿಶ್ವ ಆರ್ಥಿಕ ಭೂಪಟದಲ್ಲಿ ಭರತ ಭೂಮಿಯನ್ನು ದಾಖಲಿಸಿದ ಡಾ. ಮನಮೋಹನ್ ಸಿಂಗ್



ಮೈಸೂರು, ಡಿ. 28–ವಿಶ್ವದ ವಾಣಿಜ್ಯ ಮಾರುಕಟ್ಟೆಯಲ್ಲಿ ಭಾರತದ ರೂಪಾಯಿ ಮೌಲ್ಯವನ್ನು ಎಂದೂ ಕುಸಿಯದಂತೆ ನಿರಂತರವಾಗಿ ಮೌಲ್ಯ ವೃದ್ಧೀಕರಣದ ಸಿದ್ಧಾಂತದಡಿಯಲ್ಲಿ ಭಾರತದ ಆರ್ಥಿಕತೆಗೆ ವೈಜ್ಞಾನಿಕ ವಸ್ತು ವಿನ್ಯಾಸವನ್ನು ರೂಪಿಸಿಕೊಟ್ಟ ಜಗತ್ತಿನ ಒಬ್ಬ ಶ್ರೇಷ್ಠ ಆರ್ಥಿಕ ಜ್ಞಾನಿ ಮಾಜಿ ಪ್ರಧಾನಿಗಳಾದ ಡಾ.ಮನಮೋಹನ್ ಸಿಂಗ್ ನಿಧನಕ್ಕೆ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಸಂತಾಪ ಸೂಚಿಸಿದ್ದಾರೆ.

ಯುಪಿಎ ಸರ್ಕಾರದ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ರಾಷ್ಟ್ರೀಯ ಮಾಹಿತಿ ಹಕ್ಕು ಕಾಯ್ದೆ, ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ, ಶಿಕ್ಷಣ ಕಾಯಿದೆ, ಅಮೆರಿಕದೊಂದಿಗೆ ಪರಮಾಣು ಐತಿಹಾಸಿಕ ಒಪ್ಪಂದದ ರೂವಾರಿ. ಏಷ್ಯಾದ ರಾಷ್ಟ್ರಗಳಲ್ಲಿ ಆರ್ಥಿಕ ತಲ್ಲಣ ಉಂಟಾದಾಗ ಭಾರತದ ಜಿಡಿಪಿಯನ್ನು ಸರಾಸರಿ 7.7ಕ್ಕೆ ಸ್ಥಿತ್ಯಂತರಗೊಳಿಸಿದ ಕೀರ್ತಿ, ಭಾರತದ ಕೈಗಾರಿಕೆಗಳ ಉತ್ಪನ್ನ, ವಿದೇಶಿ ಬಂಡವಾಳದ ಹೂಡಿಕೆ, ಭಾರತ ದೇಶಿಯ ರಫ್ತು ನೀತಿಯಲ್ಲಿ ದ್ವಿಗುಣತೆ, ವಿದೇಶಿ ಕರೆನ್ಸಿ ವಿನಿಮಯದ ಸರಳೀ ಕರಣದ ಶ್ರೇಷ್ಠತೆ, ಭಾರತೀಯರಿಗೆ ಆಧಾರ್ ಕಾರ್ಡ್ ಹೀಗೆ ಹಲವಾರು ಹೊಸ ಆವಿಷ್ಕಾರ ಹಾಗೂ ಐತಿಹಾಸಿಕ ಆರ್ಥಿಕ ನೀತಿಯನ್ನು ವಿಶ್ವಕ್ಕೆ ಪರಿಚಯಿಸಿದವರು ಡಾ.ಸಿಂಗ್. ಭಾರತದ ಸಾಂಪ್ರದಾಯಿಕ ಹಾಗೂ ಜಡ್ಡು ಕಟ್ಟಿದ ಅರ್ಥ ವ್ಯವಸ್ಥೆಗೆ ವಿಶ್ವ ಮಾನ್ಯತೆಯ ಸುವರ್ಣ ಲೇಪನಕ್ಕೆ ಮುನ್ನುಡಿ ಬರೆದ ಮನಮೋಹನ್ ಸಿಂಗ್ ಜಗತ್ತಿನ ಆರ್ಥಿಕ ಸಾಧಕರಲ್ಲಿ ಒಬ್ಬರು ಎಂದು ಹೇಳಿದ್ದಾರೆ.

ಆಕ್ಷೇಪಣೆಗೆ ಅರ್ಜಿ ಆಹ್ವಾನ

ಮೈಸೂರು: ಮೈಸೂರು ಮಹಾನಗರ ಪಾಲಿಕೆಗೆ ಪೌರಕಾರ್ಮಿಕರ ಸಂಖ್ಯಾತಿರಿಕ್ತ (supernumerary posts) ಮಂಜೂರಾದ ಹುದ್ದೆಗಳನ್ನು ನೇರ ನೇಮಕಾತಿ ಮಾಡುವ ಸಂಬಂಧ ಮೀಸಲಾತಿ ಅನುಸಾರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಮೈಸೂರು ಮಹಾನಗರ ಪಾಲಿಕೆಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದ್ದು, ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಜನವರಿ 8ರೊಳಗಾಗಿ ಲಿಖಿತವಾಗಿ ಸಂಬಂಧಿಸಿದ ದಾಖಲಾತಿಗಳೊಂದಿಗೆ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರು ಪಾಲಿಕೆಯ ಆಯುಕ್ತರು ಮತ್ತು ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರದ ಅಧ್ಯಕ್ಷರಿಗೆ ಸಲ್ಲಿಸಬೇಕು ಎಂದು ಮೈಸೂರು ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮಕ್ಕಳಲ್ಲಿ 'ತೃಪ್ತಿ' ಗುಣ ಬೆಳೆಸಿದರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ

• ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅಭಿಮತ • ದೇಶದಲ್ಲಿ 50ರ ದಶಕದಲ್ಲೂ ಭಾರಿ ಹಗರಣಗಳು ನಡೆದಿದ್ದವು

ಮೈಸೂರು, ಡಿ.28(ಎಂಟಿವೈ)– ದುರಾಸೆ ಬಿಟ್ಟು, ತೃಪ್ತಿ ಗುಣವನ್ನು ಎಲ್ಲರೂ ಅಳವಡಿಸಿಕೊಂಡು, ಅದನ್ನು ತಮ್ಮ ಮಕ್ಕಳಲ್ಲೂ ಬೆಳೆಸಿದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಮಾಡಬಹುದು ಎಂದು ನಿವೃತ್ತ ಲೋಕಾಯುಕ್ತ ನ್ಯಾ. ಡಾ. ಎನ್.ಸಂತೋಷ್ ಹೆಗ್ಡೆ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕುವೆಂಪುನಗರದ ಆದಿ ಚುಂಚನಗಿರಿ ರಸ್ತೆಯಲ್ಲಿರುವ ಗಾನ ಭಾರತಿ ಸಭಾಂಗಣದಲ್ಲಿ ಸಂಧ್ಯಾ ಸುರಕ್ಷಾ ಟ್ರಸ್ಟ್, ಅಟಲ್‌ಜಿ ಸಂಸ್ಕಾರ ಭಾರತ್ ಪ್ರತಿಷ್ಠಾನ, ಜಿಲ್ಲಾ ಬ್ರಾಹ್ಮಣ ಮಹಾಸಭಾ ಹಾಗೂ ಶಾಕಂಬರಿ ಧಾರ್ಮಿಕ ಶ್ರದ್ಧಾ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಟಲ್‌ಜೀ, 9ನೇ ರಾಷ್ಟ್ರೀಯ ಪ್ರಶಸ್ತಿ, ಆರ್.ಗುಂಡೂರಾವ್ 9ನೇ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ಕೆಲ ವರ್ಷಗಳಲ್ಲಿ ಜನರಲ್ಲಿ ದುರಾಸೆ ಹೆಚ್ಚಾಗುತ್ತಿದೆ. ಇದರಿಂದ ಸಮಾಜದಲ್ಲಿ ಮೌಲ್ಯಗಳು ದೂರಾಗುತ್ತಿವೆ. ಆ ಕಾರಣದಿಂದ ಎಲ್ಲರೂ ತೃಪ್ತಿ ಎಂಬ ಗುಣವನ್ನು ಅಳವಡಿಸಿಕೊಳ್ಳಬೇಕು. ತಮ್ಮ ಮಕ್ಕಳಿಗೂ ತೃಪ್ತಿಪಡುವುದನ್ನು ಕಲಿಸಬೇಕು. ಆಗ ಉತ್ತಮ ಸಮಾಜ ನಿರ್ಮಾಣ ಮಾಡಬಹುದು. ಸಮಾಜದಲ್ಲಿ ಸುಖ–ಶಾಂತಿ, ಸೌಹಾರ್ದತೆ ನೆಲೆಸುತ್ತದೆ. ಆಗ ಮಾತ್ರ ಈ ಹಿಂದೆ ಕಂಡು ಬರುತ್ತಿದ್ದ ನೆಮ್ಮದಿಯ ಸಮಾಜ ಮರು ಸ್ಥಾಪಿಸಬಹುದು ಎಂದರು.

ದೇಶದಲ್ಲಿ 50ನೇ ದಶಕದಲ್ಲೇ ಅನೇಕ ಹಗರಣ ನಡೆದಿವೆ. ಆಗ ಕೆಲವೇ ಕೆಲವು ಅಧಿಕಾರದಲ್ಲಿದ್ದವರು 54 ಲಕ್ಷ ರೂ. ಕೊಳ್ಳೆ ಹೊಡೆದಿದ್ದರು. ಕೆಲವು ದಶಕದ ನಂತರ ಕಾಮನ್‌ವೆಲ್ತ್ ಗೇಮ್ಸ್ ಹಗರಣದಲ್ಲಿ 70 ಸಾವಿರ ಕೋಟಿ, 2ಜಿ ಹಗರಣದಲ್ಲಿ 1.76 ಕೋಟಿ, ಕೋಲ್ಗೇಟ್ ಹಗರಣದಲ್ಲಿ 1.86 ಲಕ್ಷ ಕೋಟಿ ಹಗರಣ ನಡೆದಿದೆ. 1985ರಲ್ಲಿ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಕಾರ್ಯಕ್ರಮವೊಂದರಲ್ಲಿ ಬಹಿರಂಗವಾಗಿ ಹೇಳಿದ ಮಾತು ಭ್ರಷ್ಟಾಚಾರದ ತೀವ್ರತೆಯನ್ನು ತೋರ್ಪಡಿಸುತ್ತದೆ. ಅಭಿವೃದ್ಧಿ ಕಾಮಗಾರಿಗೆ ಸರ್ಕಾರ ಕೊಟ್ಟ 1 ರೂ.ನಲ್ಲಿ 15 ಪೈಸೆ ಮಾತ್ರ ಫಲಾನುಭವಿಗಳಿಗೆ ತಲುಪುತ್ತಿದೆ ಎಂದಿದ್ದರು. ಬಹುಶಃ 2024ರಲ್ಲಿ ಅಭಿವೃದ್ಧಿಗೆ ನೀಡಿದ 100 ರೂ.ನಲ್ಲಿಯೂ 15 ಪೈಸೆಯೇ ಬಳಕೆಯಾಗುತ್ತಿರಬಹುದು. ದುರಾಸೆ ಇದೇ ಮಟ್ಟದಲ್ಲಿ ಹೋದರೆ ಗಂಭೀರವಾದ ಸಮಸ್ಯೆಗೆ ಕಾರಣವಾಗಬಹುದು. ನಂತರ ಕ್ರಾಂತಿ ಮೂಲಕ ಬದಲಾವಣೆಗೆ ನಾಂದಿಯಾಗಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕಾಮಾಕ್ಷಿ ಆಸ್ಪತ್ರೆಯ ಮುಖ್ಯಸ್ಥ ಮಹೇಶ್ ಶೆಣೈ ಅವರಿಗೆ ಸರ್ವಶ್ರೀ ರಾಮರಾವ್ ಗುಂಡೂರಾವ್ ಅವರ 9ನೇ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅಲ್ಲದೆ ಬ್ರಾಹ್ಮಣ ಸಮಾಜದ ಮುಖಂಡರಾದ ಪುಷ್ಪಾ ಅಯ್ಯಂಗಾರ್, ಬಿ.ವಿ.ಶೇಷಾದ್ರಿ, ಆರ್.ಲಕ್ಷ್ಮೀಕಾಂತ್, ಎನ್.ಶ್ರೀನಿವಾಸ್, ಎನ್.ಸೂರ್ಯ ನಾರಾಯಣ್, ಸರೋಜ, ಅನ್ನಪೂರ್ಣ, ವಿಶ್ವನಾಥಯ್ಯ, ಕೆ.ಆರ್. ಸತ್ಯನಾರಾಯಣ, ಪ್ರಗತಿ ಗೋಪಾಲಕೃಷ್ಣ ಮತ್ತು ಮನ.ಲತಾ ಮೋಹನ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ವಿಪ್ರತ್ರಯ ಟ್ರಸ್ಟ್‌ನ ರಘುನಾಥ, ವೆಂಗೀಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಬ್ರಾಹ್ಮಣ ಸಮಾಜದ ಮುಖಂಡ ಕೆ. ರಘುರಾಂ ವಾಜಪೇಯಿ, ಸಂಧ್ಯಾ ಸುರಕ್ಷಾ ಟ್ರಸ್ಟ್‌ನ ಬಿ.ಆರ್.ನಟರಾಜ ಜೋಯ್ಸ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಗಾನಭಾರತಿಯಲ್ಲಿ ಶನಿವಾರ ಸಂಧ್ಯಾ ಸುರಕ್ಷ ಟ್ರಸ್ಟ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸರ್ವಶ್ರೀ ದಿ. ಅಟಲ್ ಬಿಹಾರಿ ವಾಜಪೇಯಿ ಅವರ 9ನೇ ರಾಷ್ಟ್ರೀಯ ಪುರಸ್ಕಾರವನ್ನು ಹಿರಿಯ ಪತ್ರಕರ್ತ ರವಿ ಹೆಗಡೆ ಅವರಿಗೆ ಹಾಗೂ ರಾಮರಾವ್ ಗುಂಡೂರಾವ್ ಅವರ 9ನೇ ರಾಜ್ಯ ಪ್ರಶಸ್ತಿಯನ್ನು ಕಾಮಾಕ್ಷಿ ಆಸ್ಪತ್ರೆ ಮುಖ್ಯಸ್ಥ ಮಹೇಶ್ ಶೆಣೈ ಅವರಿಗೆ ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹಗ್ಡೆ ಪ್ರದಾನ ಮಾಡಿದರು.

ನಮ್ಮಲ್ಲಿ ಭ್ರಷ್ಟಾಚಾರಕ್ಕೆ ಎರಡೇ ವರ್ಷ ಶಿಕ್ಷೆ; ಆದರೆ ಕೇಸ್ ಇತ್ಯರ್ಥಕ್ಕೆ 50 ವರ್ಷ ಬೇಕು!

ದುರಾಸೆಗೆ ಯಾವುದೇ ಔಷಧಿ ಇಲ್ಲ. ಭ್ರಷ್ಟಾಚಾರಿಗಳು ಕಾನೂನಿಗೂ ಹೆದರುತ್ತಿಲ್ಲ. ಯಾಕೆಂದರೆ ಸುಪ್ರೀಂಕೋರ್ಟ್‌ನಲ್ಲಿ ಒಂದು ಕೇಸ್ ಇತ್ಯರ್ಥವಾಗಲು 50 ವರ್ಷ ಬೇಕು. ಇದುವರೆಗೆ ಯಾರೂ ಕೇಸ್ ಗೆದ್ದಿರುವವರಿಲ್ಲ. ಚೀನಾದಲ್ಲಿ ಭ್ರಷ್ಟರಿಗೆ ಗಲ್ಲು ಶಿಕ್ಷೆ ಇದೆ. ಟ್ರಾನ್ಸ್‌ಫರೆನ್ಸಿ ಇಂಟರ್‌ನ್ಯಾಷನಲ್ ಎಂಬ ಸಂಸ್ಥೆ ಪ್ರಾಮಾಣಿಕತೆ ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಮೀಕ್ಷೆ ಮಾಡಿದ್ದು, ಆ ವರದಿಯಲ್ಲಿ ಚೀನಾದಲ್ಲಿ ಭ್ರಷ್ಟಾಚಾರ ಹೆಚ್ಚು ಎಂದು ಉಲ್ಲೇಖಿಸಿದೆ. ನಮ್ಮ ದೇಶದಲ್ಲಿ ಭ್ರಷ್ಟಾಚಾರಕ್ಕೆ 2 ವರ್ಷ ಶಿಕ್ಷೆ. ಆ ಎರಡು ವರ್ಷದ ಶಿಕ್ಷೆ ಪ್ರಕಟವಾಗಲು 50 ವರ್ಷ ಬೇಕು. 30ನೇ ವಯಸ್ಸಲ್ಲಿ ಭ್ರಷ್ಟಾಚಾರ ಮಾಡಿದರೆ, ಶಿಕ್ಷೆ ಪ್ರಕಟವಾಗುವ ವೇಳೆಗೆ 80 ವರ್ಷ ಆಗಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿದ್ದೇವೆ ಎಂದು ವಿಷಾದಿಸಿದರು.

ಹಿರಿಯರು ಕಟ್ಟಿದ 'ತೃಪ್ತಿ' ಮಾರ್ಗ ಎಲ್ಲದಕ್ಕೂ ಉತ್ತರವಾಗಿದೆ. ಇದೊಂದು ಮೌಲ್ಯವೂ ಆಗಿದೆ. ಇದನ್ನು ಅಂಗಡಿಯಲ್ಲಿ ಖರೀದಿ ಮಾಡಲು ಸಾಧ್ಯವಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ಮಕ್ಕಳಿಗೆ, ಯುವಕರಿಗೆ ಇದನ್ನು ಹೇಳಿ ಕೊಡುವವರು ಯಾರು? ನಾವು ಚಿಕ್ಕವರಾಗಿದ್ದಾಗ ನಮ್ಮ ಪೋಷಕರು ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು ಎಂದು ಹೇಳಿಕೊಡುತ್ತಿದ್ದರು. ತಪ್ಪು ಮಾಡಿದಾಗ ಏಟು ಹೊಡೆಯುತ್ತಿದ್ದರು. ಶಾಲೆಗೆ ಹೋದಾಗ ನೀತಿ ಪಾಠ ಎಂಬ ವಿಷಯವಿತ್ತು. ಅದನ್ನು ಪೋಷಕರು ಒತ್ತಿ ಒತ್ತಿ ಹೇಳುತ್ತಿದ್ದರು. ಆದರೆ, ಇಂದು ಕೆಲಸ ಮಾಡುವ ಭರದಲ್ಲಿ ಮಕ್ಕಳಿಗೆ ನೀತಿ ಪಾಠ ಹೇಳುತ್ತಿಲ್ಲ. ಕಂಪ್ಯೂಟರ್‌ನಲ್ಲೇ ಕೆಲಸ ಮಾಡುವಲ್ಲಿ ಮುಳುಗಿ ಹೋಗಿರುವ ಪೋಷಕರು ಮಕ್ಕಳಿಗೆ ಐ–ಫೋನ್ ತೆಗೆದುಕೊಟ್ಟಿರುತ್ತಾರೆ. ಐ–ಫೋನ್‌ನಲ್ಲಿ ಯಾವ ಮೌಲ್ಯವಿಲ್ಲ. ಶಾಲೆಯಲ್ಲೂ ನೀತಿ ಪಾಠವಿಲ್ಲ. ಆಟಂಬಾಂಬ್ ಹೇಗೆ ತಯಾರಿಸಬಹುದು ಎಂದು ಕಲಿಸುತ್ತಾರೆ. ಆದರೆ ಹೇಗೆ ಬಳಸಬೇಕು ಎಂದು ಕಲಿಸುತ್ತಿಲ್ಲ. ಅಂತಹ ಪರಿಸ್ಥಿತಿಯಲ್ಲಿ ನಾವಿದ್ದೇವೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಮಹಾತ್ಮಗಾಂಧಿಯೂ ಜೈಲಿಗೆ ಹೋಗಿರಲಿಲ್ಲವೇ ಎಂದು ಪ್ರಶ್ನಿಸುತ್ತಾರೆ!

ಮುಂದೆ ಮಕ್ಕಳಿಗೆ, ಮೊಮ್ಮಕ್ಕಳಿಗೆ ಸುಖ, ಸಂತೋಷ ಬೇಕಾದರೆ, ಸಮಾಜದಲ್ಲಿ ಈ ಹಿಂದಿನ ಭಾವನೆಯನ್ನು ಮತ್ತೆ ಮೂಡಿಸಬೇಕಾಗಿದೆ. ಈ ಹಿಂದೆ ಗ್ರಾಮದಲ್ಲಿ ಜೈಲಿಗೆ ಹೋಗಿದ್ದವರ ಮನೆ ಹತ್ರ ಹೋಗಬೇಡ ಎನ್ನುತ್ತಿದ್ದರು. ಅದೊಂದು ಸಾಮಾಜಿಕ ಶಿಕ್ಷೆಯಾಗಿರುತ್ತಿತ್ತು. ತಪ್ಪು ಮಾಡಿ ಜೈಲಿಗೆ ಹೋಗಿ ಬಂದವನೊಂದಿಗೆ ಅವನ ಮನೆಯವರಿಗೂ, ಸಾಮಾಜಿಕ ಶಿಕ್ಷೆಯಾಗುತ್ತಿತ್ತು. ಆ ಕಾರಣದಿಂದ ತಪ್ಪು ಮಾಡಲು ಜನ ಹೆದರುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿದೆ. ಜೈಲಿಗೆ ಹೋಗಿ ಜಾಮೀನಿನ ಮೇಲೆ ಹೊರಗೆ ಬರುವವರನ್ನು, ಹೂವಿನ ಹಾರ, ಸೇಬಿನ ಹಾರ ಹಾಕಿ ಬರಮಾಡಿಕೊಳ್ಳುವ, ಘೋಷಣೆ ಕೂಗುವ, ಸಂಭ್ರಮಿಸುವ ಪರಿಸ್ಥಿತಿ ಇದೆ. ಜೈಲಿನಿಂದ ಹೊರಬಂದವರನ್ನು ಸ್ವಾಗತಿಸಲು ವಿಮಾನ ನಿಲ್ದಾಣಕ್ಕೆ ಹೋಗಿ ಮೆರವಣಿಗೆಯಲ್ಲಿ ಕರೆತರುವ ಸಂಪ್ರದಾಯ ರೂಢಿಯಾಗಿದೆ. ಮಹಾತ್ಮಗಾಂಧಿಯವರು ಸಹ ಜೈಲಿಗೆ ಹೋಗಿರಲಿಲ್ಲವೇ ಎಂದು ಪ್ರಶ್ನೆ ಮಾಡುತ್ತಾರೆ ಎಂದರು. ಪೋಷಕರಲ್ಲಿ ತಮ್ಮ ಮಕ್ಕಳು ಶ್ರೀಮಂತರಾಗಬೇಕು ಎಂಬ ಆಸೆ ಇದೆ. ಅದು ತಪ್ಪಲ್ಲ. ಕೋಟ್ಯಾಂತರ ರೂ. ಮಾಡಿ, ಆದರೆ, ಇನ್ನೊಬ್ಬರ ಜೇಬಿಗೆ ಕೈ ಹಾಕದೆ, ಇನ್ನೊಬ್ಬರ ಅನ್ನಕ್ಕೆ ಕೈ ಹಾಕದೆ ಮಾಡಿ. ಅನ್ಯಾಯ ಮಾರ್ಗದಲ್ಲಿ ಸಂಪಾದನೆ ನೆಮ್ಮದಿ ತರುವುದಿಲ್ಲ. ಮೂವರು ಸಿಎಂ ವಿರುದ್ಧ ಎಫ್‌ಐಆರ್ ದಾಖಲಿಸಿದ್ದೇನೆ. ನನ್ನಲ್ಲೇ ನ್ಯೂನತೆ ಇದ್ದಿದ್ದರೆ ನನ್ನನ್ನು ಬೀದಿಯಲ್ಲಿ ನಿಲ್ಲಿಸುತ್ತಿದ್ದರು ಎಂದು ಹೇಳಿದರು.

ಸದ್ದಿಲ್ಲದೆ ಗಣಿ ಹಗರಣ ಬಯಲಿಗೆಳೆದು ಸದ್ದು ಮಾಡಿದರು!

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ 9ನೇ ರಾಷ್ಟ್ರೀಯ ಪ್ರಶಸ್ತಿ ಸ್ವೀಕರಿಸಿದ ಪತ್ರಕರ್ತ ರವಿ ಹೆಗಡೆ ಮಾತನಾಡಿ, ಮಾಜಿ ಪ್ರಧಾನಿ ವಾಜಪೇಯಿ ಮತ್ತು ಸಂತೋಷ್ ಹೆಗ್ಡೆ ಅವರ ನಡುವೆ ಸಾಕಷ್ಟು ಸಾಮ್ಯತೆ ಇದೆ. ಲೋಕಾಯುಕ್ತ ಎಂಬ ಸಂಸ್ಥೆ ಇದೆ ಎಂದು ಅನೇಕರಿಗೆ ಗೊತ್ತಿರಲಿಲ್ಲ. ಆದರೆ ವೆಂಕಟಾಚಲಯ್ಯ ಅವರು ಲೋಕಾಯುಕ್ತರಾಗಿ ಅನೇಕ ಕಡೆ ದಾಳಿ ನಡೆಸಿದಾಗ ಎಲ್ಲರೂ ಅಚ್ಚರಿಪಟ್ಟರು.

ನಂತರ ಬಂದ ಸಂತೋಷ್ ಹೆಗ್ಡೆ ಅವರು ಎಲ್ಲಿಯೂ ದಾಳಿ ಮಾಡದಿದ್ದಾಗ, ನಾವು ಲೋಕಾಯುಕ್ತರು ಹೀಗೆ ದುರ್ಬಲವಾದರೆ ಹೇಗೆ ಎಂದು ಲೇಖನ ಬರೆದಿದ್ದೆವು. ಆಗ ಸಂತೋಷ್ ಹೆಗ್ಡೆ ಅವರು ಕರೆ ಮಾಡಿ ಲೋಕಾಯುಕ್ತರ ಕೆಲಸ ದಾಳಿ ಮಾಡುವುದಲ್ಲ. ನ್ಯಾಯಾಧೀಶರಂತೆ ಕೆಲಸ ಮಾಡಬೇಕು ಎಂದು ಹೇಳಿ ಸದ್ದಿಲ್ಲದೆ ಗಣಿ ಹಗರಣವನ್ನು ಬಯಲಿಗೆಳೆದರು. ಅನೇಕರು ಅಧಿಕಾರ ಕಳೆದುಕೊಳ್ಳುವಂತೆ ಮಾಡಿದರು ಎಂದು ತಿಳಿಸಿದರು. ವಾಜಪೇಯಿ ಅವರು ಒಂದು ಮತದಿಂದ ಅಧಿಕಾರ ಕಳೆದುಕೊಂಡಾಗ ಸದನದಲ್ಲಿ ಒಂದು ಗಂಟೆ ಸುದೀರ್ಘವಾಗಿ ಮಾತನಾಡಿದರು. ಅವರ ಭಾವನಾತ್ಮಕ ಭಾಷಣವು ಇಡೀ ದೇಶ ಕಣ್ಣೀರು ಹಾಕುವಂತೆ ಮಾಡಿತು.

ಆನಂತರ ಅವರು ಮತ್ತೆ ಪ್ರಧಾನಿಯಾದರು. ರಾತ್ರೋರಾತ್ರಿ ಪೋಖ್ರಾನ್ ಪ್ರಯೋಗ ನಡೆಸಿ ಇಡೀ ಜಗತ್ತು ಭಾರತದ ಕಡೆ ತಿರುಗಿ ನೋಡುವಂತೆ ಮಾಡಿದರು. ಆಗ ಅನೇಕ ರಾಷ್ಟ್ರಗಳು, ಭಾರತಕ್ಕೆ ದಿಗ್ಬಂದನ ವಿಧಿಸಿದವು. ಭಾರತದ ಶಕ್ತಿ ನಿಮಗೆ ಗೊತ್ತಿಲ್ಲ ಎಂದು ಸವಾಲು ಹಾಕಿ ಭಾರತ ಹೇಗೆ ಶಕ್ತಿ ಶಾಲಿ ತಾವು ನಾನು ತೋರಿಸಿಕೊಟ್ಟರು.

ಕಾರ್ಗಿಲ್ ಯುದ್ಧದ ವೇಳೆ ಆಪರೇಷನ್ 'ವಿಜಯ್' ಲಾಂಚ್ ಮಾಡಿದರು. ಯುದ್ಧದಲ್ಲಿ ಗೆದ್ದರು. ಆಗ ಮಾತಿನಿಂದಲ್ಲ ಕೃತಿಯಿಂದ ಶಕ್ತಿ ಪ್ರದರ್ಶಿಸಿದರು. ಯಾವ ದೇಶದ ವಿರುದ್ಧ ಯುದ್ಧ ಸಾರಿದ್ದರೋ, ಅದೇ ದೇಶದ ಸ್ನೇಹ ಸಂಪಾದಿಸಲು ಸಂಜೋತಾ ಎಕ್ಸ್‌ಪ್ರೆಸ್ ರೈಲು, ಬಸ್ ಸೇವೆ ಆರಂಭಿಸಿದರು. ಮೊದಲ ಬಸ್‌ನಲ್ಲಿ ತಾವೇ ಪ್ರಯಾಣಿಸಿ ನೆರೆಯ ರಾಷ್ಟ್ರದೊಡನೆ ಮಾತುಕತೆ ನಡೆಸಿದರು ಎಂದರು.

ಹವ್ಯಕರ ಜನಸಂಖ್ಯೆ ಹೆಚ್ಚಳಕ್ಕೆ ರಾಘವೇಶ್ವರ ಶ್ರೀ ಕರೆ: 3ನೇ ಮಗು ಹೆತ್ತ ತಾಯಿಗೆ 'ವೀರ ಮಾತೆ' ಪ್ರಶಸ್ತಿ

ಬೆಂಗಳೂರು, ಡಿ.28– ಹವ್ಯಕ ಸಮುದಾಯದವರ ಜನಸಂಖ್ಯೆ ಕುಸಿಯುತ್ತಿರುವುದರಿಂದ ಮುಂದಿನ ತಲೆಮಾರಿನ ಬೆಳವಣಿಗೆಗೆ ಸಂಕಷ್ಟ ಎದುರಾಗುವಂತಾಗಿದೆ



ಹೀಗಾಗಿ, ಹವ್ಯಕರು ಮೂರನೇ ಮಗುವನ್ನು ಹೊಂದುವತ್ತ ಗಮನಹರಿಸಬೇಕು ಎಂದು ಹೊಸನಗರದ ರಾಮಚಂದ್ರಾಪುರ ಮಠದ ರಾಘವೇಶ್ವರಭಾರತೀ ಸ್ವಾಮೀಜಿ ಕರೆ ನೀಡಿದ್ದಾರೆ.

ಆ ಮೂರನೇ ಮಗುವಿನ ಪಾಲನೆಯ ಹೊಣೆಯನ್ನು ನಮ್ಮ ರಾಮಚಂದ್ರಾಪುರ ಮಠ ಹೊರಲಿದೆ ಮತ್ತು ಆ ಮಗುವಿಗೆ ನಾವೇ ತಂದೆ–ತಾಯಿಯಾಗಿ ಪೋಷಿಸುತ್ತೇವೆ. ಮೂರಕ್ಕಿಂತ ಹೆಚ್ಚು ಮಗುವಿಗೆ ಜನ್ಮ ನೀಡುವ ತಾಯಿಗೆ 'ವೀರಮಾತೆ ಪ್ರಶಸ್ತಿ' ನೀಡಲು ಉದ್ದೇಶಿಸಲಾಗಿದೆ ಎಂದೂ ಅವರು ಘೋಷಿಸಿದ್ದಾರೆ.


ಶ್ರೀ ಅಖಿಲ ಹವ್ಯಕ ಮಹಾಸಭಾದಿಂದ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಮೂರು ದಿನಗಳ ತೃತೀಯ ವಿಶ್ವ ಹವ್ಯಕ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಹವ್ಯಕ ಸಮುದಾಯದವರು ಜನಸಂಖ್ಯಾ ನಿಯಂತ್ರಣ ನಿಯಮವನ್ನು ಗಂಭೀರವಾಗಿ ಪರಿಗಣಿಸಿದಂತಿದೆ. ಹೀಗಾಗಿ ಕೇವಲ ಒಂದು ಮಗುವಿಗೆ ಸುಮ್ಮನಾಗುತ್ತಿದ್ದಾರೆ. ಮಕ್ಕಳನ್ನು ಭಾರ ಎಂದು ತಿಳಿದ ಪರಿಣಾಮ ಹವ್ಯಕ ಸಮುದಾಯದ ಸಂಖ್ಯೆ ಕುಸಿಯುತ್ತಿದೆ. ಇದು ಮುಂಬರುವ ಸಂಕಷ್ಟ ಮತ್ತು ಯುವ ಪೀಳಿಗೆಯ ಬೆಳವಣಿಗೆ ಮೇಲೆ ಪರಿಣಾಮ ಬೀರಲಿದೆ. ಹವ್ಯಕರು ಅಪರೂಪದ ತಳಿ. ಇದನ್ನು ಉಳಿಸಬೇಕಿದೆ. ಹೀಗಾಗಿ ಪ್ರತಿ ದಂಪತಿಯೂ ಕನಿಷ್ಠ 3 ಮಕ್ಕಳಿಗೆ ಜನ್ಮ ನೀಡಬೇಕು. ಒಂದು ವೇಳೆ ಮೂರನೇ ಮಗುವಿನ ಪಾಲನೆ ಸಾಧ್ಯವಾಗದಿದ್ದರೆ ಆ ಮಗುವಿನ ಪಾಲನೆಯನ್ನು ಶ್ರೀ ರಾಮಚಂದ್ರಾಪುರ ಮಠವೇ ಮಾಡಲಿದೆ. ಆ ಮಗುವಿಗೆ ತಂದೆ–ತಾಯಿಯಾಗಿ ಶೈಕ್ಷಣಿಕ ಸೇರಿ ಎಲ್ಲ ವಿಚಾರದಲ್ಲೂ ಪೋಷಣೆ ಮಾಡುತ್ತೇವೆ ಎಂದರು.

ದಕ್ಷಿಣ ಕೊರಿಯಾದಲ್ಲಿ ಈಗ ಜನಸಂಖ್ಯೆ ಕುಸಿಯುತ್ತಿದೆ. ಜನಸಂಖ್ಯಾ ನಿಯಂತ್ರಣದ ನೆಪದಲ್ಲಿ ಮಕ್ಕಳನ್ನು ಹೊಂದದಂತೆ ದಕ್ಷಿಣ ಕೊರಿಯಾದಲ್ಲಿ ನಿಯಂತ್ರಣ ಹೇರಲಾಗಿತ್ತು. ಹೀಗಾಗಿ ದಕ್ಷಿಣ ಕೊರಿಯಾದಲ್ಲಿ ಜನಸಂಖ್ಯೆ ಭಾರಿ ಪ್ರಮಾಣದಲ್ಲಿ ಕುಸಿಯುತ್ತಿದೆ. ಅದೇ ಪರಿಸ್ಥಿತಿ ಹವ್ಯಕರಿಗೂ ಎದುರಾಗಿದೆ ಎಂದರು. ಯಾರೂ ಇದನ್ನು ತಮಾಷೆಯಾಗಿ ತೆಗೆದುಕೊಳ್ಳದೆ, ಗಂಭೀರ ಚಿಂತನೆ ನಡೆಸಬೇಕು. ಜನಸಂಖ್ಯಾ ನಿಯಂತ್ರಣ ನಿಯಮವನ್ನು ಯಾವ ಸಮುದಾಯದವರು ಅಳವಡಿಸಿಕೊಳ್ಳಬೇಕೋ ಅವರು ಅಳವಡಿಸಿಕೊಳ್ಳಲಿಲ್ಲ. ಅದನ್ನು ಹವ್ಯಕ ಸಮಾಜದವರು ಗಂಭೀರವಾಗಿ ಪರಿಗಣಿಸಿದ ಪರಿಣಾಮ ಈಗ ಸಮಸ್ಯೆ ಎದುರಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.

ಕಾಂಗ್ರೆಸ್ ಮುಖಂಡ ರಾಕೇಶ್ ಪಾಪಣ್ಣ ಅವರ ಹುಟ್ಟುಹಬ್ಬ ಆಚರಣೆ...



ಕಾಂಗ್ರೆಸ್ ಮುಖಂಡರೂ ಆದ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ರಾಕೇಶ್ ಪಾಪಣ್ಣ ಅವರ ಹುಟ್ಟುಹಬ್ಬದ ಪ್ರಯುಕ್ತ ಎಚ್‌ಆರ್ ತಂಡದ ವತಿಯಿಂದ ಕೂರ್ಗಳ್ಳಿಯಲ್ಲಿರುವ ಚಿಗುರು ಆಶ್ರಮದಲ್ಲಿ ಅನ್ನ ಸಂತರ್ಪಣೆ, ಫಲಾಹಾರ ವಿತರಣೆ ಮಾಡಲಾಯಿತು. ಈ ವೇಳೆ ಮುಖಂಡರಾದ ಕೆ.ಜಿ.ನಾಗರಾಜ್, ಹಿನಕಲ್ ಪ್ರಕಾಶ್, ನಾಟಿಕೋಳಿ ಮಾಯಪ್ಪ, ದಿನೇಶ್, ಪುಟ್ಟರಾಜು, ತಮ್ಮಣ್ಣ, ಶಿವಣ್ಣ, ಸಂಜೀವ ಮತ್ತು ಎಚ್‌ಆರ್ ತಂಡದ ಸದಸ್ಯರು ಮತ್ತು ಯುವಕರು ಉಪಸ್ಥಿತರಿದ್ದರು




ದೇಣಿಗೆ ವಿತರಣೆ...

ಶತಮಾನೋತ್ಸವ ಆಚರಿಸಿಕೊಂಡಿರುವ ಬ್ರಾಹ್ಮಣ ಧರ್ಮ ಸಹಾಯ ಸಭಾದ ನೂತನ ಶಾಖೆ ಆರಂಭಿಸಲು ಕುಪ್ಪಲೂರು ನಾಗರಿಕ ಸೌಲಭ್ಯ ನಿವೇಶನದಲ್ಲಿ ಭೂಮಿಪೂಜೆ ನೆರವೇರಿಸಲಾಯಿತು. ಈ ವೇಳೆ ಶ್ರೀಮತಿ ಕನಕಲಕ್ಷ್ಮಮ್ಮ ಅವರು ಕೊಳವೆ ಬಾವಿ ಕೊರೆಸಲು 80 ಸಾವಿರ ರೂ. ದೇಣಿಗೆ ನೀಡಿದರು. ಚಿತ್ರದಲ್ಲಿ ಸಂಘದ ಅಧ್ಯಕ್ಷ ಹೆಚ್.ಅಶ್ವಥ್ ನಾರಾಯಣ, ಅವರ ಪುತ್ರ, ಸಂಘದ ಗೌರವ ಕಾರ್ಯದರ್ಶಿ ಎಂ.ಎಸ್. ರವೀಂದ್ರ ಇನ್ನಿತರರು ಉಪಸ್ಥಿತರಿದ್ದರು.

ಇಂದು ವಿಶೇಷ ಕಾರ್ಯಾಗಾರ

ಮೈಸೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಡಿ.29ರಂದು ಯುವಜನತೆಯನ್ನು ಸಶಕ್ತಗೊಳಿಸುವ ನಿಟ್ಟಿನಲ್ಲಿ ಒತ್ತಡವನ್ನು ಹೇಗೆ ನಿರ್ವಹಿಸಬೇಕು ಮತ್ತು ಯುವಜನತೆಗೆ ಸಂಬಂಧಿಸಿದ ವಿಷಯ ಕುರಿತು ಪೋಷಕರಿಗೆ ವಿಶೇಷ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಮೈಸೂರು ಜಿಲ್ಲೆಯ ಪೋಷಕರು ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಳ್ಳಬಹುದು. ಮೊದಲು ಬಂದ 50 ಪಾಲಕರು /ಪೋಷಕರಿಗೆ (ಕುಟುಂಬದಲ್ಲಿ ಒಬ್ಬರಿಗೆ ಮಾತ್ರ) ಆದ್ಯತೆ ನೀಡಲಾಗುತ್ತದೆ. ಮಾಹಿತಿಗೆ ಯುವ ಸಬಲೀಕರಣ–ಕ್ರೀಡಾ ಇಲಾಖೆ ಸಹಾಯಕ ನಿರ್ದೇಶ ಕರು ದೂ.ಸಂ:0821–2564179, ಯುವ ಸ್ಪಂದನ ಕೇಂದ್ರದ ದೂ.ಸಂ:0821–2444922, ಯುವ ಸ್ಪಂದನ ಕೇಂದ್ರದ ಕ್ಷೇತ್ರ ಸಂಪರ್ಕಾಧಿಕಾರಿ ಮೊ. 9632104204 ಸಂಪರ್ಕಿಸಬಹುದು.

ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ



2025ನೇ ಸಾಲಿನ ನೂತನ ವರ್ಷದ ಕ್ಯಾಲೆಂಡರ್ ಅನ್ನು ಮೈಸೂರಿನ ವಿಜಯನಗರದ ಶ್ರೀ ಯೋಗಾನರಸಿಂಹ ದೇವಾಲಯದ ಆವರಣದಲ್ಲಿ ದೇವಾಲಯದ ಸಂಸ್ಥಾಪಕರಾದ ಪ್ರೊ.ಡಾ.ಭಾಷ್ಯಂ ಸ್ವಾಮೀಜಿ ಬಿಡುಗಡೆ ಮಾಡಿದರು. ಈ ವೇಳೆ ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್, ನಟ ಡಾ.ರಾಜ್‌ಕುಮಾರ್ ಪುತ್ರಿ ಪೂರ್ಣಿಮಾ, ಅಳಿಯ ಗೋವಿಂದರಾಜು, ಸಮೃದ್ಧಿ ವಾರ್ತೆ ಪತ್ರಿಕೆಯ ಸಂಪಾದಕಿ ಸಹನಗೌಡ, ಮೈಸೂರು ಚೇಂಬರ್ಸ್ ಆಫ್ ಕಾಮರ್ಸ್ ಅಧ್ಯಕ್ಷ ಕೆ.ಬಿ.ಲಿಂಗರಾಜು, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಮಾತೃತ್ವ ಹೆಲ್ತ್ ಕೇರ್ ಸಂಸ್ಥಾಪಕ ಚೇತನ್, ಉದ್ಯಮಿ ಹೇಮಂತ್‌ಕುಮಾರ್ ಇನ್ನಿತರರು ಹಾಜರಿದ್ದರು.

ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಹಿನ್ನೆಲೆ

ಪ್ರಿಯಾಂಕ್ ಖರ್ಗೆ ಅಟ್ಟಹಾಸದ ಬಗ್ಗೆ ಉನ್ನತ ತನಿಖೆಗೆ ಛಲವಾದಿ ನಾರಾಯಣಸ್ವಾಮಿ ಆಗ್ರಹ

ಬೆಂಗಳೂರು, ಡಿ.28(ಕೆಎಂಶಿ)– ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅಟ್ಟಹಾಸ ಮೀತಿ ಮೀರಿದೆ ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಗಂಭೀರವಾಗಿ ಆರೋಪಿಸಿದ್ದಾರೆ.



ನಾರಾಯಣಸ್ವಾಮಿ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲಾ ವ್ಯವಹಾರಗಳಲ್ಲಿ ತಮಗೆ ಬೇಕಾದವರನ್ನು ಸಹಚರರನ್ನಾಗಿ ಮಾಡಿಕೊಂಡು, ಮರಳು, ಟೈಲ್ಸ್, ಸಿಮೆಂಟ್ ಸೇರಿದಂತೆ ಎಲ್ಲ ರೀತಿಯ ದಂಧೆಗಳಲ್ಲಿ ತೊಡಗಿಸಿಕೊಂಡಿದ್ದಾರೆ ಎಂದರು.

ಗುತ್ತಿಗೆ ವಿಚಾರದಲ್ಲೂ ತಮಗೆ ಬೇಕಾದವರ ನೇಮಕ ಮಾಡಿದ್ದು, ಇದೇ ಕಾರಣಕ್ಕೆ ಸಚಿನ್ ಎಂಬುವರು ಆತ್ಮಹತ್ಯೆ ಮಾಡಿಕೊಳ್ಳಬೇಕಾಯಿತು. ಈ ಘಟನೆಯ ಉನ್ನತ ತನಿಖೆ ಆಗಬೇಕು. ಪ್ರಿಯಾಂಕ್ ಖರ್ಗೆ ಅವರನ್ನು ಸಚಿವ ಸ್ಥಾನದಿಂದ ಕೈಬಿಟ್ಟು ತಕ್ಷಣ ಬಂಧಿಸಬೇಕು. ತಪ್ಪಿದಲ್ಲಿ ಬಿಜೆಪಿ ಉಗ್ರಹೋರಾಟ ಮಾಡಬೇಕಾಗುತ್ತದೆ ಎಂದು ಮೃತ ಸಚಿನ್ 7 ಪುಟಗಳ ಡೆತ್‌ನೋಟ್ ಬರೆದು ಸಾಮಾಜಿಕ ಜಾಲತಾಣದಲ್ಲೂ ಹಾಕಿದ್ದಾರೆ. ಅದರಲ್ಲಿ ಇನ್ನೂ ಕೆಲವರನ್ನು ಸುಪಾರಿ ಕೊಟ್ಟು ಸಾಯಿಸುವ ವಿಚಾರವೂ ಪ್ರಸ್ತಾಪವಾಗಿದೆ.

ರಿಪಬ್ಲಿಕ್ ಆಫ್ ಕಲಬುರಗಿ ಆಗಿದ್ದು, ಕರ್ನಾಟಕದ ಆಡಳಿತ ವ್ಯವಸ್ಥೆಯಿಂದಲೇ ಬೇರೆಯಾಗಿದೆ. ಅಲ್ಲಿನ ಪೊಲೀಸ್ ಸಹಾ ಪ್ರಿಯಾಂಕ್ ಖರ್ಗೆ ಹೇಳಿದ್ದೇ ಆಡಳಿತ ಎಂಬಂತೆ ನಡೆದುಕೊಳ್ಳುತ್ತಿದ್ದಾರೆ.

ಕಲಬುರಗಿಯಲ್ಲಿ ಖರ್ಗೆ ಮನೆತನದ ದೊಡ್ಡ ಪಾರುಪತ್ಯ ನಡೆಯುತ್ತಿದೆ, ಬೇರೆ ಯಾರಿಗೂ ಅಭಿಪ್ರಾಯ ವ್ಯಕ್ತಪಡಿಸಲೂ ಅವಕಾಶ ಇಲ್ಲವಾಗಿದೆ. ವಿಶೇಷವಾಗಿ ದಲಿತ ಸಮುದಾಯಗಳು ಅವರ ಕುಟುಂಬದ ವಿರುದ್ಧ ಮಾತನಾಡಿದರೆ, ಶಿಕ್ಷೆ ಅನುಭವಿಸಬೇಕಾಗುತ್ತದೆ. ಪೊಲೀಸ್‌ನವರು ಅಂಥವರ ಮನೆ ಮುಂದೆ ಹಾಜರಾಗುತ್ತಾರೆ ಎಂದರು.

ಮೈಸೂರು ಕಾಂಗ್ರೆಸ್ ಕಚೇರಿಯಲ್ಲಿ ಮಾಜಿ ಪ್ರಧಾನಿ ಡಾ.ಮನಮೋಹನ್‌ಸಿಂಗ್‌ರಿಗೆ ಭಾವಪೂರ್ಣ ಶ್ರದ್ಧಾಂಜಲಿ

ಭಾರತದ ಸುಸ್ಥಿರ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಿದ ಮಹಾನ್ ನಾಯಕ; ಬಣ್ಣನೆ

ಮೈಸೂರು, ಡಿ.28(ಬಿಎಲ್‌ಯು)– ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಇಂದು ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಈ ವೇಳೆ ನಡೆದ ನುಡಿ ನಮನ ಕಾರ್ಯಕ್ರಮದಲ್ಲಿ ಡಾ.ಮನಮೋಹನ್ ಸಿಂಗ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅರ್ಥಶಾಸ್ತ್ರ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಕೆ.ಸಿ.ಬಸವರಾಜ್, ಪಿ.ವಿ.ನರಸಿಂಹರಾವ್ ಸರ್ಕಾರದಲ್ಲಿ ವಿತ್ತ ಸಚಿವರಾಗಿದ್ದ ಡಾ.ಮನಮೋಹನ್ ಸಿಂಗರು ಜಾರಿಗೊಳಿಸಿದ ಹಲವು ಆರ್ಥಿಕ ನೀತಿಗಳು ದೇಶ ದಿವಾಳಿ ಆಗುವುದನ್ನು ತಪ್ಪಿಸಿತು ಎಂದರು.

ಡಾ.ಮನಮೋಹನ್ ಸಿಂಗ್ ಅವರು ಮಂಡಿಸಿದ ಮೊದಲ ಬಜೆಟ್‌ನಲ್ಲೇ ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣ ನೀತಿ ದೇಶ ಸುಸ್ಥಿರ ಅಭಿವೃದ್ಧಿಗೆ ಭದ್ರ ಬುನಾದಿ ಹಾಕಿದರು ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಈ ಮೂರು ನೀತಿಗಳಿಂದ ವಿದೇಶಿ ಉದ್ಯಮಿಗಳು ಭಾರತದಲ್ಲಿ ಬಂಡವಾಳ ಹೂಡಲು ಮುಕ್ತ ಅವಕಾಶ ಕಲ್ಪಿಸಿದರು.



ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಶನಿವಾರ ದಿವಂಗತ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸುವ ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಕೆ.ಸಿ.ಬಸವರಾಜ್ ಮಾತನಾಡಿದರು.

ಜೊತೆಗೆ ತೆರಿಗೆ ನೀತಿ ಸಡಿಲಗೊಳಿಸಿ ದೇಶದ ಆರ್ಥಿಕತೆ ಸುಧಾರಣೆಯಾಗಲು ಅನುವು ಮಾಡಿಕೊಟ್ಟರು ಎಂದು ಪ್ರೊ.ಬಸವರಾಜ್ ಅಭಿಪ್ರಾಯಪಟ್ಟರು.

ಪ್ರಧಾನಿಯಾಗಿದ್ದ ಪಿ.ವಿ.ನರಸಿಂಹ ರಾವ್ ಅವರ ಬೆಂಬಲದೊಂದಿಗೆ ಆರ್ಥಿಕತೆಯಲ್ಲಿ ಸುಧಾರಣೆ ತಂದು ದೇಶದ ಜಿಡಿಪಿ ಬೆಳವಣಿಗೆ ಸಾಧಿಸಲು ಕಾರಣೀಭೂತರಾದರು. ಇದರಿಂದ ದೇಶದ ಅರ್ಥ ವ್ಯವಸ್ಥೆ ಹೊಸ ಹಳಿಯ ಮೇಲೆ ಬಂದು ನಿಂತಿತು ಎಂದು ಪ್ರಶಂಸಿಸಿದರು.

ರಾಜಕೀಯ ಹಿನ್ನೆಲೆ ಇಲ್ಲದಿದ್ದರೂ ಪ್ರಧಾನಿಯಾಗಿ ಹಲವು ಹೊಸ ಆಡಳಿತ ನೀತಿ ಜಾರಿಗೊಳಿಸಿ ಆರ್ಥಿಕತೆಯಲ್ಲಿ ಸುಧಾರಣೆ ತಂದು ವಿಶ್ವದಲ್ಲಿ ಭಾರತ ತಲೆ ಎತ್ತಿ ನಿಲ್ಲುವಂತೆ ಮಾಡಿದರು. ಡಾ.ಮನಮೋಹನ್ ಸಿಂಗ್ ರೂಪಿಸಿದ ಮಾರ್ಗದಲ್ಲಿ ಇಂದಿಗೂ ನಮ್ಮ ದೇಶ ಮುನ್ನಡೆಯುತ್ತಿದೆ. ಇಂತಹ ವ್ಯಕ್ತಿಯ ಆಡಳಿತ ವೈಖರಿಯನ್ನು ಕೆಲವು ಕಾಂಗ್ರೆಸ್ ನಾಯಕರೇ ಟೀಕಿಸಿದ್ದು ದುರ್ದೈವದ ಸಂಗತಿ ಎಂದು ಪ್ರೊ.ಬಸವರಾಜ್ ಅಸಮಾಧಾನ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಪ್ರಧಾನಿಯಾಗಿ ಡಾ.ಮನಮೋಹನ್ ಸಿಂಗ್ ಜಾರಿಗೊಳಿಸಿದ ಆಡಳಿತ ನೀತಿಯನ್ನು ಇಡೀ ಕಾಂಗ್ರೆಸ್ ವಿರೋಧ ಮಾಡಲಿಲ್ಲ. ಕೆಲವು ನಾಯಕರು ಮಾತ್ರ ವಿರೋಧಿಸಿದರು. ಆದರೆ ಡಾ.ಮನಮೋಹನ್ ಸಿಂಗ್ ಸರ್ಕಾರದ ವಿಶಿಷ್ಟ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಜನರಿಗೆ ತಿಳಿಸುವಲ್ಲಿ ಕಾಂಗ್ರೆಸ್ ವಿಫಲವಾಯಿತು. ಇಲ್ಲದಿದ್ದರೆ ಯುಪಿಎ ಸರ್ಕಾರ ಮೂರನೇ ಅವಧಿಗೆ ಮತ್ತೆ ಅಧಿಕಾರಕ್ಕೆ ಬರುತ್ತಿತ್ತು ಎಂದು ಅಭಿಪ್ರಾಯಪಟ್ಟರು.

ತರುವಾಯ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯ ಕುಮಾರ್, ಡಾ.ಮನಮೋಹನ್ ಸಿಂಗ್ ಅಗಲಿಕೆಗೆ ಇಡೀ ದೇಶವೇ ಕಂಬನಿ ಮಿಡಿಯುತ್ತಿದೆ. ಇಂತಹ ಮಹಾನ್ ವ್ಯಕ್ತಿ ಅಂತ್ಯಕ್ರಿಯೆ ನೆರವೇರಿಸುವ ದಿನದಂದು ಕೆಲವು ರಾಜಕಾರಣಿಗಳು ಹನುಮನ ಹೆಸರಿನಲ್ಲಿ ಉತ್ಸವ, ಮೆರವಣಿಗೆ ಮಾಡಿ ಅಗಲಿದ ನಾಯಕನಿಗೆ ಅಗೌರವ ತೋರಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರಿಗೆ ಮರಣೋತ್ತರ ಭಾರತ ರತ್ನ ಪ್ರಶಸ್ತಿ ನೀಡಿ, ಅವರ ಸಮಾಧಿ ಸ್ಥಳವನ್ನು ರಾಷ್ಟ್ರೀಯ ಸ್ಮಾರಕವಾಗಿ ಘೋಷಣೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಶಾಸಕ ಕೆ.ಹರೀಶ್‌ಗೌಡ, ಮಾಜಿ ಶಾಸಕರಾದ ಕೋಟೆ ಶಿವಣ್ಣ, ಡಾ.ಭಾರತಿ ಶಂಕರ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ರಾಜ್ಯ ವಕ್ತಾರ ಹೆಚ್.ಎ.ವೆಂಕಟೇಶ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ ಹಾಗೂ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಶ್ಯಾದನಹಳ್ಳಿಯಲ್ಲಿ ಜೋಡಿ ಎತ್ತಿನಗಾಡಿ ಸ್ಪರ್ಧೆ ಆರಂಭ


ಪಾಂಡವಪುರ ತಾಲೂಕಿನ ಶ್ಯಾದನಹಳ್ಳಿ ಗ್ರಾಮದಲ್ಲಿ ನಡೆದ ರಾಜ್ಯಮಟ್ಟದ ಜೋಡಿ ಎತ್ತಿನಗಾಡಿ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿರುವ ಜೋಡಿ ಎತ್ತಿನಗಾಡಿಗಳು.

ಪಾಂಡವಪುರ, ಡಿ.28– ತಾಲೂಕಿನ ಶ್ಯಾದನಹಳ್ಳಿ ಗ್ರಾಮದ ದಣ್ಣಮ ಯುವಕರ ಬಳಗ ದೋಸ್ತಿ ದರ್ಬಾರ್ ಸಹಯೋಗದಲ್ಲಿ ಶನಿವಾರ ರಾಜ್ಯಮಟ್ಟದ ಜೋಡಿ ಎತ್ತಿನಗಾಡಿ ಓಟದ ಸ್ಪರ್ಧೆ ಆರಂಭಗೊಂಡಿತು. ಸ್ಪರ್ಧೆಯು ಭಾನುವಾರ ಸಂಜೆವರೆಗೆ ನಡೆಯಲಿದೆ.

ಶ್ಯಾದನಹಳ್ಳಿ ಗ್ರಾಮದ ಹೊರವಲಯದಲ್ಲಿ ನಡೆದ ರಾಜ್ಯಮಟ್ಟದ ಎತ್ತಿನಗಾಡಿ ಓಟದ ಸ್ಪರ್ಧೆಗೆ ಶ್ರೀವಿಜಯಕಾಳಿ ಮಠದ ರಾಜೇಶ್ ಗುರೂಜಿ ಚಾಲನೆ ನೀಡಿದರು.

ಎತ್ತಿನಗಾಡಿ ಓಟದ ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಹಲವಾರು ಜೋಡಿ ಎತ್ತಿನಗಾಡಿಗಳು ಭಾಗವಹಿಸಿದ್ದವು. ಮಾಜಿ ಪ್ರಧಾನಮಂತ್ರಿ ಡಾ. ಮನಮೋಹನ್ ಸಿಂಗ್ ಅವರು ನಿಧನದ ಹಿನ್ನೆಲೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸಿ, ನಂತರ ಸಂಜೆ 4 ನಾಲ್ಕು ಗಂಟೆಗೆ ಆರಂಭಗೊಂಡ ಜೋಡಿ ಎತ್ತಿನಗಾಡಿ ಓಟದ ಸ್ಪರ್ಧೆಯಲ್ಲಿ ಹಳ್ಳಿಕಾರ್ ತಳಿಗಳ ಜೋಡಿ ಎತ್ತುಗಳು ಭಾಗವಹಿಸಿ ಗೆಲುವಿಗಾಗಿ ಸಣಸಾಟ ನಡೆಸಿದವು.


ಸ್ಪರ್ಧೆಯಲ್ಲಿ ಭಾಗವಹಿಸಲು ಶನಿವಾರ ಸಂಜೆಯವರೆಗೂ ಎತ್ತುಗಳು ಮಾಲೀಕರು ನೋಂದಣಿ ಮಾಡಿಕೊಳ್ಳುತ್ತಿದ್ದರು.

ರಾಜೇಶ್ ಗುರೂಜಿ ಮಾತನಾಡಿ, ಜೋಡಿ ಎತ್ತಿನಗಾಡಿ ಓಟದ ಸ್ಪರ್ಧೆಯೂ ಗ್ರಾಮೀಣ ಕ್ರೀಡಾಕೂಟವಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಪ್ರಸಿದ್ಧಿ ಹೊಂದಿದೆ ಸ್ಪರ್ಧೆಯಲ್ಲಿ ಭಾಗವಹಿಸುವ ಸ್ಪರ್ಧಾಳುಗಳು ಕ್ರೀಡಾಸ್ಫೂರ್ತಿಯೊಂದಿಗೆ ಭಾಗವಹಿಸಬೇಕು ಎಂದರು. ಸ್ಪರ್ಧೆಗೆ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು, ಶಾಸಕ ದರ್ಶನ್ ಪುಟ್ಟಣ್ಣಯ್ಯ ಭಾಗವಹಿಸಿ ಶುಭಹಾರೈಸಿದರು.

ಡಿಸೆಂಬರ್‌ನಲ್ಲೂ ಕೆಆರ್‌ಎಸ್ ಭರ್ತಿ: ರೈತರ ಸಂತಸ

142 ಕೆರೆಗಳು ಭರ್ತಿ, ಕೆಲ ಕೆರೆಗಳಲ್ಲಿ ಶೇ.75ರಷ್ಟು ನೀರು

ವಾಡಿಕೆಗಿಂತ ಹೆಚ್ಚು ಮಳೆಯಾದ್ದರಿಂದ ತಮಿಳುನಾಡಿನಿಂದ ನೀರಿನ ಕ್ಯಾತೆ ಇಲ್ಲ


ವಾಡಿಕೆಗಿಂತ ಅಧಿಕವಾಗಿ ಮಳೆ ಬೀಳುತ್ತಿರುವುದರಿಂದ ಕೃಷ್ಣರಾಜಸಾಗರ ತುಂಬಿ ಹರಿಯುತ್ತಿರುವುದು.

ಶ್ರೀರಂಗಪಟ್ಟಣ, ಡಿ.28– ತಾಲೂಕಿನ ವಿಶ್ವ ವಿಖ್ಯಾತ ಕೃಷ್ಣರಾಜಸಾಗರ ಜಲಾಶಯ ಡಿಸೆಂಬರ್‌ನಲ್ಲೂ ಭರ್ತಿಯಾಗಿದ್ದು, ಗರಿಷ್ಠ ನೀರಿನ ಮಟ್ಟ 124.80 ಅಡಿ ತಲುಪಿದೆ. ಇದು 30 ವರ್ಷಗಳಲ್ಲೇ ದಾಖಲೆ ಮಟ್ಟದ ನೀರಿನ ಸಂಗ್ರಹ ಎನಿಸಿದೆ. ಇದು ರೈತರಲ್ಲಿ ಸಂತಸ ಮೂಡಿಸಿದೆ.

ಕಳೆದ 30 ವರ್ಷಗಳ ಅಂಕಿ ಅಂಶಗಳ ಪ್ರಕಾರ ಡಿಸೆಂಬರ್ ಕೊನೆಯ ವಾರದ ತನಕವೂ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಭರ್ತಿಯಾಗಿರುವಂತೆ ಕಾಯ್ದುಕೊಂಡು ಬಂದಿರುವುದು ಇದೇ ಮೊದಲು. ಕೆಆರ್‌ಎಸ್ ಜಲಾಶಯವು 49.452 ಟಿಎಂಸಿ ಅಡಿ ನೀರಿನ ಸಾಮರ್ಥ್ಯ ಹೊಂದಿದ್ದು, ಪ್ರಸ್ತುತ ಅಷ್ಟೇ ಪ್ರಮಾಣದ ನೀರಿನ ಸಂಗ್ರಹವಿದೆ. ತಮಿಳುನಾಡಿಗೆ ಬಿಡಬೇಕಾದ ಪ್ರಮಾಣಕ್ಕಿಂತ ಹೆಚ್ಚಿನ ನೀರನ್ನೇ ಈ ಬಾರಿ ಬಿಡಲಾಗಿದೆ.

ಈ ಬಾರಿ ಭಾರಿ ಮಳೆಯಾಗಿರುವುದರಿಂದ ಕೆಆರ್‌ಎಸ್ ಅಣೆಕಟ್ಟೆಯಿಂದ ನೀರು ಬಿಡದಿದ್ದರೂ ಸ್ವಾಭಾವಿಕವಾಗಿ ಕಾವೇರಿ ನೀರು ಅಣೆಕಟ್ಟೆ ಭರ್ತಿಯಾದ ಬಳಿಕ ಮೆಟ್ಟೂರು ಜಲಾಶಯಕ್ಕೆ ಹರಿದಿದೆ. ಜೊತೆಗೆ ತಮಿಳುನಾಡಿನ ಚೆನ್ನೈ ಸೇರಿದಂತೆ ಹಲವು ಭಾಗಗಳಲ್ಲಿ ನಿರಂತರ ಮಳೆ ಹಾಗೂ ಸೈಕ್ಲೋನ್ ಪರಿಣಾಮ ಸಾವು ನೋವುಗಳು ಸಹ ತಮಿಳುನಾಡಿನಲ್ಲಿ ಸಂಭವಿಸಿತ್ತು. ಹೀಗಾಗಿ ನೆರೆ ರಾಜ್ಯದವರು ಈ ಬಾರಿ ಕಾವೇರಿ ಕ್ಯಾತೆ ತೆಗೆಯಲಿಲ್ಲ.

ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ ಬರುವ 174 ಕೆರೆಗಳಲ್ಲಿ 142 ಕೆರೆಗಳು ಭರ್ತಿಯಾಗಿವೆ. ಉಳಿದ 20 ಕೆರೆಗಳಲ್ಲಿ ಶೇ.75ರಷ್ಟು, ಒಂದು ಕೆರೆಯಲ್ಲಿ ಶೇ.50ರಷ್ಟು ಮತ್ತು 3 ಕೆರೆಗಳಲ್ಲಿ ಶೇ.25ರಷ್ಟು ನೀರು ಸಂಗ್ರಹವಿದೆ. ಡ್ಯಾಂ ಮತ್ತು ಕೆರೆಗಳು ಭರ್ತಿಯಾಗಿರುವ ಕಾರಣ ಬೇಸಿಗೆ ಬೆಳೆಗೆ ನೀರು ಸಿಗಲಿದೆ ಎಂಬುದು ರೈತರ ಸಂತಸವಾಗಿದೆ.

ವಾಡಿಕೆಗಿಂತ ಹೆಚ್ಚು ಮಳೆ: ಪ್ರಸಕ್ತ ವರ್ಷ ಜನವರಿಯಿಂದ ಡಿಸೆಂಬರ್ ವರೆಗೆ 692 ಮಿಮೀ ವಾಡಿಕೆ ಮಳೆಗಿಂತ 864 ಮಿಮೀನಷ್ಟು ಮಳೆಯಾಗಿದೆ. ಅಂದರೆ ಶೇ.24.8 ರಷ್ಟು ಹೆಚ್ಚುವರಿ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಅಂಕಿ ಅಂಶಗಳು ತಿಳಿಸುತ್ತವೆ. ಕೇರಳದ ಕೆಲವು ಭಾಗ, ಕೊಡಗು ಸೇರಿದಂತೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗಿರುವ ಕಾರಣ ಕೆಆರ್‌ಎಸ್ ಡ್ಯಾಂಗೆ ಉತ್ತಮ ಒಳಹರಿವು ಬಂದಿದೆ.

ನೀರಿನ ನಿರ್ವಹಣೆ: ಈ ಬಾರಿ ಉತ್ತಮ ಮಳೆಯಾದ ಕಾರಣ ಅಣೆಕಟ್ಟೆಗೆ ಒಳಹರಿವು ಹೆಚ್ಚಾಗಿದೆ. ಕಳೆದ ವರ್ಷ ಅಣೆಕಟ್ಟೆಗೆ 136 ಹೊಸಗೇಟುಗಳನ್ನು ಅಳವಡಿಸಿದ ಪರಿಣಾಮ ನಿತ್ಯ ಪೋಲಾಗುತ್ತಿದ್ದ 1 ಸಾವಿರ ಕ್ಯುಸೆಕ್ ನೀರನ್ನು ತಡೆಗಟ್ಟಿದ್ದೇವೆ. 31 ಕಿಮೀ ಉದ್ದದ ನಾಲೆಗಳ ಆಧುನೀಕರಣ ಕಾಮಗಾರಿ ಹಾಗೂ ನೀರುಗಂಟಿಗಳು ಅತ್ಯುತ್ತಮವಾಗಿ ನೀರು ನಿರ್ವಹಣೆ ಮಾಡಿರುವುದು ಸೇರಿದಂತೆ ಇತರ ಕಾರಣಗಳಿಂದಾಗಿ ಕನ್ನಂಬಾಡಿ ಅಣೆಕಟ್ಟೆಯು ಡಿಸೆಂಬರ್ ಅಂತ್ಯದಲ್ಲೂ ಭರ್ತಿಯಾಗಿದೆ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

ಡಿ.31ರಿಂದ ಸಾರಿಗೆ ಬಸ್ ಸಂಚಾರ ಸ್ಥಗಿತಗೊಳಿಸಿ ನೌಕರರ ಮುಷ್ಕರ

ಮಂಡ್ಯ, ಡಿ.28– ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನೌಕರರ ವೇತನ ಪರಿಷ್ಕರಣೆ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಡಿ.31ರಿಂದ ಬಸ್ ಸಂಚಾರ ಸ್ಥಗಿತಗೊಳಿಸಿ ರಾಜ್ಯದಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಜಿಲ್ಲಾ ಘಟಕದ ಅಧ್ಯಕ್ಷ ನಂಜುಂಡಯ್ಯ, ಎಐಟಿಯುಸಿ ಮಂಡ್ಯ ವಿಭಾಗ ಅಧ್ಯಕ್ಷ ಮಲ್ಲೇಶ್, ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ಉಪಾಧ್ಯಕ್ಷ ಎಂ. ವಿಜಯಕುಮಾರ್ ತಿಳಿಸಿದರು.

ಮಂಡ್ಯದಲ್ಲಿ ಜಂಟಿಯಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿದಿನ ಸುಮಾರು ಒಂದು ಕೋಟಿಗೂ ಹೆಚ್ಚಿನ ಪ್ರಯಾಣಿಕರನ್ನು ರಾಜ್ಯದ ಮೂಲೆ ಮೂಲೆಗೆ ತಲುಪಿಸುವ ಮೂಲಕ ಹಾಗೂ ಶಕ್ತಿ ಯೋಜನೆಯ ಮೂಲಕ ಸರ್ಕಾರಕ್ಕೆ ಒಳ್ಳೆಯ ಹೆಸರು ತಂದುಕೊಟ್ಟಿರುವ ಸಾರಿಗೆ ನಿಗಮಗಳ ಲಕ್ಷಕ್ಕೂ ಅಧಿಕ ನೌಕರರ ಬೇಡಿಕೆಗಳ ಬಗ್ಗೆ ಸರ್ಕಾರ ನಿರ್ಲಕ್ಷ್ಯ ಧೋರಣೆ ತಳೆದಿರುವುದನ್ನು ಖಂಡಿಸಿ ಮುಷ್ಕರ ಕೈಗೊಳ್ಳಲಾಗುತ್ತಿದೆ ಎಂದರು.

ಸಾರಿಗೆ ಸಚಿವರಿಗೆ, ಮುಖ್ಯಮಂತ್ರಿಗಳಿಗೆ, ಸಾರಿಗೆ ನಿಗಮಗಳ ಆಡಳಿತ ವರ್ಗಕ್ಕೆ ಈಗಾಗಲೇ ಹಲವು ಬಾರಿ ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸಲಾಗಿತ್ತು ಆದರೂ ಈವರೆಗೂ ಸರ್ಕಾರದಿಂದಾಗಲಿ ಅಥವಾ ಸಾರಿಗೆ ನಿಗಮಗಳ ಆಡಳಿತ ವರ್ಗದಿಂದಾಗಲಿ ಯಾವುದೇ ರೀತಿಯ ಸ್ಪಂದನೆ ಸಿಗದಿರುವುದು ಕಾರ್ಮಿಕರಿಗೆ ತೀವ್ರ ನಿರಾಸೆ ಮೂಡಿಸಿದೆ. ಮುಷ್ಕರ ನಡೆಸುವ ಬಗ್ಗೆ ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ ಡಿ.9 ರಂದು ಬೆಳಗಾವಿ ಅಧಿವೇಶನದಲ್ಲಿ ಸರ್ಕಾರದ ಗಮನಕ್ಕೆ ತಂದಿದೆ. ಕಾರ್ಮಿಕ ಇಲಾಖೆಯ ನಿಯಮಗಳ ಪ್ರಕಾರ, ಮುಷ್ಕರ ಮಾಡುವ ಮುನ್ನ 21 ದಿನ ಮುಂಚಿತವಾಗಿ ನೋಟಿಸ್ ನೀಡಬೇಕು. ನೋಟಿಸ್ ನೀಡಿ ಗಮನಕ್ಕೆ ತಂದರೂ ಸರ್ಕಾರ ತಲೆಕೆಡಿಸಿಕೊಳ್ಳುತ್ತಿಲ್ಲ ಎಂದು ಆಕ್ಷೇಪಿಸಿದರು.

ಈ ಮುಷ್ಕರ ಯಶಸ್ವಿಗೆ ಸಾರಿಗೆ ನಿಗಮಗಳ ಇತರೆ ಕಾರ್ಮಿಕ ಸಂಘಟನೆಗಳು, ವಿವಿಧ ಸಂಘ, ಸಂಸ್ಥೆಗಳು ಕೈಜೋಡಿಸಿವೆ. ಸಾರ್ವಜನಿಕರು ಮುಷ್ಕರಕ್ಕೆ ಸಹಕಾರ ನೀಡುವ ಮೂಲಕ ನಮ್ಮ ಹೋರಾಟಕ್ಕೆ ಬೆಂಬಲ ನೀಡುವಂತೆ ಅವರು ಮನವಿ ಮಾಡಿದರು.

2020ರ ಜ.1ರಿಂದ 38 ತಿಂಗಳ ವೇತನ ಹಿಂಬಾಕಿ ಪಾವತಿಸಬೇಕು. ಜ.2024 ರಿಂದ ಹೊಸ ವೇತನ ಪರಿಷ್ಕರಣೆ, ನಿವೃತ್ತ ನೌಕರರಿಗೆ 2024ರ ಜೂನ್ 27ರ ಸುತ್ತೋಲೆ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂಬ ಬೇಡಿಕೆ ಸೇರಿದಂತೆ ಇನ್ನಿತರ ಬೇಡಿಕೆಗಳಿಗೆ ಸರ್ಕಾರ ತಕ್ಷಣ ಸ್ಪಂದಿಸಬೇಕು ಎಂದು ಒತ್ತಾಯಿಸಿದರು.

ಭತ್ತ ಖರೀದಿ ಕೇಂದ್ರ ಶೀಘ್ರ ತೆರೆಯಲು ಒತ್ತಾಯ

ಮಳವಳ್ಳಿ: ಭತ್ತ ಖರೀದಿ ಕೇಂದ್ರ ಶೀಘ್ರ ತೆರೆಯಬೇಕು. ರಾಜ್ಯ ಸರ್ಕಾರ 700 ರೂ. ಪ್ರೋತ್ಸಾಹ ಧನ ನೀಡಿ ಕ್ವಿಂಟಾಲ್ ಭತ್ತಕ್ಕೆ 3000 ರೂ. ನೀಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕ ಭರತ್‌ರಾಜ್ ಸರ್ಕಾರಕ್ಕೆ ಒತ್ತಾಯಿಸಿದರು.

ಪಟ್ಟಣದ ಪ್ರಾಂತ ರೈತ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಶೀಘ್ರ ಭತ್ತ ಖರೀದಿ ಕೇಂದ್ರ ತೆರೆಯಬೇಕು ಹಾಗೂ ಕೇರಳ ಮಾದರಿಯಲ್ಲಿ ರಾಜ್ಯ ಸರ್ಕಾರ ಪ್ರೋತ್ಸಾಹ ಧನವನ್ನು ಎಂಎಸ್‌ಪಿ ಜೊತೆಗೆ ಹೆಚ್ಚುವರಿಯಾಗಿ.700 ರೂ. ನೀಡುವ ಮೂಲಕ ಕ್ವಿಂಟಲ್ ಭತ್ತಕ್ಕೆ ಕನಿಷ್ಠ 3000 ರೂಗಳ ಬೆಂಬಲ ಬೆಲೆ ನೀಡಬೇಕು ಹಾಗೂ ಅಕಾಲಿಕ ಮಳೆಯಿಂದಾಗಿ ಭತ್ತ ಬೆಳೆಗಾರರ ಸಂಕಷ್ಟಕ್ಕೆ ಒಳಗಾಗಿದ್ದು ಅವರಿಗೆ ಸೂಕ್ತ ಪರಿಹಾರ ನೀಡಬೇಕು ಎಂದರು.

ಖರೀದಿಗೆ ಸಂಬಂಧಪಟ್ಟಂತೆ ಸಾಫ್ಟ್‌ವೇರ್ ಇನ್ನೂ ತಯಾರಿಸಿಲ್ಲ. ಸಾಗಾಣಿಕೆಗೆ ಟೆಂಡರ್ ಆಗಿಲ್ಲ ಹಮಾಲಿಗಳು ನಿಗದಿಯಾಗಿಲ್ಲ ಎಂದು ಹೇಳುತ್ತಾರೆ. ಈ ವ್ಯವಸ್ಥೆಯನ್ನು ನೋಡಿದರೆ ಭತ್ತ ಬೆಳೆಗಾರರನ್ನು ಮತ್ತಷ್ಟು ಸಂಕಷ್ಟಕ್ಕೆ ರಾಜ್ಯ ಸರ್ಕಾರ ದೂಡುತಿದೆ ಎಂದು ಆರೋಪಿಸಿದರು. ಪತ್ರಿಕಾಗೋಷ್ಠಿಯಲ್ಲಿ ಎನ್.ಲಿಂಗರಾಜಮೂರ್ತಿ, ಮಹದೇವು, ಮುಖಂಡರಾದ ಹಿಪ್ಜುಲ್ಲಾ, ಸತೀಶ್ ಗುಳಗಟ್ಟ ಉಪಸ್ಥಿತರಿದ್ದರು.

ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣಕ್ಕೆ ರೈತ ಸಂಘ ವಿರೋಧ


ಜಿಲ್ಲಾ ರೈತ ಸಂಘದ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ ಮಾತನಾಡುತ್ತಿರುವುದು.

ಮಂಡ್ಯ, ಡಿ.28– ರೈತರ ಜೀವನಾಡಿ ಕೆಆರ್‌ಎಸ್ ಡ್ಯಾಂ ಕೆಳಭಾಗದಲ್ಲಿರುವ ಬೃಂದಾವನ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣಕ್ಕೆ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ವಿರೋಧಿಸುತ್ತದೆ ಎಂದು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಸಂಘಟನಾ ಕಾರ್ಯದರ್ಶಿ ಸುನಂದಾ ಜಯರಾಂ ತಿಳಿಸಿದರು.

ನಗರಲ್ಲಿರುವ ಪ್ರವಾಸಿಮಂದಿರದಲ್ಲಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಆಶ್ರಯದಲ್ಲಿ ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳ ಸಭೆ ನಡೆಸಿ ಹಲವು ನಿರ್ಣಯಗಳನ್ನು ಕೈಗೊಂಡು ನಂತರ ಮಾತನಾಡಿದರು.

ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಆಶ್ರಯದಲ್ಲಿ ಮಂಡ್ಯ ಜಿಲ್ಲೆಯಲ್ಲಿರುವ ಎಲ್ಲಾ ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು ಒಗ್ಗೂಡಿ, ಸಭೆ ನಡೆಸಿ, ಚರ್ಚಿಸಿದ್ದೇವೆ, ಈ ಸಭೆಯಲ್ಲಿ ಕೆ.ಆರ್.ಎಸ್.ಅಣಕಟ್ಟೆ ಕೆಳಭಾಗದಲ್ಲಿ ನಿರ್ಮಾಣ ಮಾಡುತ್ತೇವೆ ಎಂದು ರಾಜ್ಯ ಸರ್ಕಾರ ಕೈಗೊಂಡಿರುವ ಅಮ್ಯೂಸ್‌ಮೆಂಟ್ ಪಾರ್ಕ್ ನಿರ್ಮಾಣಕ್ಕೆ ಸಚಿವ ಸಂಪುಟಸಭೆಯಲ್ಲಿ ತೀರ್ಮಾನ ಮಾಡಿದ್ದು, ಟೆಂಡರ್ ಕರೆಯುವ ಪ್ರಕ್ರಿಯೆಗೆ ಸಂಪೂರ್ಣ ವಿರೋಧವಿದೆ ಎಂದು ಎಚ್ಚರಿಸಿದರು.

ಸರ್ಕಾರ ಕೂಡಲೇ ಈ ಯೋಜನೆಯನ್ನು ಕೈಬಿಡಬೇಕು ಎನ್ನುವ ತೀರ್ಮಾನವನ್ನು ಸಭೆ ನಿರ್ಣಯಮಾಡಿದೆ, ಈ ವಿಚಾರ ಕುರಿತು ಕಾವೇರಿ ಕೊಳ್ಳದ ರೈತರಿಗೆ ಜಾಗೃತಿ ಮೂಡಿಸಲಾಗುವುದು, ಪತ್ರಿಕಾಗೋಷ್ಠಿ ಮೂಲಕ ಮಾಹಿತಿ ವಿಸ್ತರಿಸುತ್ತೇವೆ ಎಂದು ತಿಳಿಸಿದರು.

ಕೆ.ಆರ್.ಎಸ್.ಡ್ಯಾಂ ಆಜುಬಾಜಿನಲ್ಲಿ 6 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಜನರಲ್ಲಿ ಅರಿವು ಹೆಚ್ಚಿಸುತ್ತೇವೆ, ತಾಂತ್ರಿಕ ತೊಂದರೆಗಳ ಬಗ್ಗೆ ಮಾಹಿತಿ ನೀಡುತ್ತೇವೆ, ಸಮಿತಿ ವತಿಯಿಂದಲೇ ಇಂತಹ ಕಾರ್ಯ ಮಾಡಲಾಗುವುದು ಎಂದು ನುಡಿದರು.

ಮೊನ್ನೆ ಮೊನ್ನೆ ಕೆ.ಆರ್.ಎಸ್.ಅಣೆಕಟ್ಟೆಯಿಂದ ಬೆಂಗಳೂರಿಗೆ 5ನೇ ಹಂತದ ಕುಡಿಯುವ ನೀರಿನ ಯೋಜನೆ ಬಗ್ಗೆ ಕೆಆರ್‌ಎಸ್ ನೀರು ಸಾಕಷ್ಟು ಪ್ರಮಾಣದಲ್ಲಿ ತಲುಪದ ಮಳವಳ್ಳಿ ಭಾಗದಲ್ಲಿಯೇ ಶಾಸಕ ನರೇಂದ್ರ ಸ್ವಾಮಿ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಉದ್ಘಾಟನೆಯಾಗಿರುವುದು ದುರಂತದ ವಿಪರ್ಯಾಸದ ಸಂಗತಿ ಎಂದು ವಿಷಾದಿಸಿದರು.

ಅಂದು ಈ ಯೋಜನೆಯನ್ನು ವಿರೋಧ ಮಾಡಿದ್ದೇವೆ, ಈ ಕೂಡಲೇ ಇಂತಹ ಯೋಜನೆಗಳನ್ನು ಮಾಡಬಾರದು, ಮತ್ತೇ ತತಕ್ಷಣವೇ 6ನೇ ಹಂತದ ಯೋಜನೆಯ ರಚನೆಗೆ ಸರ್ಕಾರದಿಂದ ಸುತ್ತೋಲೆ ಬರುತ್ತೆ, 4ಸಾವಿರ ಕೋಟಿ ಚಿಲ್ಲರೆಹಣ, ಮತ್ತೊಂದೆ 7ಸಾವಿರ ಕೋಟಿ ರೂ. ಎಂದು ಹೇಳುತ್ತಿದ್ದಾರೆ, ಸ್ಪಷ್ಟೀಕರಣ ನಮಗೆ ಸಿಗಲಿಲ್ಲ ಎಂದರು.

6ನೇ ಹಂತ ಯೋಜನೆಯನ್ನು ಆಗಲು ಬಿಡಲ್ಲ, ಯಾಕೆಂದರೆ ಅಣೆಕಟ್ಟೆ ಕಟ್ಟಿರುವ ಉದ್ದೇಶ ರೈತರ ಬೆಳೆಗೆ ನೀರು, ಸ್ಥಳೀಯರ ಜನ ಜಾನುವಾರುಗಳ ಕುಡಿಯಲು ಉಪಯೋಗಕ್ಕೆ ಎನ್ನುವುದನ್ನು ಸರ್ಕಾರ ಮನಗಾಣಬೇಕಿದೆ ಎಂದು ಎಚ್ಚರಿಸಿದರು. ಸಭೆಯಲ್ಲಿ ರೈತ ಸಂಘದ ಚಂದ್ರಶೇಖರ್, ಮುದ್ದೇಗೌಡ, ಕಮಲಾ, ಜಯಕರ್ನಾಟಕ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ.ಎಸ್.ನಾರಾಯಣ್, ಮುಖಂಡರಾದ ಮಧುಸೂಧನ್, ವೇಣುಗೋಪಾಲ, ಮಂಜುನಾಥ್, ಸುಧೀರ್ ಮತ್ತಿತರರಿದ್ದರು.

ಒಂದನೇ ಪುಟದಿಂದ

ಪಂಚಭೂತಗಳಲ್ಲಿ ಲೀನ

ನಾಯಕನಿಗೆ ಪುಷ್ಪ ನಮನ ಸಲ್ಲಿಸಿದರು. ರಾಷ್ಟ್ರ ನಾಯಕರು ಮನ ಮೋಹನ್ ಸಿಂಗ್ ಅವರಿಗೆ ಗೌರವ ಸಲ್ಲಿಸಿದ ಬಳಿಕ, ಮೂರು ಸೇನಾ ಪಡೆಗಳಿಂದ ಸರ್ಕಾರಿ ಗೌರವಗಳನ್ನು ಸಲ್ಲಿಸಲಾಯಿತು. ನಂತರ ಸಿಂಗ್ ಅವರ ಪಾರ್ಥಿವ ಶರೀರಕ್ಕೆ ಹೊದಿಸಲಾಗಿದ್ದ ರಾಷ್ಟ್ರಧ್ವಜವನ್ನು ಮನಮೋಹನ್ ಸಿಂಗ್ ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಯಿತು. ಬಳಿಕ ಸಿಖ್ ಧರ್ಮದ ಧಾರ್ಮಿಕ ಕ್ರಮದಂತೆ ಶ್ಲೋಕಗಳನ್ನು ಪಠಣೆ ಮಾಡಿ, ಮಧ್ಯಾಹ್ನ 12.55ಕ್ಕೆ ಸರಿಯಾಗಿ ಮನಮೋಹನ್ ಸಿಂಗ್ ಅವರ ಪಾರ್ಥೀವ ಶರೀರಕ್ಕೆ ಅಗ್ನಿ ಸ್ಪರ್ಶ ಮಾಡಲಾಯಿತು. ನಿಗಮಬೋಧ್ ಘಾಟ್‌ಗೆ ಮನ ಮೋಹನ್ ಸಿಂಗ್ ಅವರ ಪಾರ್ಥಿವ ಶರೀರ ತಲುಪಿದ ಬಳಿಕ ಅಲ್ಲಿ ಅವರಿಗೆ ಸಕಲ ಸರ್ಕಾರಿ ಗೌರವಗಳನ್ನು ಸಲ್ಲಿಸಲಾಯಿತು. ಸಿಂಗ್ ಅವರ ಪಾರ್ಥಿವ ಶರೀರದ ಅಂತಿಮ ಯಾತ್ರೆಯ ವೇಳೆ ಬಂದಿದ್ದ ಲಕ್ಷಾಂತರ ಮಂದಿ ನಿಗಮ ಬೋಧ್ ಘಾಟ್‌ನ ಹೊರಭಾಗದಲ್ಲಿ ನೆರೆದಿದ್ದರು. ದೇಶದ ಮಾಜಿ ಪ್ರಧಾನಿ, ಶ್ರೇಷ್ಠ ಅರ್ಥಶಾಸ್ತ್ರಜ್ಞ ಡಾ.ಮನಮೋಹನ್ ಸಿಂಗ್ ಅವರ ನಿಧನಕ್ಕೆ ಭಾರತ ಮಾತ್ರವಲ್ಲದೇ ಇಡೀ ವಿಶ್ವಾದ್ಯಂತ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ. ಕುಸಿಯುತ್ತಿದ್ದ ಭಾರತದ ಆರ್ಥಿಕತೆಯನ್ನು ಸರಿದಾರಿಗೆ ತಂದ ನವಭಾರತದ ಆರ್ಥಿಕತೆಯ ನಿರ್ಮಾತೃ, ದೇಶ ಕಂಡ ಶ್ರೇಷ್ಠ ಪ್ರಧಾನಿಯನ್ನು ದೇಶವು ಭಾರವಾದ ಹೃದಯದಿಂದ ಬೀಳ್ಕೊಟ್ಟಿತು.

ಶೇ.15ರಷ್ಟು ಹೆಚ್ಚಳಕ್ಕೆ ಶಿಫಾರಸ್ಸು

ಅಭಿವೃದ್ಧಿ ನಿಗಮದ ಸಹಭಾಗಿತ್ವದಲ್ಲಿ ಯೋಜನೆಗಳನ್ನು ರೂಪಿಸಬೇಕು ಎಂದಿದ್ದಾರೆ. ಶಕ್ತಿ ಯೋಜನೆ ಜಾರಿ ನಂತರ ಪ್ರತಿನಿತ್ಯ ಪ್ರಯಾಣಿಕರ ಸಂಖ್ಯೆ 80 ಲಕ್ಷದಿಂದ 1.05 ಕೋಟಿಗೆ ಏರಿಕೆಯಾಗಿದೆ. ಅದರಲ್ಲಿ 26 ಲಕ್ಷ ಮಹಿಳೆಯರು ಸೇರಿದ್ದಾರೆ. ಸರ್ಕಾರ ನೀಡುವ ಸಬ್ಸಿಡಿ ಜೊತೆಗೆ ನಿಗಮಗಳು ಸಂಪನ್ಮೂಲ ಕ್ರೋಢೀಕರಣಕ್ಕೆ ಹೆಚ್ಚು ಒತ್ತು ನೀಡದಿದ್ದರೆ ಪ್ರಯಾಣಿಕರಿಗೆ ಮೂಲಸೌಕರ್ಯ ನೀಡಲು ಕಷ್ಟಕರವಾಗುತ್ತದೆ.

ಪರಿಸರ ಸಂರಕ್ಷಣೆ ದೃಷ್ಟಿಯಿಂದ ಕೇಂದ್ರ ಸರ್ಕಾರ ರಿಯಾಯಿತಿ ದರದಲ್ಲಿ ನೀಡುವ ವಿದ್ಯುತ್ ಚಾಲಿತ ಬಸ್‌ಗಳನ್ನು ಪಡೆಯಲು ಹೆಚ್ಚು ಆದ್ಯತೆ ನೀಡುವುದು.

ವಾಹನಗಳಿಗೆ ಜಿಪಿಎಸ್ ಸಾಧನ ಅಳವಡಿಕೆ ಮತ್ತು ಇ–ಆಡಳಿತಕ್ಕೆ ಹೆಚ್ಚು ಒತ್ತು ಕೊಡುವಂತೆ ತಿಳಿಸಿರುವುದಲ್ಲದೆ, ನಿಗದಿತ ದಿನಗಳೊಳಗೆ ಕಾರ್ಯಕ್ರಮ ರೂಪಿಸಲು ಆದೇಶ ಮಾಡಿದೆ. ಸಭೆಯಲ್ಲಿ ಮುಖ್ಯಕಾರ್ಯದರ್ಶಿ ಅವರಲ್ಲದೆ, ಸಾರಿಗೆ ಇಲಾಖೆ ಕಾರ್ಯದರ್ಶಿ ಎನ್.ವಿ. ಪ್ರಸಾದ್, ವಿವಿಧ ಸಾರಿಗೆ ನಿಗಮಗಳ ವ್ಯವಸ್ಥಾಪಕರಾದ ವಿ.ಅನ್ಬುಕುಮಾರ್, ಆರ್.ರಾಮಚಂದ್ರನ್ ಸೇರಿದಂತೆ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಬಿಜೆಪಿ ತೀವ್ರ ವಿರೋಧ: ಈ ಮಧ್ಯೆ, ಬಸ್ ಪ್ರಯಾಣ ದರ ಹೆಚ್ಚಳಕ್ಕೆ ಸಂಬಂಧಿಸಿದಂತೆ ರಾಜ್ಯ ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿ, ಸಾರಿಗೆ ಇಲಾಖೆಯನ್ನು ಸಮಾಧಿ ಮಾಡುವ ಮಟ್ಟಕ್ಕೆ ಈ ಸರ್ಕಾರ ತಂದು ನಿಲ್ಲಿಸಿದೆ ಎಂದಿದೆ. ಸಾರಿಗೆ ಇಲಾಖೆ ನೌಕರರು ಡಿಸೆಂಬರ್ 31 ರಿಂದ ಪ್ರತಿಭಟನೆ ನಡೆಸಲು ಸಿದ್ಧರಾಗಿದ್ದು, ಅವರ ಬೆಂಬಲಕ್ಕೆ ಬಿಜೆಪಿ ನಿಲ್ಲಲಿದೆ. ಪ್ರಾಮಾಣಿಕ ಅಧಿಕಾರಿಗಳು ಶೇಖರಿಸಿಟ್ಟ ನಿಗಮದ ಆಸ್ತಿಯನ್ನು ಮಾರಾಟ ಮಾಡಲು ಈ ಸರ್ಕಾರ ಹೊರಟಿದೆ ಎಂದು ಕಿಡಿಕಾರಿದೆ.

ಅಧಿಕಾರಿ, ಸಿಬ್ಬಂದಿಗೆ ವೇತನ ನೀಡಲು ಆಸ್ತಿ ಮಾರಾಟಕ್ಕೆ ಮುಂದಾಗಿದೆ, ಶಕ್ತಿ ಯೋಜನೆ ಜಾರಿ ನಂತರ ಸರ್ಕಾರ ಇದುವರೆಗೆ 7,401 ಕೋಟಿ ರೂ. ಕೊಡಬೇಕಿದೆ, ನಿಗಮದ ಮೇಲೆ 5,614 ಕೋಟಿ ರೂ. ಸಾಲದ ಹೊರೆ ಇದೆ.

ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಸರ್ಕಾರ ಮಧ್ಯೆ ಪ್ರವೇಶ ಮಾಡಿ ನಿಗಮ ಮತ್ತು ನೌಕರರನ್ನು ಉಳಿಸುವ ಬದಲು ದಿನನಿತ್ಯ ಬಡಾಯಿ ಕೊಚ್ಚಿಕೊಂಡು ತಿರುಗುತ್ತಿದೆ ಎಂದು ಬಿಜೆಪಿ ಲೇವಡಿ ಮಾಡಿದೆ.

ಪೇದೆಗಳ ಮೇಲೆ ಹಲ್ಲೆ, ದಾಂಧಲೆ

ಪ್ರವೇಶಿಸಿದ ಅಭಿಷೇಕ್‌ಗೌಡ ಜಗಳ ಬಿಡಿಸುವ ಉದ್ದೇಶದಿಂದ ಸಾಗರ್‌ಗೆ ಒಂದು ಏಟು ಹೊಡೆದು ದೂರ ಸರಿಯುವಂತೆ ಹೇಳುತ್ತಿದ್ದಂತೆಯೇ ಅಭಿಷೇಕ್ ಅವರ ಕಪಾಳಕ್ಕೆ ಬಾರಿಸಿದ ಸಾಗರ್, ಕತ್ತಿನಪಟ್ಟಿ ಹಿಡಿದು ಹಲ್ಲೆಗೆ ಮುಂದಾಗಿದ್ದಾನೆ. ಈ ವೇಳೆ ಬಿಡಿಸಲು ಬಂದ ಎಸ್‌ಹೆಚ್‌ಓ ಆನಂದ್ ಮತ್ತು ಮಹಿಳಾ ಪೇದೆ ಲಕ್ಷ್ಮೀ ಅವರ ಮೇಲೂ ಹಲ್ಲೆ ನಡೆಸಿದ್ದಲ್ಲದೇ, ನನ್ನ ತಂಟೆಗೆ ಬಂದರೆ ನಿಮ್ಮನ್ನು ಸುಮ್ಮನೇ ಬಿಡುವುದಿಲ್ಲ ಎಂದು ಪೊಲೀಸರಿಗೆ ಎಚ್ಚರಿಕೆ ನೀಡಿದ ಆತ, ಠಾಣೆಯಲ್ಲಿದ್ದ 20 ಲೀಟರ್‌ನ ನೀರಿನ ಕ್ಯಾನ್‌ಅನ್ನು ಎತ್ತಿ ನೆಲಕ್ಕೆ ಬಡಿದಿದ್ದಾನೆ. ಇದರ ಪರಿಣಾಮವಾಗಿ ಎಸ್‌ಹೆಚ್‌ಓ ಟೇಬಲ್ ಮೇಲೆ ಇದ್ದ ದಾಖಲೆಗಳು ಹಾಳಾಗಿವೆ ಎಂದು ಅಭಿಷೇಕ್‌ಗೌಡ ನೀಡಿದ ದೂರಿನಲ್ಲಿ ಆರೋಪಿಸಲಾಗಿದೆ. ಪೊಲೀಸರ ಮೇಲೆ ಹಲ್ಲೆ ನಡೆಸಿ, ಠಾಣೆಯಲ್ಲಿ ದಾಂಧಲೆ ನಡೆಸಿದ ಸಾಗರ್‌ನನ್ನು ಬಂಧಿಸಿದ ಸಬ್‌ಇನ್‌ಸ್ಪೆಕ್ಟರ್ ಮಹದೇವ, ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಲಾಗಿದೆ.

ಮನಮೋಹನ್ ಸಿಂಗ್ ಸ್ಮಾರಕ ನಿರ್ಮಾಣ: ಭೂಮಿ ನೀಡಲು ಕೇಂದ್ರ ಸರ್ಕಾರ ಒಪ್ಪಿಗೆ



ನವದೆಹಲಿ, ಡಿ.28– ಮಾಜಿ ಪ್ರಧಾನಮಂತ್ರಿ ಡಾ. ಮನಮೋಹನ್ ಸಿಂಗ್ ಅವರ ಸ್ಮಾರಕಕ್ಕೆ ಭೂಮಿ ನೀಡಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ.

ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರ ಸ್ಮಾರಕಕ್ಕೆ ವಿಚಾರವಾಗಿ ಕೇಂದ್ರ ಗೃಹ ಸಚಿವಾಲಯ ಪ್ರಕಟಣೆ ಕೂಡ ಬಿಡುಗಡೆ ಮಾಡಿದೆ. ಕಾಂಗ್ರೆಸ್ ಮುಖ್ಯಸ್ಥರಿಂದ ಮನಮೋಹನ್ ಸಿಂಗ್ ಅವರ ಸ್ಮಾರಕಕ್ಕಾಗಿ ಜಾಗವನ್ನು ಮಂಜೂರು ಮಾಡುವಂತೆ ಮನವಿ ಬಂದಿದ್ದು, ಈ ಮನವಿಯನ್ನು ಸ್ವೀಕರಿಸಲಾಗಿದೆ. ಸಚಿವ ಸಂಪುಟ ಸಭೆಯ ನಂತರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸ್ಮಾರಕ ನಿರ್ಮಾಣಕ್ಕಾಗಿ ಜಾಗವನ್ನು ಮಂಜೂರು ಮಾಡಲಿದ್ದಾರೆಂದು ತಿಳಿಸಿದೆ.

ಸ್ಮಾರಕಕ್ಕಾಗಿ ಟ್ರಸ್ಟ್ ರಚನೆ ಮತ್ತು ಜಾಗದ ಹಂಚಿಕೆಯನ್ನು ಅಂತಿಮಗೊಳಿಸಿರುವುದರಿಂದ, ಅಂತ್ಯಕ್ರಿಯೆ ಮತ್ತು ಔಪಚಾರಿಕತೆಗಳು ಈ ಮಧ್ಯೆ ಮುಂದುವರಿಯಬಹುದು ಎಂದು ಗೃಹ ಸಚಿವಾಲಯ ಹೇಳಿದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ನೇತೃತ್ವ ವಹಿಸಿ, ಆರ್ಥಿಕ ಸುಧಾರಣೆಗಳ ಹರಿಕಾರ ಎಂದು ಗುರುತಿಸಿಕೊಂಡಿರುವ ಡಾ. ಸಿಂಗ್ ಅವರು ಗುರುವಾರ 92 ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. 2004 ರಿಂದ 2014ರವರೆಗೆ 10 ವರ್ಷಗಳ ಕಾಲ ಭಾರತದ ಪ್ರಧಾನಿಯಾಗಿ ಡಾ. ಮನಮೋಹನ್‌ಸಿಂಗ್ ಅವರು ಗಣನೀಯ ಸೇವೆ ಸಲ್ಲಿಸಿದ್ದರು. ಅಂತ್ಯಕ್ರಿಯೆಯನ್ನು ಪ್ರತ್ಯೇಕ ಸ್ಮಾರಕ ಸ್ಥಳದಲ್ಲಿ ನಡೆಸಬೇಕೆಂಬ ಕಾಂಗ್ರೆಸ್‌ನ ಮನವಿಯನ್ನು ಕೇಂದ್ರ ಸರ್ಕಾರ ಆರಂಭದಲ್ಲಿ ನಿರಾಕರಿಸಿತ್ತು. ಕೇಂದ್ರದ ನಿರ್ಧಾರಕ್ಕೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಭಾರತದ ಮೊದಲ ಸಿಖ್ ಪ್ರಧಾನಿಗೆ ಉದ್ದೇಶಪೂರ್ವಕ ಅವಮಾನ ಎಂದು ಟ್ವೀಟ್ ಮೂಲಕ ಅಸಮಾಧಾನ ವ್ಯಕ್ತಪಡಿಸಿದರು. ಬಳಿಕ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ, ಅತಿ ಗಣ್ಯರಿಗೆ ಮೀಸಲಾದ ಸ್ಥಳದಲ್ಲಿ ಗೌರವ ಸಂಪ್ರದಾಯಗಳೊಂದಿಗೆ ಮನಮೋಹನ್ ಸಿಂಗ್ ಅವರ ಅಂತಿಮ ಸಂಸ್ಕಾರವನ್ನು ನಡೆಸುವಂತೆ ಮನವಿ ಮಾಡಿದರು. ಈ ಬೆಳವಣಿಗೆ ನಂತರ ತಡರಾತ್ರಿಯಲ್ಲಿ ಕೇಂದ್ರ ಗೃಹ ಸಚಿವಾಲಯವು ಹೇಳಿಕೆ ಬಿಡುಗಡೆ ಮಾಡಿದೆ.

ರೋಡ್ ರೋಲರ್ ಸಾಗಿಸುತ್ತಿದ್ದ ಲಾರಿ ಡಿಕ್ಕಿ: ಬೈಕ್ ಸವಾರ ಸ್ಥಳದಲ್ಲೇ ಸಾವು

- ಬಾಲಕ ಪಾರು
- ಬೋಗಾದಿ–ಗದ್ದಿಗೆ ರಸ್ತೆಯಲ್ಲಿ ದುರಂತ
- ರಸ್ತೆ ಅವ್ಯವಸ್ಥೆ ಖಂಡಿಸಿ ಸ್ಥಳೀಯರ ಪ್ರತಿಭಟನೆ

ಮೈಸೂರು, ಡಿ.28(ಎಸ್‌ಬಿಡಿ)– ರೋಡ್ ರೋಲರ್ ಸಾಗಿಸುತ್ತಿದ್ದ ಲಾರಿ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟು, ಹಿಂಬದಿಯಲ್ಲಿದ್ದ ಬಾಲಕ ಗಾಯಗೊಂಡಿರುವ ಘಟನೆ ಮೈಸೂರಿನ ಬೋಗಾದಿ–ಗದ್ದಿಗೆ ರಸ್ತೆಯಲ್ಲಿ ಶನಿವಾರ ಸಂಜೆ ನಡೆದಿದೆ. ಈ ವೇಳೆ ಲಾರಿಯಲ್ಲಿದ್ದ ರೋಡ್ ರೋಲರ್ ರಸ್ತೆಗೆ ಉರುಳಿ ಬಿದ್ದಿದೆ. ಹೆಚ್.ಡಿ.ಕೋಟೆ ತಾಲೂಕು ಕೆ.ಬೆಳ್ತೂರು ಗ್ರಾಮದ ತಿಮ್ಮನಾಯಕ ಅವರ ಪುತ್ರ ಸತೀಶ(27) ಅಪಘಾತದಲ್ಲಿ ಮೃತಪಟ್ಟಿದ್ದು, ಜೊತೆಯಲ್ಲಿದ್ದ ಅಕ್ಕನ ಮಗ ಶಿವು(13) ಗಾಯಗೊಂಡಿದ್ದಾನೆ. ಈತನನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ.

ಗಾರೆ ಕೆಲಸ ಮಾಡಿಕೊಂಡಿದ್ದ ಸತೀಶ, ಸರಗೂರಿನಲ್ಲಿರುವ ಅಕ್ಕನ ಮನೆಗೆ ಹೋಗಿ ಅವರ ಮಗ ಶಿವುನನ್ನು ಕರೆದುಕೊಂಡು ಮೈಸೂರಿಗೆ ಬಂದಿದ್ದರು. ವಾಪಸ್ ಸರಗೂರಿಗೆ ಹೋಗುವಾಗ ಇಂದು ಸಂಜೆ 5.30ರ ವೇಳೆಯಲ್ಲಿ ಬೋಗಾದಿ–ಗದ್ದಿಗೆ ರಸ್ತೆ ಡಿಎಂಜಿ ಹಳ್ಳಿ ಗೇಟ್ ಬಳಿ ಮೈಸೂರು ಕಡೆಗೆ ಬರುತ್ತಿದ್ದ ಲಾರಿ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡ ಸತೀಶ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಗಾಯಗೊಂಡಿರುವ ಶಿವು ಸದ್ಯ ಚಿಕಿತ್ಸೆ ಪಡೆಯುತ್ತಿದ್ದಾನೆ.

ಅಪಘಾತ ನಡೆದ ವೇಳೆ ಲಾರಿ ಅಡ್ಡಾದಿಡ್ಡಿ ಚಲಿಸಿದ್ದರಿಂದ ಅದರಲ್ಲಿದ್ದ ರೋಡ್ ರೋಲರ್ ನೆಲಕ್ಕುರುಳಿ ಬಿದ್ದಿದೆ. ಆ ವೇಳೆ ರಸ್ತೆಯಲ್ಲಿ ಬೇರೆ ವಾಹನಗಳು ಸಂಚರಿಸಿದ್ದರೆ ಮತ್ತಷ್ಟು ಜೀವಹಾನಿಯಾಗುತ್ತಿತ್ತು. ಸದ್ಯ ರೋಡ್ ರೋಲರ್ ಉರುಳಿದಾಗ ಆಜುಬಾಜಲ್ಲಿ ಯಾವುದೇ ವಾಹನಗಳಿರಲಿಲ್ಲ ಎಂದು ತಿಳಿದುಬಂದಿದೆ. ವಿಷಯ ತಿಳಿದ ಕೂಡಲೇ ಜಯಪುರ ಠಾಣೆ ಸಬ್‌ಇನ್ಸ್‌ಪೆಕ್ಟರ್ ಪ್ರಕಾಶ್ ಎತ್ತಿನಮನೆ ಹಾಗೂ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿದರು. ಬಳಿಕ ಡಿವೈಎಸ್ಪಿ ಕರೀಂ ರಾವತರ್, ಸರ್ಕಲ್ ಇನ್ಸ್‌ಪೆಕ್ಟರ್ ಶಿವನಂಜಶೆಟ್ಟಿ ಸ್ಥಳ ಪರಿಶೀಲಿಸಿದರು.

ರಸ್ತೆ ತಡೆದು ಪ್ರತಿಭಟನೆ: ಸ್ಥಳೀಯರು ಹಾಗೂ ಮೃತ ಸತೀಶ್ ಸಂಬಂಧಿಕರು ರಸ್ತೆ ತಡೆದು ದಿಢೀರ್ ಪ್ರತಿಭಟನೆ ನಡೆಸಿದರು. ಕಿರಿದಾದ ಈ ರಸ್ತೆಯಲ್ಲಿ ನಿರಂತರವಾಗಿ ಅಪಘಾತಗಳು ಸಂಭವಿಸುತ್ತಿವೆ. ಎಷ್ಟು ಬಾರಿ ಮನವಿ ಮಾಡಿದರೂ ರಸ್ತೆ ಅಗಲೀಕರಣಕ್ಕೆ ಯಾವುದೇ ಕ್ರಮ ಕೈಗೊಂಡಿಲ್ಲ. ಸಾಮಾನ್ಯ ಜನರ ಜೀವಕ್ಕೆ ಬೆಲೆಯೇ ಇಲ್ಲದಂತಾಗಿದೆ. ಅಪಘಾತದಲ್ಲಿ ಮೃತಪಟ್ಟವರ ಕುಟುಂಬದವರಿಗೂ ಸೂಕ್ತ ಪರಿಹಾರ ನೀಡುತ್ತಿಲ್ಲ. ಸತೀಶ್ ಕುಟುಂಬದವರಿಗೆ ಸ್ಥಳದಲ್ಲೇ ಪರಿಹಾರ ನೀಡುವರೆಗೂ ಶವ ಸಾಗಿಸಲು ಬಿಡುವುದಿಲ್ಲ. ಸ್ಥಳೀಯ ಹಾಗೂ ಹೆಚ್.ಡಿ.ಕೋಟೆ ಶಾಸಕರು ಸ್ಥಳಕ್ಕೆ ಬರಬೇಕೆಂದು ಪಟ್ಟು ಹಿಡಿದಿದ್ದರು. ಬಳಿಕ ಪೊಲೀಸ್ ಅಧಿಕಾರಿಗಳು, ರಸ್ತೆ ತಡೆಯಿಂದ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತದೆ ಎಂದು ಪ್ರತಿಭಟನಾಕಾರರ ಮನವೊಲಿಸಿದರು. ಬಳಿಕ ಪೊಲೀಸರು ಮೃತದೇಹವನ್ನು ಮೈಸೂರು ವೈದ್ಯಕೀಯ ಹಾಗೂ ಸಂಶೋಧನಾ ಸಂಸ್ಥೆಯ ಶವಾಗಾರಕ್ಕೆ ಸಾಗಿಸಿದರು. ಲಾರಿಯಿಂದ ಉರುಳಿದ್ದ ರೋಡ್ ರೋಲರ್ ಅನ್ನು ತೆರವುಗೊಳಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಲಾರಿ ಚಾಲಕ ಜಾವೀದ್‌ನನ್ನು ವಶಕ್ಕೆ ಪಡೆದು, ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದಾರೆ. ಈ ಸಂಬಂಧ ಜಯಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಳಗಾವಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರ 50 ಅಡಿ ಎತ್ತರದ ಕಂಚಿನ ಪ್ರತಿಮೆ ನಿರ್ಮಾಣ



ಬೆಂಗಳೂರು, ಡಿ.28– ಬೆಳಗಾವಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 50 ಅಡಿ ಎತ್ತರದ ಕಂಚಿನ ಪ್ರತಿಮೆ ಸ್ಥಾಪಿಸಲು ನಿರ್ಧರಿಸಲಾಗಿದೆ.

ಈ ಬಗ್ಗೆ ಸರ್ವೋದಯ ಮುಖಂಡ ಪಂಚಾಕ್ಷರಯ್ಯ ನೀಲಕಂಠಯ್ಯ ಗುಣಾಚಾರಿ ಮಾಹಿತಿ ನೀಡಿದ್ದಾರೆ. ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸಮಕಾಲೀನ ಸಮಾಜಕ್ಕೆ ಗಾಂಧೀ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವ ಅಗತ್ಯವಿದೆ. ಸಿದ್ದರಾಮಯ್ಯ ಅವರು ಮಹಾತ್ಮ ಗಾಂಧೀಜಿ ಕನಸಿನ ಭಾರತವನ್ನು ನನಸು ಮಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ, ಸರ್ವೋದಯ ಸಮಾಜ ರಚನೆಯ ಹರಿಕಾರ ಎಂದು ಹೇಳಿದರು.

ಗಾಂಧೀಜಿ ತತ್ವಗಳನ್ನು ಅಳವಡಿಸಿಕೊಂಡು ಕೆಲಸ ಮಾಡುತ್ತಿರುವ ಸಿದ್ದರಾಮಯ್ಯ ಅವರ ಪ್ರತಿಮೆ ನಿಲ್ಲಿಸಲು ಇದು ಸಕಾಲವಾಗಿದೆ. ಅದಕ್ಕಾಗಿ 1 ಕೋಟಿ ವೆಚ್ಚದಲ್ಲಿ ಯೋಜನೆ ಹಮ್ಮಿಕೊಳ್ಳಲಾಗಿದೆ. ಪ್ರತಿಮೆ ಪ್ರತಿಷ್ಠಾಪಿಸುವ ಸ್ಥಳ ಇನ್ನೂ ಅಂತಿಮಗೊಂಡಿಲ್ಲ, ಶೀಘ್ರವೇ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಲಾಗುವುದು ಎಂದು ತಿಳಿಸಿದರು.

ಡಿ.ಕೆ.ಸುರೇಶ್ ತಂಗಿ ಹೆಸರಲ್ಲಿ ವಂಚನೆ: ಐಶ್ವರ್ಯಗೌಡ, ಪತಿಗೆ 14 ದಿನ ಜೈಲು


ಐಶ್ವರ್ಯಗೌಡ

ಬೆಂಗಳೂರು, ಡಿ.28– ಕಾಂಗ್ರೆಸ್ ಮಾಜಿ ಸಂಸದ ಡಿ.ಕೆ.ಸುರೇಶ್ ಸಹೋದರಿ ಎಂದು ಹೇಳಿಕೊಂಡು 14.600 ಕೆಜಿಯಷ್ಟು ಚಿನ್ನಾಭರಣ ಖರೀದಿಸಿ ವಂಚನೆ ಮಾಡಿರುವ ಪ್ರಕರಣದಲ್ಲಿ ಇಬ್ಬರು ಆರೋಪಿಗಳಿಗೆ 14 ದಿನಗಳ ಕಾಲ ನ್ಯಾಯಾಂಗ ಬಂಧನ ವಿಧಿಸಿ 9ನೇ ಎಸಿಎಂಎಂ ಕೋರ್ಟ್ ಆದೇಶಿಸಿದೆ.

ಇಂದು (ಡಿ.28) ಚಂದ್ರಲೇಔಟ್ ಪೊಲೀಸರು ಆರೋಪಿ ಐಶ್ವರ್ಯಗೌಡ, ಆಕೆಯ ಪತಿ ಹರೀಶ್ ಇಬ್ಬರನ್ನೂ ಬಂಧಿಸಿದ್ದರು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೆಡಿಕಲ್ ಟೆಸ್ಟ್ ಬಳಿಕ ಆರೋಪಿಗಳನ್ನು ಕೋರಮಂಗಲದ ಜಡ್ಜ್ ಮನೆಯಲ್ಲಿ ಹಾಜರುಪಡಿಸಿದ್ದರು.

ಪ್ರಕರಣದ ಐಓ ಎಸಿಪಿ ಭರತ್ ರೆಡ್ಡಿ ಒಂದು ವಾರ ಕಸ್ಟಡಿಗೆ ಪಡೆಯಲು ಸೋಮವಾರ ಬಾಡಿ ವಾರೆಂಟ್ ಅರ್ಜಿ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಇತ್ತ ಆರೋಪಿ ಐಶ್ವರ್ಯಗೌಡ ಪರ ವಕೀಲರು ಜಾಮೀನು ಅರ್ಜಿ ಸಲ್ಲಿಸಿದ್ದಾರೆ. ಆರೋಪಿಗಳು ಜನವರಿ 10ರ ವರೆಗೆ ನ್ಯಾಯಾಂಗ ಬಂಧನದಲ್ಲಿರಲಿದ್ದಾರೆ. ಆದೇಶದ ಹಿನ್ನೆಲೆ ಸದ್ಯ ಪರಪ್ಪನ ಅಗ್ರಹಾರ ಜೈಲಿಗೆ ಐಶ್ವರ್ಯ ಗೌಡ ಮತ್ತು ಆಕೆಯ ಪತಿ ಹರೀಶ್‌ನನ್ನು ಕರೆದೊಯ್ದರು

ಕುಡಿದು ರಸ್ತೆಯಲ್ಲಿ ಗಲಾಟೆ; ಮೂವರ ವಿರುದ್ಧ ಕೇಸ್ ದಾಖಲು

ಮೈಸೂರು, ಡಿ.28(ಎಸ್‌ಬಿಡಿ)–ಕುಡಿದು ರಸ್ತೆಯಲ್ಲಿ ಗಲಾಟೆ ಮಾಡುತ್ತಿದ್ದ ಮೂವರ ವಿರುದ್ಧ ಮೈಸೂರಿನ ಲಕ್ಷ್ಮೀಪುರಂ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿ, ಬಿಸಿ ಮುಟ್ಟಿಸಿದ್ದಾರೆ. ನಗರದ ಗುರುವಾರ ಮಧ್ಯರಾತ್ರಿ 12 ಗಂಟೆಯಲ್ಲಿ ಚಾಮರಾಜ ಜೋಡಿ ರಸ್ತೆಯ ಬಾರ್‌ವೊಂದರ ಎದುರು ಫುಟ್‌ಪಾತ್‌ನಲ್ಲಿ ಮೂರ್‍ನಾಲ್ಕು ಜನ ಜಗಳವಾಡುತ್ತಿದ್ದರು. ವಿಷಯ ತಿಳಿದ ಲಕ್ಷ್ಮೀಪುರಂ ಠಾಣೆ ಸಿಬ್ಬಂದಿ ಮಹದೇವ ಸ್ಥಳಕ್ಕೆ ತೆರಳಿದ್ದಾರೆ. ಪೊಲೀಸರೆಂದು ತಿಳಿದ ಇಬ್ಬರು ಓಡಿ ಹೋಗಿದ್ದು, ಯೋಗೇಶ್ ಎಂಬಾತ ಸಿಕ್ಕಿಬಿದ್ದಿದ್ದಾನೆ. ಆತನನ್ನು ಠಾಣೆಗೆ ಕರೆದೊಯ್ದು ವಿಚಾರಣೆ ನಡೆಸಿದಾಗ ಹೊಡೆದಾಡಿಕೊಳ್ಳುತ್ತಿದ್ದವರ ಮಾಹಿತಿ ನೀಡಿದ್ದಾನೆ. ಅದರನ್ವಯ ಯೋಗೇಶ್, ಅರ್ಜುನ್ ಹಾಗೂ ಅಭಿ ವಿರುದ್ಧ ಸಾರ್ವಜನಿಕ ರಸ್ತೆಯಲ್ಲಿ ಒಬ್ಬರಿಗೊಬ್ಬರು ಹೊಡೆದಾಡಿಕೊಂಡು ಸಾರ್ವಜನಿಕರ ನೆಮ್ಮದಿಗೆ ಭಂಗತಂದ ಆರೋಪದಡಿ ಪ್ರಕರಣ ದಾಖಲಿಸಿದ್ದಾರೆ.

ಮೈಸೂರಲ್ಲಿ ಅದ್ದೂರಿ ಹನುಮ ಜಯಂತಿ ಮೆರವಣಿಗೆ



ಮೈಸೂರಿನ ಹಲವು ಪ್ರಮುಖ ರಸ್ತೆಗಳಲ್ಲಿ ಶನಿವಾರ ಹನುಮ ಜಯಂತಿ ಮೆರವಣಿಗೆ ಭಕ್ತಿ-ಭಾವದೊಂದಿಗೆ ಅದ್ದೂರಿಯಾಗಿ ನಡೆಯಿತು.

ಮೈಸೂರು, ಡಿ.28(ಆರ್‌ಕೆ)– ಮೈಸೂರಲ್ಲಿ ಶನಿವಾರ ಹನುಮ ಜಯಂತಿ ಮೆರವಣಿಗೆ ಭಕ್ತಿ-ಭಾವದೊಂದಿಗೆ ಅದ್ದೂರಿಯಾಗಿ ನಡೆಯಿತು.

ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯಿಂದ ಆರಂಭವಾದ ಮೆರವಣಿಗೆಗೆ ಶಾಸಕ ಜಿ.ಟಿ.ದೇವೇಗೌಡರು ಹನುಮನ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ದೊಡ್ಡ ಗಡಿಯಾರ, ಅಶೋಕ ರಸ್ತೆ, ನೆಹರು ಸರ್ಕಲ್, ಇರ್ವಿನ್ ರಸ್ತೆ, ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್, ಸಯ್ಯಾಜಿರಾವ್ ರಸ್ತೆ, ಚಿಕ್ಕ ಗಡಿಯಾರ, ಶಿವರಾಂಪೇಟೆ, ಡಿ.ದೇವರಾಜ ಅರಸು ರಸ್ತೆ ಮೂಲಕ ಸಾಗಿದ ಮೆರವಣಿಗೆಯು ನಾರಾಯಣಶಾಸ್ತ್ರಿ ರಸ್ತೆ, ಚಾಮರಾಜ ಜೋಡಿ ರಸ್ತೆ, ಸಂಸ್ಕೃತ ಪಾಠಶಾಲೆ ಸರ್ಕಲ್ ಮಾರ್ಗವಾಗಿ ಗನ್ ಹೌಸ್ ಸರ್ಕಲ್‌ನಲ್ಲಿ ಅಂತ್ಯಗೊಂಡಿತು.

ಬೆಳಗ್ಗೆ 10.30 ಗಂಟೆಗೆ ಆರಂಭವಾದ ಹನುಮ ಜಯಂತಿ ಮೆರವಣಿಗೆಯ ಮಾರ್ಗ ಮಧ್ಯೆ ನೆಹರು ಸರ್ಕಲ್ ಬಳಿಯಿಂದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಮುಖಂಡರಾದ ಮೋಹನ, ಮೈ.ವಿ. ರವಿಶಂಕರ್ ಸೇರಿದಂತೆ ಸಾವಿರಕ್ಕೂ ಹೆಚ್ಚು ಹನುಮ ಭಕ್ತರು, ವಿಶ್ವ ಹಿಂದೂ ಪರಿಷತ್, ಭಜರಂಗ ದಳದ ಪ್ರಮುಖರು, ಕಾರ್ಯಕರ್ತರು ಕೇಸರಿ ಶಾಲು ಧರಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡರು.



ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಕಲಾತಂಡಗಳ ಮೆರುಗು.

ಹನುಮ, ಶ್ರೀ ಭುವನೇಶ್ವರಿ ಪ್ರತಿರೂಪಗಳೊಂದಿಗೆ 12 ಸ್ತಬ್ಧಚಿತ್ರಗಳು, ಮಂಗಳ ವಾದ್ಯ, ಚಂಡೆ, ತಮಟೆ, ಜಾನಪದ ಕಲಾತಂಡಗಳು ಮೆರವಣಿಗೆಗೆ ಮೆರುಗು ನೀಡಿದವಲ್ಲದೆ, ಇಂದಿನ ಹನುಮ ಜಯಂತಿ ಮೆರವಣಿಗೆಯು ಮಿನಿ ವಿಜಯದಶಮಿ ಮೆರವಣಿಗೆಯಂತೆ ಕಂಗೊಳಿಸುತ್ತಿತ್ತು.



ಮೆರವಣಿಗೆಯಲ್ಲಿ ಸಂಸದ ಯದುವೀರ್ ಒಡೆಯರ್ ಪಾಲ್ಗೊಂಡಿದ್ದರು.



ಮೆರವಣಿಗೆಯಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್.ಶ್ರೀವತ್ಸ ಇತರರು.



ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರಿಂದ ಬಿಗಿ ಭದ್ರತೆ.

ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಭಾರಿ ಭದ್ರತೆ

ಮೆರವಣಿಗೆಯುದ್ದಕ್ಕೂ ಇಕ್ಕೆಲಗಳಲ್ಲಿ ರಾಮ ಮತ್ತು ಹನುಮನ ಭಕ್ತರು ನೆರೆದು ಪೂಜೆ ಸಲ್ಲಿಸುತ್ತಿದ್ದರು. ಎಲ್ಲೆಲ್ಲೂ ಶ್ರೀರಾಮ, ಹನುಮನ ನಾಮಸ್ಮರಣೆ ಮೊಳಗಿದವು.

ಹನುಮ ವೇಷಧಾರಿಗಳು, ಕನ್ನಡ ನಾಡು-ನುಡಿ, ಸಂಸ್ಕೃತಿ ಬಿಂಬಿಸುವ ಘೋಷಣೆಗಳು ಮೆರವಣಿಗೆಯನ್ನು ವರ್ಣರಂಜಿತಗೊಳಿಸಿದವು. ಸಂಜೆ 6.30 ಗಂಟೆ ವೇಳೆಗೆ ಗನ್‌ಹೌಸ್ ಸರ್ಕಲ್ ತಲುಪಿದ ಮೆರವಣಿಗೆ ಅಂತ್ಯಗೊಂಡಿತು.

ನೆಹರು ಸರ್ಕಲ್, ಇರ್ವಿನ್ ರಸ್ತೆ ಮತ್ತು ಡಿ.ದೇವರಾಜ ಅರಸು ರಸ್ತೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರೇ ಖುದ್ದು ಹಾಜರಿದ್ದು ಬಂದೋಬಸ್ತ್ ನೇತೃತ್ವ ವಹಿಸಿದ್ದರು. ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ, ಎಸಿಪಿಗಳಾದ ಶಾಂತಮಲ್ಲಪ್ಪ, ಅಶ್ವಥ ನಾರಾಯಣ, ಎಸ್.ಜಿ.ಗಜೇಂದ್ರ ಪ್ರಸಾದ್, ರಮೇಶ್‌ಕುಮಾರ್, ಸಂದೇಶ್‌ಕುಮಾರ್ ಭದ್ರತಾ ಕಟ್ಟೆಚ್ಚರ ವಹಿಸಿದ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದೇ ಹನುಮ ಜಯಂತಿ ಮೆರವಣಿಗೆಯು ನಿರ್ವಿಘ್ನವಾಗಿ ನೆರವೇರಿತು.

ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ನೇತೃತ್ವದ ಸಂಚಾರ ಠಾಣೆ ಇನ್‌ಸ್ಪೆಕ್ಟರ್‌ಗಳು ಮೆರವಣಿಗೆ ಮಾರ್ಗದಲ್ಲಿ ವಾಹನ ಸಂಚಾರ ಸ್ಥಗಿತಗೊಳಿಸಿ ಬದಲಿ ಮಾರ್ಗದಲ್ಲಿ ಸಂಚರಿಸಲು ಅನುವು ಮಾಡಿಕೊಟ್ಟರಾದರೂ, ಆ ವೇಳೆ ಸಾರ್ವಜನಿಕರ ವಾಹನ ಸಂಚಾರಕ್ಕೆ ತೊಂದರೆ ಉಂಟಾಗಿತ್ತು. ವರ್ಷಾಂತ್ಯ ಹಾಗೂ ವಾರಾಂತ್ಯವಾಗಿರುವುದರಿಂದ ಹೊಸ ವರ್ಷಾಚರಣೆಗೆಂದು ಪ್ರವಾಸಿಗರ ದಂಡೇ ಮೈಸೂರಿಗೆ ಆಗಮಿಸಿರುವುದರಿಂದ ಇಲ್ಲಿನ ವಾಹನ ಸಂಚಾರ ದಟ್ಟವಾಗಿತ್ತು.

ಮೈಸೂರಿನ ರಾಜಮನೆತನದ ಹೆಸರಿಲ್ಲದಿದ್ದರೆ ಕೆಆರ್‌ಎಸ್ ರಸ್ತೆಗೆ ಸಿದ್ದರಾಮಯ್ಯ ಹೆಸರಿಟ್ಟರೆ ತಪ್ಪೇನಿಲ್ಲ: ಶಾಸಕ ಜಿ.ಟಿ.ದೇವೇಗೌಡ



ಮಾಧ್ಯಮದವರೊಂದಿಗೆ ಶಾಸಕ ಜಿ.ಟಿ.ದೇವೇಗೌಡರು ಮಾತನಾಡುತ್ತಿರುವುದು.

ಮೈಸೂರು,ಡಿ.28–ಮೈಸೂರಿನ ಒಂಟಿಕೊಪ್ಪಲು ಶ್ರೀಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನದಿಂದ ರಿಂಗ್ ರಸ್ತೆಯ ರಾಯಲ್ ಇನ್ ಹೋಟೆಲ್‌ವರೆಗಿನ ಕೆಆರ್‌ಎಸ್ ರಸ್ತೆಗೆ 'ಸಿದ್ದರಾಮಯ್ಯ ಆರೋಗ್ಯ ಮಾರ್ಗ' ಎಂದು ಹೆಸರಿಡುವ ಪ್ರಸ್ತಾಪಕ್ಕೆ ಸಂಬಂಧಿಸಿದಂತೆ ಈಗಾಗಲೇ ಪರ-ವಿರೋಧ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಇದೀಗ ಜೆಡಿಎಸ್ ಹಿರಿಯ ಶಾಸಕ ಜಿ.ಟಿ.ದೇವೇಗೌಡರು, ಮೈಸೂರು ರಾಜಮನೆತನದ ಹೆಸರು ಇಡದೇ ಇದ್ದರೆ ಈ ರಸ್ತೆಗೆ ಸಿದ್ದರಾಮಯ್ಯ ಹೆಸರಿಟ್ಟರೆ ತಪ್ಪಿಲ್ಲ ಎಂದು ಹೇಳಿದ್ದಾರೆ. ಈ ಕುರಿತು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮೈಸೂರಿನ ಪಿಕೆಟಿಬಿ (ಪ್ರಿನ್ಸಸ್ ಕೃಷ್ಣರಾಜಮ್ಮಣಿ ಟ್ಯೂಬರ್ ಕ್ಯುಲೋಸಿಸ್ ಹಾಸ್ಪಿಟಲ್) ರಸ್ತೆಗೆ ಪ್ರಿನ್ಸೆಸ್ ರಸ್ತೆ ಅಂತ ನಾಮಕರಣ ಮಾಡಿಲ್ಲ ಅನ್ನುವುದಾದರೆ ಸಿದ್ದರಾಮಯ್ಯ ಅವರ ಹೆಸರನ್ನು ಇಟ್ಟರೆ ತಪ್ಪಿಲ್ಲ. ಈಗಾಗಲೇ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಅದರ ಬಗ್ಗೆ ನನಗೆ ಗೊತ್ತಿಲ್ಲ. ಸಂಸದ ಯದುವೀರ್ ಅವರು ಆ ರಸ್ತೆಗೆ ಪ್ರಿನ್ಸೆಸ್ ರಸ್ತೆ ಎಂದು ಹೆಸರಿಡಲಾಗಿದೆ ಎನ್ನುತ್ತಾರೆ. ಆದರೆ ಮತ್ತೆ ಕೆಲವರು ಆ ರಸ್ತೆಗೆ ಯಾವ ಹೆಸರನ್ನು ಇಟ್ಟಿಲ್ಲ ಎನ್ನುತ್ತಾರೆ. ಒಂದು ವೇಳೆ ಆ ರಸ್ತೆಗೆ ಯಾರ ಹೆಸರಿಟ್ಟಿಲ್ಲದಿದ್ದರೆ ಸಿದ್ದರಾಮಯ್ಯ ಅವರ ಹೆಸರು ಇಟ್ಟರೆ ತಪ್ಪಿಲ್ಲ ಎಂದರು.

ಜ.7, ಅಮಿತ್ ಶಾ, ಸಿ.ಟಿ.ರವಿ ವಿರುದ್ಧ ಪ್ರತಿಭಟನೆ

ಮೈಸೂರು,ಡಿ.28(ಎಸ್‌ಪಿಎನ್)– ಡಾ.ಬಿ.ಆರ್.ಅಂಬೇಡ್ಕರ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎನ್ನಲಾದ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ವಿಧಾನಪರಿಷತ್‌ನಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರ ವಿರುದ್ಧ ನಿಂದನಾತ್ಮಕ ಪದ ಬಳಸಿದ ಎಂಎಲ್‌ಸಿ ಸಿ.ಟಿ.ರವಿ ವಿರುದ್ಧ ಜ.7ರಂದು ಪ್ರತಿಭಟನೆ ನಡೆಸಲು ಪ್ರಗತಿಪರ ಸಂಘಟನೆಗಳು ನಿರ್ಣಯ ಕೈಗೊಂಡಿವೆ. ಮೈಸೂರು ಜಲದರ್ಶಿನಿ ಸರ್ಕಾರಿ ಅತಿಥಿಗೃಹದಲ್ಲಿ ನಡೆದ ಪ್ರಗತಿಪರ ಮುಖಂಡರ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದ್ದು, ಜ.7ರ ಮಂಗಳವಾರ ಬೆಳಗ್ಗೆ ಚಿಕ್ಕಗಡಿಯಾರದ ಮುಂಭಾಗ ಕಪ್ಪುಬಟ್ಟೆ ಧರಿಸಿ ಮುಷ್ಕರ ನಡೆಸಲಾಗುವುದಲ್ಲದೆ, ಈ ವೇಳೆ ಕ್ರಾಂತಿಕಾರಿ ಗಾಯನ ಹಾಗೂ ಬೀದಿ ನಾಟಕದ ಮೂಲಕ ಜನ ಜಾಗೃತಿ ಮೂಡಿಸಲು ನಿರ್ಧರಿಸಲಾಗಿದೆ ಎಂದರು. ಸಭೆಯಲ್ಲಿ ಜಿ.ಜಯರಾಂ, ಖಲೀಂ, ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಪಂಡಿತಾರಾಧ್ಯ, ಪ್ರೊ.ನಂಜರಾಜ ಅರಸು ಇನ್ನಿತರರಿದ್ದರು.

ಮಾಜಿ ಪ್ರಧಾನಿ ಮನಮೋಹನ್ ಸಿಂಗ್‌ಗೆ ಭಾವಪೂರ್ಣ ಶ್ರದ್ಧಾಂಜಲಿ



ಗೃಹಶೋಭೆ ವಸ್ತುಪ್ರದರ್ಶನದಲ್ಲಿ ಕಲಾವಿದರು ಮನಮೋಹನ್ ಸಿಂಗ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಮೈಸೂರು,ಡಿ.28–ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುತ್ತಿರುವ ಗೃಹಶೋಭೆ ವಸ್ತುಪ್ರದರ್ಶನದಲ್ಲಿ ಕಲಾವಿದರು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಗೃಹಶೋಭೆ ವ್ಯವಸ್ಥಾಪಕ ಕಣ್ಣ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿ, ಅಮೇರಿಕ, ರಷ್ಯಾ, ಇಂಗ್ಲೆಂಡ್‌ಮುಂತಾದ ಅಭಿವೃದ್ಧಿ ಹೊಂದಿದ ದೇಶಗಳು ಭಾರತದ ಕಡೆ ತಿರುಗಿ ನೋಡುವಂತೆ ಜಾಗತಿಕ ಮನ್ನಣೆ, ದಕ್ಷ ಆಡಳಿತದ ಮೂಲಕ ಪ್ರಜ್ಞಾವಂತ ಸಮಾಜ ಕಟ್ಟಿದವರು ಮನಮೋಹನ್ ಸಿಂಗ್. ಆಧಾರ್ ಕಾರ್ಡ್, ಅರಣ್ಯ ಭೂಮಿ ಹಕ್ಕು ಕಾಯ್ದೆ, ಆಶಾ ಕಾರ್ಯಕರ್ತರ ಯೋಜನೆ, ನರೇಗಾ ಮಾಹಿತಿ ಹಕ್ಕು ಸೇರಿದಂತೆ ಹಲವಾರು ಯೋಜನೆಗಳನ್ನು ಜಾರಿಗೆ ತಂದು ದೇಶದ ಭವಿಷ್ಯಕ್ಕೆ ಆರ್ಥಿಕ ವ್ಯವಸ್ಥೆಯ ಭದ್ರಬುನಾದಿ ಹಾಕಿದರು. ನಮ್ಮ ಮಾತಿಗಿಂತ ಕೆಲಸವೇ ಮಾತಾಗಬೇಕು ಎನ್ನುವುದಕ್ಕೆ ನಿದರ್ಶನವಾಗಿ ಮೌನಿಯಲ್ಲ ದೇಶದ ಮಹಾನ್ ಜ್ಞಾನಿಯಾದವರು ಮನಮೋಹನ್ ಸಿಂಗ್ ಎಂದು ಸ್ಮರಿಸಿದರು.

ಈ ವೇಳೆ ನಿರೂಪಕ ಅಜಯ್ ಶಾಸ್ತ್ರಿ, ಗಾಯಕರಾದ ಸೇತುರಾಂ, ಜಗದೀಶ್, ಸುಬ್ರಹ್ಮಣ್ಯ, ಮೀನಾಕ್ಷಿ ಚಟ್ನಿ, ವಿಶ್ವನಾಥ್, ಮೋಹನ್‌ಕುಮಾರ್, ಶ್ರೀನಿವಾಸ್, ಸುಮಾ ಇನ್ನಿತರರು ಉಪಸ್ಥಿತರಿದ್ದರು.

ವಿಶ್ವ ಮಾನವ ಗಾಲ್ಫ್ ಚಾಂಪಿಯನ್‌ಶಿಪ್ ಉದ್ಘಾಟನೆ



ಮೈಸೂರಿನ ವಿಶ್ವಮಾನವ ಗಾಲ್ಫರ್ಸ್ ಅಸೋಸಿಯೇಷನ್ ವತಿಯಿಂದ ಜೆಡಬ್ಲ್ಯು ಗಾಲ್ಫ್ ಕ್ಲಬ್‌ನಲ್ಲಿ ಶನಿವಾರ 15ನೇ ಆವೃತ್ತಿ ವಿಶ್ವಮಾನವ ಗಾಲ್ಫ್ ಚಾಂಪಿಯನ್‌ಶಿಪ್ ನಡೆಯಿತು. ವಿಶ್ವಮಾನವ ಗಾಲ್ಫರ್ಸ್ ಅಸೋಸಿಯೇಷನ್ ಸಂಸ್ಥಾಪಕ ಸದಸ್ಯ ವಸಂತಕುಮಾರ್ ಚಾಂಪಿಯನ್‌ಶಿಪ್ ಅನ್ನು ಉದ್ಘಾಟಿಸಿದರು. ಜೆಡಬ್ಲ್ಯುಜಿಸಿ ಅಧ್ಯಕ್ಷ ಡಾ.ಅಬ್ರಹಾಂ ಥಾಮಸ್, ಕಾರ್ಯದರ್ಶಿ ವಿ.ಜಿ.ಆಚಾರ್, ಖಜಾಂಚಿ ಆರ್.ಎಸ್.ನಿತೀಶ್, ಟೂರ್ನಮೆಂಟ್ ಸಬ್ ಕಮಿಟಿ ಅಧ್ಯಕ್ಷ ಸೋನಮ್ ಚುಗ್, ಕಮಿಟಿ ಸದಸ್ಯ ವಿನಯ್ ನಟರಾಜನ್, ವಿಶ್ವಮಾನವ ಗಾಲ್ಫರ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎಂ.ನಾಗೇಶ್, ಉಪಾಧ್ಯಕ್ಷ ಹೆಚ್.ಸಿ.ಸುಬ್ರಮಣ್ಯ, ಖಜಾಂಚಿ ರಾಘವ ಲಿಂಗೇಗೌಡ, ಮೈಸೂರು ರೇಸ್ ಕ್ಲಬ್ ಲಿಮಿಟೆಡ್ ಅಧ್ಯಕ್ಷ ಕೆ.ಎನ್. ಸುರೇಶ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ಗುತ್ತಿಗೆ ನೌಕರರ ಪಿಎಫ್ ಹಣದಲ್ಲಿ ಭಾರಿ ಭ್ರಷ್ಟಾಚಾರ

ಗುತ್ತಿಗೆದಾರ, ಭವಿಷ್ಯನಿಧಿ, ಹಾಲು ಒಕ್ಕೂಟದ ಅಧಿಕಾರಿಗಳು ಭಾಗಿ ಆರೋಪ

ಮೈಸೂರು,ಡಿ.28(ಜಿಎ)–ಮಂಡ್ಯ ಜಿಲ್ಲೆ ಹಾಲು ಒಕ್ಕೂಟದಲ್ಲಿ ಕೆಲಸ ಮಾಡುತ್ತಿರುವ ಸಾವಿರಾರು ಹೊರಗುತ್ತಿಗೆ ನೌಕರರಿಗೆ ಕೊಡಬೇಕಾದ ಭವಿಷ್ಯ ನಿಧಿ(ಪಿಎಫ್) ಪಾವತಿಯಲ್ಲಿ ಗುತ್ತಿಗೆದಾರ, ಒಕ್ಕೂಟದ ಅಧಿಕಾರಿಗಳು, ಭವಿಷ್ಯ ನಿಧಿ ಅಧಿಕಾರಿಗಳು ಭಾರಿ ಭ್ರಷ್ಟಾಚಾರ ನಡೆಸಿದ್ದಾರೆ ಎಂದು ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ಮಾಜಿ ಅಧ್ಯಕ್ಷ ಜವರೇಗೌಡ ಆರೋಪಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಿಎಫ್ ಹಣದ ವಿಚಾರದಲ್ಲಿ ನಡೆದಿರುವ ಭ್ರಷ್ಟಾಚಾರದ ಕುರಿತು ತನಿಖೆ ನಡೆಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೂರು ಸಲ್ಲಿಸಲಾಗಿತ್ತು. ದೂರಿನ ಅನ್ವಯ 2019ರಲ್ಲಿ ತನಿಖೆ ಆರಂಭವಾಗಿದ್ದರೂ ಇದುವರೆಗೂ ಪೂರ್ಣಗೊಳಿಸದೆ ವಿಳಂಬ ಮಾಡಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಗಾಯತ್ರಿಪುರಂನಲ್ಲಿರುವ ಭವಿಷ್ಯ ನಿಧಿ ಕಚೇರಿ ಅಧಿಕಾರಿಗಳು ಮತ್ತು ಒಕ್ಕೂಟದ ಗುತ್ತಿಗೆದಾರರು ಭ್ರಷ್ಟಾಚಾರ ನಡೆಸಿದ್ದಾರೆ. ಸರ್ಕಾರ ತಕ್ಷಣ ತನಿಖೆಯನ್ನು ಪೂರ್ಣಗೊಳಿಸಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದ ಅವರು, ಗುತ್ತಿಗೆ ನೌಕರರ ವೇತನ ಪಾವತಿಯಲ್ಲಿ ಕನಿಷ್ಠ ವೇತನ ಕಾಯ್ದೆಯ ನಿಯಮಗಳನ್ನು ಅನುಸರಿಸಿಲ್ಲ. ನೌಕರರಿಗೆ ವಾರದ ರಜೆಯನ್ನೂ ನೀಡದೆ ದುಡಿಸಿಕೊಂಡಿದಲ್ಲದೇ, ಕೆಲಸ ನಿರ್ವಹಿಸಿದ ದಿನಕ್ಕಿಂತ ಕಡಿಮೆ ವೇತನ ನೀಡಲಾಗಿದೆ ಎಂದು ದೂರಿದರು.

ಒಕ್ಕೂಟದ ಶೇಖರಣಾ ವಿಭಾಗದ ನಿವೃತ್ತ ಉಪವ್ಯವಸ್ಥಾಪಕ ಬಿ.ಜಿ.ಪೂವಯ್ಯ ಮಾತನಾಡಿ, ಮಂಡ್ಯ ಹಾಲು ಒಕ್ಕೂಟದ ಗುತ್ತಿಗೆ ನೌಕರ 'ತನ್ನ ಭವಿಷ್ಯ ನಿಧಿಯನ್ನು ಏಕೆ ನಿಯಮಬದ್ಧವಾಗಿ ಪಾವತಿ ಆಗುತ್ತಿಲ್ಲ' ಎಂದು ಪ್ರಶ್ನಿಸಿದರೆ ಅತನನ್ನು ಮರುದಿನದಿಂದಲೇ ಕೆಲಸಕ್ಕೆ ಬಾರದಂತೆ ಗುತ್ತಿಗೆದಾರ ಸೂಚಿಸುತ್ತಾನೆ. ಗುತ್ತಿಗೆ ನೌಕರನಿಗೆ ಉದ್ಯೋಗ ಭದ್ರತೆಯು ಇಲ್ಲದ ಕಾರಣ ತನಗಾಗುತ್ತಿರುವ ಅನ್ಯಾಯದ ಅರಿವಿದ್ದರೂ ಬಾಯಿ ಮುಚ್ಚಿ ಕೂರಬೇಕಾದ ಪರಿಸ್ಥಿತಿ ಇದೆ. ಈ ಬಗ್ಗೆ ಗುತ್ತಿಗೆ ನೌಕರ ಒಕ್ಕೂಟದ ಆಡಳಿತ ಮಂಡಳಿಗೆ ದೂರು ನೀಡಿದರೆ 'ನೀನುಂಟು ಕಾರ್ಮಿಕ ಗುತ್ತಿಗೆದಾರ ಉಂಟು' ಎಂದು ಹೇಳಿ ಕೈ ತೊಳೆದುಕೊಳ್ಳುತ್ತದೆ ಎಂದರು.

ಗುತ್ತಿಗೆ ನೌಕರರಿಗೆ ಶಾಸನಬದ್ಧ ಪಾವತಿಗಳಲ್ಲೇ ನೂರಾರು ಕೋಟಿ ಅವ್ಯವಹಾರ ನಡೆದಿದೆ. ಅಲ್ಲದೇ ಗುತ್ತಿಗೆ ನೌಕರರ ವೇತನದಲ್ಲೇ ಅಂದಾಜು ಆರು ನೂರು ಕೋಟಿ ರೂಪಾಯಿ ನುಂಗಿಹಾಕಿದ್ದಾರೆ. ಈ ಮಹಾ ವಂಚನೆಯ ವಿರುದ್ಧ ತನಿಖೆ ನಡೆಸಿ, ಭಾಗಿಯಾಗಿರುವ ಎಲ್ಲಾ ಅಧಿಕಾರಿಗಳಿಗೆ ಕಠಿಣ ಕ್ರಮ ಜರುಗಿಸಿ, ಆಸ್ತಿ ಗಳನ್ನು ಮುಟ್ಟುಗೋಲು ಹಾಕಿಕೊಂಡು, ಅನ್ಯಾಯಕ್ಕೆ ಒಳಗಾಗಿರುವ ಗುತ್ತಿಗೆ ನೌಕರರನ್ನು ಪತ್ತೆ ಹಚ್ಚಿ ಅವರಿಗಾಗಿರುವ ನಷ್ಟವನ್ನು ತುಂಬಿ ಕೊಡಬೇಕು ಎಂದು ಆಗ್ರಹಿಸಿದರು.

ನಿಧನ

ಲಕ್ಷ್ಮಮ್ಮ



ಮೈಸೂರು, ಡಿ. 28– ಮೈಸೂರು ತಾಲೂಕು ಕೇರ್ಗಳ್ಳಿ ಗ್ರಾಮದ ಲೇಟ್ ಕರಿಶೆಟ್ಟರ ಪತ್ನಿ ಲಕ್ಷ್ಮಮ್ಮ(78) ಅವರು ಶನಿವಾರ ತಮ್ಮ ನಿವಾಸದಲ್ಲಿ ನಿಧನರಾದರು. ದಿವಂಗತರು ನಾಲ್ವರು ಪುತ್ರರು ಮತ್ತು ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳವನ್ನು ಅಗಲಿದ್ದಾರೆ. ಭಾನುವಾರ 12 ಗಂಟೆಗೆ ದಿವಂಗತರ ಅಂತ್ಯಕ್ರಿಯೆಯನ್ನು ಕೇರ್ಗಳ್ಳಿ ಗ್ರಾಮದಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೇಶ - ವಿದೇಶ

ಚೀನಾ ಲ್ಯಾಬ್‌ನಿಂದ ಕೋವಿಡ್ ವೈರಸ್ ಸೋರಿಕೆ: ಎಫ್‌ಬಿಐ ತನಿಖಾ ವರದಿ


ವಾಷಿಂಗ್ಟನ್, ಡಿ.28– ಕೋವಿಡ್-19 ಸೋಂಕಿನ ವೈರಾಣು



ಚೀನಾದ ಪ್ರಯೋಗಾಲಯದಿಂದಲೇ ಸೋರಿಕೆಯಾಗಿತ್ತು ಎಂಬ ಸಂಗತಿಯನ್ನು ಅಮೆರಿಕದ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ (ಎಫ್‌ಬಿಐ) ಬಹಿರಂಗಪಡಿಸಿದೆ. ಎಫ್‌ಬಿಐ ಮಾಜಿ ವಿಜ್ಞಾನಿ ಹಾಗೂ ಸೂಕ್ಷ್ಮ ಜೀವವಿಜ್ಞಾನ ವೈದ್ಯ ಜೇಸನ್ ಬನ್ನನ್ ಅವರ ತಂಡ ಕೋವಿಡ್-19 ಮೂಲವನ್ನು ಪತ್ತೆ ಹಚ್ಚಿದೆ ಎಂದು ವಾಲ್‌ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ. ಆದರೆ, ಸತ್ಯಶೋಧನಾ ವರದಿಯನ್ನು ನಿರ್ಗಮನದ ಹೊಸ್ತಿಲಲ್ಲಿರುವ ಅಧ್ಯಕ್ಷ ಜೋ ಬೈಡನ್ ಅವರಿಗೆ ಸಲ್ಲಿಸಲು ತನಿಖಾ ಸಂಸ್ಥೆಗೆ ಇನ್ನೂ ಅನುಮತಿ ನೀಡಿಲ್ಲ ಎಂದು ತಿಳಿದುಬಂದಿದೆ. ಎಫ್‌ಬಿಐ ನೇತೃತ್ವದಲ್ಲಿ ರಾಷ್ಟ್ರೀಯ ಗುಪ್ತಚರ ಮಂಡಳಿಯ ವಿಜ್ಞಾನಿಗಳು ಹಾಗೂ ವೈದ್ಯರು ಕೋವಿಡ್ ಮೂಲದ ಪತ್ತೆಗೆ ಅಧ್ಯಯನ ನಡೆಸಿದ್ದರು. ನಮ್ಮ ವಿಶ್ಲೇಷಣೆ ಮೇಲೆ ನಮಗೆ ಪೂರ್ಣ ವಿಶ್ವಾಸವಿದೆ. ವೈರಾಣು ಚೀನಾ ಪ್ರಯೋಗಾಲಯದಿಂದ ಸೋರಿಕೆಯಾಗಿದೆ ಎಂಬುದು ನಂಬಿಕೆಯಾಗಿದೆ ಎಂದು ವಿಜ್ಞಾನಿ ಜೇಸನ್ ಬನ್ನನ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಮೂವರು ವಿಜ್ಞಾನಿಗಳಾದ ಜಾನ್ ಹಾರ್ಡಾಮ್, ರಾಬರ್ಟ್ ಕಟ್ಲಿಪ್ ಮತ್ತು ಜೀನ್ ಪಾಲ್ ಅವರ ತಂಡವು ಕೋವಿಡ್ 19ರ ಮೂಲವನ್ನು ಅಧ್ಯಯನ ನಡೆಸಿದ್ದಾರೆ.

ರೂಪಾಯಿ ಮೌಲ್ಯದಲ್ಲಿ ಭಾರಿ ಇಳಿಕೆ, 2 ವರ್ಷಗಳಲ್ಲೇ ಅತ್ಯಂತ ಕೆಟ್ಟ ಕುಸಿತ

ಮುಂಬಯಿ: ಅಮೆರಿಕದ ಡಾಲರ್ ಎದುರು ಭಾರತದ



ರೂಪಾಯಿ ಮೌಲ್ಯ ಭಾರೀ ಕುಸಿತ ಕಂಡಿದೆ. ವಹಿವಾಟಿನಲ್ಲಿ ರೂಪಾಯಿ ಮೌಲ್ಯವು ಸಾರ್ವಕಾಲಿಕ ಕನಿಷ್ಠ ಮಟ್ಟ 85.81ಕ್ಕೆ ಕುಸಿದಿತ್ತು. ಇದು ಸುಮಾರು 2 ವರ್ಷಗಳಲ್ಲೇ ಅತ್ಯಂತ ಕೆಟ್ಟ ಕುಸಿತವಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಮಧ್ಯಪ್ರವೇಶದ ಬಳಿಕ ಸ್ವಲ್ಪ ಚೇತರಿಕೆ ಕಂಡಿತು. ಆದರೂ 85.50ರಲ್ಲಿ ವಹಿವಾಟು ಅಂತ್ಯಗೊಳಿಸಿದೆ. ಇದು ಸಹ ಸಾರ್ವಕಾಲಿಕ ಕನಿಷ್ಠ ಮಟ್ಟವಾಗಿದೆ.

ಆಮದುದಾರರು ಮತ್ತು ಬ್ಯಾಂಕ್‌ಗಳಲ್ಲಿ ಮಾಸಾಂತ್ಯದ ಪೇಮೆಂಟ್‌ಗೆ ಡಾಲರ್‌ಗೆ ಬೇಡಿಕೆ ಹೆಚ್ಚಿದ್ದರಿಂದ ರೂಪಾಯಿ ಮೌಲ್ಯ ಕುಸಿದಿದೆ. ಅಲ್ಪಾವಧಿಯ ಫಾರ್ವರ್ಡ್ ಒಪ್ಪಂದಗಳಲ್ಲಿ ತನ್ನ ಡಾಲರ್ ಪಾವತಿಗಳನ್ನು ಹಿಡಿದಿಟ್ಟುಕೊಳ್ಳುವ ಭಾರತೀಯ ರಿಸರ್ವ್ ಬ್ಯಾಂಕ್‌ನ ನಿಲುವು ರೂಪಾಯಿ ಮೌಲ್ಯ ಮತ್ತಷ್ಟು ಕುಸಿಯುವುದನ್ನು ತಡೆಯಿತು. ರೂಪಾಯಿ ಕುಸಿತದ ಬೆನ್ನಲ್ಲೇ ಭಾರತದ ವಿದೇಶಿ ವಿನಿಮಯ ಮೀಸಲು ಕೂಡ 8.478 ಬಿಲಿಯನ್ ಡಾಲರ್ (ಸುಮಾರು 72,400 ಕೋಟಿ ರೂ.)ಗಳಷ್ಟು ಭಾರಿ ಇಳಿಕೆ ಕಂಡಿದೆ. ಈ ಮೂಲಕ ಡಿಸೆಂಬರ್ 20ಕ್ಕೆ ಕೊನೆಗೊಂಡ ವಾರದಲ್ಲಿ 644.391 ಮಿಲಿಯನ್ ಡಾಲರ್ (ಸುಮಾರು 55 ಲಕ್ಷ ಕೋಟಿ ರೂ.)ಗೆ ಇಳಿಕೆಯಾಗಿದೆ ಎಂದು ಆರ್‌ಬಿಐ ಮಾಹಿತಿ ನೀಡಿದೆ.

ಆಫ್ರಿಕಾದ ಚಾಡ್ ದೇಶದ ಆದಿವಾಸಿ ಮಹಿಳಾ ಅಧ್ಯಕ್ಷೆಗೆ ಯುಎಇ ಅಧ್ಯಕ್ಷನಿಂದ ಜಾಯೆದ್ ಪದಕ

ಅಬುಧಾಬಿ: ಮಧ್ಯ ಆಫ್ರಿಕಾದ ಚಾಡ್ ದೇಶದ ಆದಿವಾಸಿ



ಮಹಿಳಾ ಮತ್ತು ಪೀಪಲ್ಸ್ ಅಸೋಸಿಯೇಶನ್‌ನ ಅಧ್ಯಕ್ಷೆ ಹಿಂದು ಔಮರೌ ಇಬ್ರಾಹಿಂ ಅವರಿಗೆ 'ಜಾಯೆದ್' 2ನೇ ಪದಕ ಪ್ರಶಸ್ತಿ ಒಲಿದು ಬಂದಿದೆ.

ಯುಎಇ ಅಧ್ಯಕ್ಷ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರು ಹಿಂದು ಔಮರೌ ಇಬ್ರಾಹಿಂ ಅವರಿಗೆ ಈ ಪ್ರಶಸ್ತಿ ಘೋಷಿಸಿದ್ದರು.

ಕಳೆದ ವರ್ಷ ಯುಎಇಯಲ್ಲಿ ಆಯೋಜಿಸಲಾಗಿದ್ದ ಹವಾಮಾನ ಬದಲಾವಣೆ ಮೇಲಿನ UN ಫ್ರೇಮ್‌ವರ್ಕ್ ಸಮಾವೇಶಕ್ಕಾಗಿ COP28 ಸಮ್ಮೇಳನದ ಯಶಸ್ಸಿಗೆ ಅವರ ಪ್ರಮುಖ ಕೊಡುಗೆಗಳನ್ನು ಗುರುತಿಸಿ ಪದಕ ನೀಡಲಾಗಿದೆ. ರಿಪಬ್ಲಿಕ್ ಆಫ್ ಚಾಡ್‌ನ ಯುಎಇ ರಾಯಭಾರಿ ರಶೀದ್ ಸುಯೀದ್ ಅಲ್ ಶಮ್ಸಿ ಅವರು ಔಮರೌ ಇಬ್ರಾಹಿಂ ಅವರಿಗೆ ಪದಕ ನೀಡಿ ಗೌರವಿಸಿದರು. ಅವರು ಈ ಪ್ರಶಸ್ತಿಗಾಗಿ ಅಧ್ಯಕ್ಷ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರಿಗೆ ಕೃತಜ್ಞತೆ ಸಲ್ಲಿಸಿದರು. ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಸಮ್ಮೇಳನದಲ್ಲಿ ಮುಕ್ತಾಯಗೊಂಡ ಐತಿಹಾಸಿಕ ಯುಎಇ ಒಮ್ಮತವನ್ನು ಇಬ್ರಾಹಿಂ ಶ್ಲಾಘಿಸಿದರು. ಇದು ಜಾಗತಿಕ ಹವಾಮಾನ ಕ್ರಮಕ್ಕೆ ಮತ್ತು ಸುಸ್ಥಿರತೆಗೆ ನಿರ್ಣಾಯಕ ಉಲ್ಲೇಖವಾಗಿದೆ ಎಂದು ಹೇಳಿದ್ದಾರೆ.

ವಧುವಿನ ಮನೆ ಮೇಲೆ ನೋಟಿನ ಮಳೆಗೈಯಲು ವಿಮಾನವನ್ನೇ ಬಾಡಿಗೆ ಪಡೆದ ವರನ ತಂದೆ

ಹೈದರಾಬಾದ್(ಪಾಕಿಸ್ತಾನ): ವರನ ತಂದೆ ತನ್ನ ಮಗನ ಮದುವೆಗೆ ವಿಮಾನವನ್ನು ಬಾಡಿಗೆಗೆ ಪಡೆದು ವಧುವಿನ ಮನೆಯ ಮೇಲೆ ನೋಟಿನ ಮಳೆಗರೆದಿದ್ದಾರೆ. ಆಕಾಶದಲ್ಲಿ ಹಾರಾಡುತ್ತಿರುವ ವಿಮಾನದಿಂದ ನೋಟುಗಳನ್ನು ಬೀಳಿಸುತ್ತಿರುವ ದೃಶ್ಯ ಸೋಷಿಯಲ್ ಮೀಡಿಯಾದಲ್ಲಿ ಗಮನ ಸೆಳೆಯುತ್ತಿದೆ. ಈ ಘಟನೆ ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಹೈದರಾಬಾದ್‌ನಲ್ಲಿ ನಡೆದಿದೆ. ಈ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಶೇರ್ ಮಾಡಲಾಗಿದ್ದು, ವರನ ತಂದೆ ತನ್ನ ಮಗನ ಮದುವೆಗೆ ವಿಮಾನವನ್ನು ಬಾಡಿಗೆಗೆ ತೆಗೆದುಕೊಂಡು ವಧುವಿನ ಮನೆಯ ಮೇಲೆ ನೋಟಿನ ಮಳೆಗೈದಿದ್ದಾರೆ. ವರನು ತನ್ನ ತಂದೆಯ ಋಣವನ್ನು, ತನ್ನ ಜೀವನದುದ್ದಕ್ಕೂ ತೀರಿಸುತ್ತಾನೆ ಎಂದು ಶೀರ್ಷಿಕೆ ನೀಡಲಾಗಿದೆ. ನೆಟ್ಟಿಗರು ನಾನಾ ರೀತಿಯ ಕಾಮೆಂಟ್‌ಗಳನ್ನು ಮಾಡಿದ್ದಾರೆ. ಬಳಕೆದಾರರೊಬ್ಬರು, ವರದಕ್ಷಿಣೆಯೂ ಸಮಾಜಕ್ಕೆ ಬಲವಾದ ಹೊಡೆತವನ್ನು ಉಂಟುಮಾಡುತ್ತದೆ ಎಂದು ಕಾಮೆಂಟ್ ಮಾಡಿದ್ದಾರೆ. ಮತ್ತೊಬ್ಬರು, 'ಈ ತಂದೆ ಭವಿಷ್ಯದಲ್ಲಿ ಹುಡುಗ ಇಷ್ಟು ಹೊರೆ ಹೊರುತ್ತಾನೆ ಎಂದು ಯೋಚಿಸಿರಲಿಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ. ಮತ್ತೊಬ್ಬ ಬಳಕೆದಾರರು ಅಂತಾರಾಷ್ಟ್ರೀಯ ಹಣಕಾಸು ನಿಧಿಯು ಪಾಕಿಸ್ತಾನಕ್ಕೆ ಸಾಲ ನೀಡುವುದನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಕಾಮೆಂಟ್‌ನಲ್ಲಿ ಬರೆದುಕೊಂಡಿದ್ದಾರೆ.

ಮನಾಲಿಯಲ್ಲಿ ಭಾರಿ ಹಿಮಪಾತ; 10 ಸಾವಿರಕ್ಕೂ ಹೆಚ್ಚು ಪ್ರವಾಸಿಗರ ರಕ್ಷಣೆ

ಹಿಮಾಚಲ ಪ್ರದೇಶ: ದೇಶದ ಪ್ರಮುಖ ಪ್ರವಾಸಿ ತಾಣ



ವಾದ ಮನಾಲಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಿಮಪಾತವಾಗುತ್ತಿದ್ದು, ಕಾರುಗಳು ಅಲ್ಲಲ್ಲಿ ಸಿಲುಕಿ ಹಾಕಿಕೊಂಡಿವೆ. ದೇಶದ ವಿವಿಧ ಭಾಗಗಳಿಂದ ಬಂದಿರುವ ಪ್ರವಾಸಿಗರು ಪರದಾಡುವಂತಾಗಿದೆ. ಭಾರಿ ಹಿಮಪಾತದಿಂದ ತತ್ತರಿಸಿರುವ ಸೋಲಾಂಗ್ ಕಣಿವೆಯಿಂದ ಶುಕ್ರವಾರ (ಡಿ.27) ಹಿಮಾಚಲ ಪ್ರದೇಶ ಪೊಲೀಸರು 10 ಸಾವಿರಕ್ಕೂ ಹೆಚ್ಚು ಪ್ರವಾಸಿಗರನ್ನು ಸುರಕ್ಷಿತವಾಗಿ ಸ್ಥಳಾಂತರಿಸಿದ್ದಾರೆ. ಈ ಪ್ರದೇಶದಲ್ಲಿ ಸುಮಾರು 2 ಸಾವಿರ ವಾಹನಗಳು ಸಿಕ್ಕಿ ಹಾಕಿಕೊಂಡಿವೆ. ದಟ್ಟವಾದ ಮಂಜು, ಹಿಮಪಾತದಿಂದ ವಾಹನಗಳಿಗೆ ಸಂಚರಿಸಲು ಸಾಧ್ಯವಾಗದಂತಹ ಪರಿಸ್ಥಿತಿಯಿದೆ. ಜಾರು ರಸ್ತೆಗಳು ಅಪಾಯಕಾರಿಯಾಗಿವೆ. ಈಗಾಗಲೇ ಕಾರುಗಳು ಸ್ಕಿಡ್ ಆಗುತ್ತಿದ್ದು, ಒಂದಕ್ಕೊಂದು ಡಿಕ್ಕಿ ಹೊಡೆಯುತ್ತಿವೆ. ಮುಖ್ಯವಾಗಿ ನರಕಂದ ಕುಫ್ರಿ ಮತ್ತು ಅಟಲ್ ಸುರಂಗ ವ್ಯಾಪ್ತಿಯ ಪ್ರದೇಶಗಳಲ್ಲಿ ಎಚ್ಚರಿಕೆಯಿಂದ ಮತ್ತು ನಿಧಾನವಾಗಿ ಚಲಾಯಿಸಲು ಪ್ರವಾಸಿಗರು, ಸ್ಥಳೀಯ ಟ್ಯಾಕ್ಸಿ ಚಾಲಕರಿಗೆ ಪೊಲೀಸರು ಸಲಹೆ ನೀಡಿದ್ದಾರೆ. ಹಿಮದಿಂದ ಆವೃತವಾದ ಪರ್ವತಗಳಲ್ಲಿ ಕ್ರಿಸ್‌ಮಸ್ ಹಾಗೂ ಹೊಸ ವರ್ಷವನ್ನು ಆಚರಿಸಲು ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಮನಾಲಿಗೆ ಆಗಮಿಸುತ್ತಿರುವುದರಿಂದ ಈ ಪರಿಸ್ಥಿತಿ ನಿರ್ಮಾಣವಾಗಿದೆ

ಮೈಸೂರು ಮಿತ್ರ ಭಾನುವಾರ 29 ಡಿಸೆಂಬರ್ 2024

ಶ್ರೀ ಮೃತ್ಯುಂಜಯ ದೇವಾಲಯದ ಜಾತ್ರಾ ಮಹೋತ್ಸವದಲ್ಲಿ ಕೊಡವರಿಗೆ ಅವಮಾನ, ಹಲ್ಲೆ

ಶೀಘ್ರದಲ್ಲೇ ಕೊಡವರ ನಡೆ ಕಟ್ಟೆಮಾಡು ಕಡೆ ಬೃಹತ್ ಜಾಥಾ



ವಿರಾಜಪೇಟೆ ಕೊಡವ ಸಮಾಜದ ಗೌರವ ಕಾರ್ಯದರ್ಶಿ ಮಾಳೇಟಿರ ಶ್ರೀನಿವಾಸ್ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವುದು.

ಮಡಿಕೇರಿ, ಡಿ.28– ಮರಗೋಡಿನ ಕಟ್ಟೆಮಾಡು ಶ್ರೀಮಹಾ ಮೃತ್ಯುಂಜಯ ದೇವಾಲಯದ ಜಾತ್ರಾ ಮಹೋತ್ಸವದಲ್ಲಿ ಕೊಡವ ಸಾಂಪ್ರದಾಯಿಕ ಕುಪ್ಯಚೇಲೆಯನ್ನು ಧರಿಸಿ ದೇವರ ದರ್ಶನ ಪಡೆಯುತ್ತಿದ್ದ ಕೊಡವರನ್ನು ಅವಮಾನಿಸಲಾಗಿದೆ ಮತ್ತು ಹಲ್ಲೆ ಮಾಡಲಾಗಿದೆ ಎಂದು ಆರೋಪಿಸಿರುವ ವಿವಿಧ ಸಂಘಟನೆಗಳು, ಸದ್ಯದಲ್ಲಿಯೇ 'ಕೊಡವರ ನಡೆ ಕಟ್ಟೆಮಾಡು ಕಡೆ' ಬೃಹತ್ ಜಾಥಾ ನಡೆಸಲು ನಿರ್ಧರಿಸಿವೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿರಾಜಪೇಟೆ ಕೊಡವ ಸಮಾಜದ ಗೌರವ ಕಾರ್ಯದರ್ಶಿ ಮಾಳೇಟಿರ ಶ್ರೀನಿವಾಸ್, ಶ್ರೀಮಹಾ ಮೃತ್ಯುಂಜಯ ದೇವಾಲಯದಲ್ಲಿ ನಡೆದ ಘಟನೆಯನ್ನು ತೀವ್ರವಾಗಿ ಖಂಡಿಸುವುದಾಗಿ ತಿಳಿಸಿದರು.

ರಾಜಕೀಯ ಹಿನ್ನೆಲೆಯುಳ್ಳ ಕೆಲವು ಅನಾಗರಿಕ ವ್ಯಕ್ತಿಗಳು ಕೊಡವ ಜನಾಂಗದ ಹಕ್ಕನ್ನು ಕಸಿದುಕೊಳ್ಳುವ ಪ್ರಯತ್ನ ಮಾಡಿದ್ದು, ಕೊಡವ ಮಹಿಳೆಯರನ್ನು ಅವಮಾನಿಸಲಾಗಿದೆ ಕೆಲವರ ಮೇಲೆ ಹಲ್ಲೆಯಾಗಿದೆ ಎಂದು ಆರೋಪಿಸಿದರು. ವೀರ ಸೇನಾನಿಗಳಾದ ಫೀ.ಮಾ.ಕೆ.ಎಂ.ಕಾರ್ಯಪ್ಪ ಹಾಗೂ ಜನರಲ್ ಕೆ.ಎಸ್. ತಿಮ್ಮಯ್ಯ ಅವರಿಗೆ ಅಪಮಾನ ಮಾಡಿರುವುದನ್ನು ಖಂಡಿಸಿ ನಡೆಸಿದ ಹೋರಾಟಕ್ಕೆ ಒಂದು ಜನಾಂಗ ಬೆಂಬಲ ನೀಡಿರಲಿಲ್ಲ. ಕೊಡವರು ಎಂದಿಗೂ ಅವರ ವಿರೋಧಿಗಳಲ್ಲ, ಮೊದಲು ಆ ಜನಾಂಗ ಒಂದು ಬಾರಿ ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಒತ್ತಾಯಿಸಿದರು. ಕೊಡವರೆಲ್ಲರು ಒಗ್ಗೂಡಿ ಸದ್ಯದಲ್ಲಿಯೇ ಕೊಡವ ಸಾಂಪ್ರದಾಯಿಕ ಉಡುಪಿನಲ್ಲಿ 'ಕೊಡವರ ನಡೆ ಕಟ್ಟೆಮಾಡು ಕಡೆ' ಬೃಹತ್ ಜಾಥಾ ನಡೆಸುವುದಾಗಿ ತಿಳಿಸಿದರು.

ಕಟ್ಟೆಮಾಡು ಶ್ರೀ ಭದ್ರಕಾಳಿ ದೇವಾಲಯದ ಅಧ್ಯಕ್ಷ ರವಿ ಸುಬ್ಬಯ್ಯ ಮಾತನಾಡಿ, ಸುಮಾರು 20 ಮಂದಿ ಕೊಡವರು ಸಂಪ್ರದಾಯದಂತೆ ಸಾಂಪ್ರದಾಯಿಕ ಕೊಡವ ಉಡುಪಿನಲ್ಲಿ ಮೊದಲು ಶ್ರೀಭದ್ರಕಾಳಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ನಂತರ ಮಹಾ ಮೃತ್ಯುಂಜಯ ದೇವಾಲಯದ ಜಾತ್ರಾ ಮಹೋತ್ಸವಕ್ಕೆ ತೆರಳಿದ್ದೇವೆ. ಈ ಸಂದರ್ಭ ಕುಪ್ಯಚೇಲೆ ತೆಗೆದು ದೇವಾಲಯ ಪ್ರವೇಶಿಸುವಂತೆ ಕೆಲವರು ಒತ್ತಡ ಹೇರಿದ್ದು, ಕೆಲವರ ಮೇಲೆ ಹಲ್ಲೆಯಾಗಿದೆ. ಇದು ಖಂಡನೀಯವೆಂದು ಅಸಮಾಧಾನ ವ್ಯಕ್ತಪಡಿಸಿದರು. ಯಾವುದೇ ದೇವಾಲಯಗಳಲ್ಲಿ ಬೈಲಾಗಳಿಗೆ ಅವಕಾಶವಿಲ್ಲ, ಸಾಂಪ್ರದಾಯಿಕ ಉಡುಪು ಧರಿಸಿ ಬರುವುದನ್ನು ವಿರೋಧಿಸುವುದು ಸರಿಯಲ್ಲವೆಂದರು.

ಮಾಜಿ ಕಾರ್ಯದರ್ಶಿ ಸಾದೇರ ರಮೇಶ್ ಮಾತನಾಡಿ, ಶುಕ್ರವಾರ ಕಟ್ಟೆಮಾಡು ಶ್ರೀಭದ್ರಕಾಳಿ ದೇವಾಲಯದ ಹಬ್ಬ ಕೂಡ ಇದ್ದ ಕಾರಣ ಸಾಂಪ್ರದಾಯಿಕ ಕೊಡವ ಉಡುಪಿನಲ್ಲಿ ಹೋದವರು ಮಹಾ ಮೃತ್ಯುಂಜಯ ದೇವಾಲಯದ ಜಾತ್ರೋತ್ಸವದಲ್ಲಿ ಪಾಲ್ಗೊಳ್ಳೋಣವೆಂದು ತೆರಳಿದ್ದೆವು. ಆದರೆ ನಮ್ಮ ಸಾಂಪ್ರದಾಯಿಕ ಉಡುಪಿನ ಬಗ್ಗೆ ಪ್ರಶ್ನೆ ಮಾಡಿದ್ದಾರೆ ಇದು ಇಡೀ ಕೊಡವ ಜನಾಂಗಕ್ಕೆ ಆದ ಅವಮಾನವೆಂದು ಬೇಸರ ವ್ಯಕ್ತಪಡಿಸಿದರು. ನಾವು ಇದೇ ಊರಿನಲ್ಲಿ ಹುಟ್ಟಿ ಬೆಳೆದವರು, ದೇವಾಲಯದ ಜೀರ್ಣೋದ್ಧಾರದ ಸಂದರ್ಭ ಮತ್ತು ಈ ಬಾರಿಯ ಜಾತ್ರೋತ್ಸವಕ್ಕೆ ಸಾಕಷ್ಟು ಧನ ಸಹಾಯ ಮಾಡಿದ್ದೇವೆ. ಆದರೆ ನಮಗೆ ಅವಮಾನ ಮಾಡಲಾಗಿದೆ. ಕೊಡವರ ಸಾಂಪ್ರದಾಯಿಕ ಕುಪ್ಯಚೇಲೆಯನ್ನು ಯಾರಿಂದಲೂ ಬಿಚ್ಚಿಸಲು ಸಾಧ್ಯವಿಲ್ಲ ಎಂದರು.

ಜಬ್ಬೂಮಿ ಸಂಘಟನೆಯ ಅಧ್ಯಕ್ಷ ಚೊಟ್ಟೆಯ್‌ಮಾಡ ರಾಜೀವ್ ಬೋಪಯ್ಯ ಮಾತನಾಡಿ, ಕಳೆದ 8–10 ವರ್ಷಗಳಿಂದ ಜಿಲ್ಲೆಯಲ್ಲಿ ಈ ರೀತಿಯ ಬೆಳವಣಿಗೆಗಳಾಗುತ್ತಿದ್ದು, ಜಿಲ್ಲೆಯಲ್ಲಿ ಸಾಮರಸ್ಯ ಕಾಪಾಡಬೇಕು ಎನ್ನುವ ಉದ್ದೇಶದಿಂದ ಸರ್ವ ಜನಾಂಗಗಳ ಒಕ್ಕೂಟವನ್ನು ರಚಿಸಲಾಯಿತು. ಆದರೆ ಇದಕ್ಕೆ ಒಂದು ಜನಾಂಗದಿಂದ ಬೆಂಬಲ ದೊರೆಯಲಿಲ್ಲ. ಈ ಹಿಂದೆ ತಲಕಾವೇರಿ ಕ್ಷೇತ್ರದಲ್ಲಿ ಕೂಡ ಕುಪ್ಯಚೇಲೆ ಕುರಿತು ಗೊಂದಲ ಸೃಷ್ಟಿಸಲಾಗಿತ್ತು. ಇದರ ಪರಿಣಾಮ ಇಂದು ಎಲ್ಲಾ ಕೊಡವರು ಕುಪ್ಯಚೇಲೆ ಧರಿಸುವಂತಾಗಿದ್ದು ಮತ್ತು ಕ್ಷೇತ್ರಕ್ಕೆ ಬರುವಂತಾಗಿದ್ದು ಗೊಂದಲ ಸೃಷ್ಟಿಸಿದವರಿಗೆ ಧನ್ಯವಾದ ಸಲ್ಲಿಸುವುದಾಗಿ ತಿಳಿಸಿದರು. ಕಟ್ಟೆಮಾಡು ಪ್ರಕರಣದಲ್ಲಿ ಒಂದು ಜನಾಂಗವನ್ನು ಗುರಿ ಮಾಡುವುದಿಲ್ಲ, ಕೆಲವು ಕಿಡಿಗೇಡಿಗಳಿಂದ ಈ ಘಟನೆ ನಡೆದಿದೆ. ಸಂಬಂಧಪಟ್ಟ ಇಲಾಖೆಗಳು ಎಚ್ಚರವಹಿಸುವ ಅಗತ್ಯವಿದ್ದು, ತಪ್ಪಿತಸ್ಥರನ್ನು ಬಂಧಿಸಿ ಕಾನೂನು ಕ್ರಮ ಕೈಗೊಂಡರೆ ಮತ್ತೆ ಈ ರೀತಿಯ ಪ್ರಕರಣಗಳು ಮರುಕಳಿಸುವುದಿಲ್ಲ ಎಂದು ಅಭಿಪ್ರಾಯಪಟ್ಟರು. ಕೊಡವರು ಏನೇ ಮಾಡಿದರೂ ಯಾಕೆ ಪ್ರಶ್ನೆ ಮಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ಕೊಡವರ ನಡೆ ಕಟ್ಟೆಮಾಡು ಕಡೆ ಬೃಹತ್ ಜಾಥಾ ಯಾರ ವಿರುದ್ಧವೂ ಅಲ್ಲ, ಬದಲಿಗೆ ಸ್ವಾಭಿಮಾನಕ್ಕಾಗಿ ನಡೆಸುತ್ತಿರುವುದಾಗಿ ಸ್ಪಷ್ಟಪಡಿಸಿದರು.

ಕನೆಕ್ಟಿಂಗ್ ಕೊಡವಾಸ್ ಸಂಘಟನೆಯ ಪ್ರಮುಖ ಪಾಲೇಂಗಡ ಅಮಿತ್ ಭೀಮಯ್ಯ ಕೊಡವರು ಕೊಡವ ಸಾಂಪ್ರದಾಯಿಕ ಉಡುಪು ಧರಿಸಿ ದೇವಾಲಯಕ್ಕೆ ಬರಬಾರದೆಂದು ಹೇಳುವ ಅಧಿಕಾರವನ್ನು ಯಾರು ಯಾರಿಗೂ ನೀಡಿಲ್ಲ. ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಸೂಕ್ತ ತನಿಖೆ ನಡೆಸಬೇಕು, ತಪ್ಪಿತಸ್ಥರನ್ನು ಗಡಿಪಾರು ಮಾಡಬೇಕೆಂದು ಒತ್ತಾಯಿಸಿದರು. ಪ್ರಧಾನಮಂತ್ರಿಗಳು ಸಬ್ ಕಾ ಸಾತ್ ಸಬ್ ಕಾ ವಿಕಾಸ್ ಎಂದು ಘೋಷಿಸಿಕೊಂಡಿದ್ದಾರೆ. ಆದರೆ ಅವರದ್ದೇ ಪಕ್ಷದಲ್ಲಿರುವ ಕಟ್ಟೆಮಾಡಿನ ವ್ಯಕ್ತಿ ಆ ಪಕ್ಷದ ಉಪಾಧ್ಯಕ್ಷ ಸ್ಥಾನಕ್ಕೆ ಅನರ್ಹರು ಎಂದು ತಿಳಿಸಿದ ಅವರು, ತಮ್ಮ ಸ್ಥಾನಕ್ಕೆ ತಕ್ಷಣ ರಾಜೀನಾಮೆ ನೀಡಬೇಕೆಂದರು. ಗ್ರಾಮಸ್ಥರಾದ ಅಚ್ಚಕಾಳೇರ ಸವಿತಾ ನವೀನ್ ಮಾತನಾಡಿ ದೇವಾಲಯದಲ್ಲಿ ಮಹಿಳೆಯರ ಮೇಲೆ ಕೂಡ ಹಲ್ಲೆಯಾಗಿದೆ, ನಾವು ಹುಟ್ಟಿದ ಊರಲ್ಲಿ ನಮಗೆ ಬೆಲೆ ಇಲ್ಲದಾಗಿದೆ. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಕೊಡವರ ಮೇಲೆ ಇನ್ನು ಮುಂದೆ ದೌರ್ಜನ್ಯ ನಡೆಯಬಾರದು ಎಂದು ಒತ್ತಾಯಿಸಿದರು.

ಶ್ರೀ ಮೃತ್ಯುಂಜಯ ದೇವಾಲಯದಲ್ಲಿ ಮಾತಿನ ಚಕಮಕಿ

ಎರಡು ಗುಂಪುಗಳ ನಡುವೆ ನೂಕಾಟ, ತಳ್ಳಾಟ, ಘೋಷಣೆಗಳ ಸದ್ದು



ದೇವಸ್ಥಾನದಲ್ಲಿ ಮಾತಿನ ಚಕಮಕಿ, ನೂಕಾಟ– ತಳ್ಳಾಟ ನಡೆದ ಸಂದರ್ಭ.

ಮಡಿಕೇರಿ,ಡಿ.28– ಮರಗೋಡು ಗ್ರಾಮ ವ್ಯಾಪ್ತಿಯ ಕಟ್ಟೆಮಾಡು ಶ್ರೀ ಮೃತ್ಯುಂಜಯ ದೇವಾಲಯದ ಹಬ್ಬಾಚರಣೆಯ ಕೊನೆಯ ದಿನದಂದು ಎರಡು ಗುಂಪುಗಳ ನಡುವೆ ವಸ್ತ್ರ ಸಂಹಿತೆಗೆ ಸಂಬಂಧಿಸಿದಂತೆ ಭಿನ್ನಾಭಿಪ್ರಾಯ ಉಂಟಾಗಿ ಮಾತಿನ ಚಕಮಕಿ ನಡೆದಿದೆ.

ಎರಡು ಜನಾಂಗಗಳ ನಡುವೆ ದೇವರ ಕುರಿತು ಘೋಷಣೆ ಕೂಗುವ ಸಂದರ್ಭವೇ ಭಿನ್ನಾಭಿಪ್ರಾಯ ಉಂಟಾಗಿತ್ತು ಎನ್ನಲಾಗಿದೆ. ಇದೇ ವಿಚಾರ ಮುಂದುವರೆದು ಎರಡೂ ಸಮುದಾಯಗಳ ನಡುವೆ ಮಾತಿನ ಚಕಮಕಿ, ಪರಸ್ಪರ ತಳ್ಳಾಟ ನೂಕಾಟ ಕೂಡ ನಡೆದಿದೆ ಎನ್ನಲಾಗಿದೆ. ಬಳಿಕ ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿಯನ್ನು ನಿಯಂತ್ರಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡೂ ಕಡೆಗಳಿಂದ ಅಲ್ಲಿನ ಗ್ರಾಮಸ್ಥರಾದ ಎನ್.ಪಿ. ಮಾದಪ್ಪ ಹಾಗೂ ಬಿ.ಮೋಹನ್ ಎಂಬುವರು ಮಡಿಕೇರಿ ಗ್ರಾಮಾಂತರ ಠಾಣೆಗೆ ದೂರು ಪ್ರತಿದೂರು ನೀಡಿದ್ದಾರೆ. ಈ ಘಟನೆಗೆ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ ತೀವ್ರವಾಗಿ ಖಂಡಿಸಿದ್ದಾರೆ. ವ್ಯಾಲಿಡ್ಯೂ ಕೊಡವ ಕಲ್ಚರಲ್ ಅಸೋಷಿಯೇಷನ್, ಕೊಡವ ವೆಲ್ ಫೇರ್ ಐಂಡ್ ರಿಕ್ರಿಯೇಷನ್ ಅಸೋಸಿಯೇಷನ್, ಚೆಟ್ಟಳ್ಳಿ ಕೊಡವ ಸಮಾಜ ಸೇರಿದಂತೆ ವಿವಿಧ ಸಂಘಟನೆಗಳು ಖಂಡನೆ ವ್ಯಕ್ತಪಡಿಸಿವೆ.

ಮೃತ್ಯುಂಜಯ ದೇವಸ್ಥಾನದಲ್ಲಿ ಕೊಡವರ ಸಾಂಪ್ರದಾಯಕ ಉಡುಗೆಗೆ ಅವಕಾಶವಿರಲಿ



ಮಡಿಕೇರಿ,ಡಿ.28– ಮರಗೋಡು ಕಟ್ಟೆಮಾಡು ಮೃತ್ಯುಂಜಯ ದೇವಾಲಯದಲ್ಲಿ ನಡೆದ ಘಟನೆ ನೋವನ್ನುಂಟು ಮಾಡಿದ್ದು, ಇಂತಹದಕ್ಕೆ ಅವಕಾಶ ಮಾಡಿಕೊಡುವುದು ಬೇಡ. ಪ್ರಾರ್ಥನೆ ಮಾಡಲು ಹೋದಾಗ ಭಕ್ತಿ ಪೂರ್ವಕವಾಗಿ ಹೋಗಿರುತ್ತೇವೆ. ಅಂತಹ ಸಂದರ್ಭ ಸಂಘರ್ಷಕ್ಕೆ ಅವಕಾಶ ಮಾಡುವುದು ಸರಿಯಲ್ಲ. ಎಲ್ಲರೂ ಶಾಂತಿಯನ್ನು ಕಾಪಾಡೋಣ ಎಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ಶಾಸಕ ಎ.ಎಸ್.ಪೊನ್ನಣ್ಣ ಮನವಿ ಮಾಡಿದ್ದಾರೆ.

ಭಕ್ತಾಧಿಗಳು ದೇವಾಲಯಕ್ಕೆ ಹೋದ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಅಪಚಾರವಾಗುವ ಉಡುಪನ್ನು ಧರಿಸಬಾರದು. ಅದನ್ನು ಧಾರ್ಮಿಕವಾಗಿ ಒಪ್ಪಲು ಸಾಧ್ಯವಿಲ್ಲ. ಆದರೆ ಐತಿಹಾಸಿಕವಾಗಿ ಕೊಡವ ಜನಾಂಗದವರು, ಕೊಡವ ಭಾಷೆಯನ್ನು ಮಾತನಾಡುವ ಜನಾಂಗದವರು, ಕೊಡವ ಸಂಪ್ರದಾಯವನ್ನು ನಡೆಸಿಕೊಂಡು ಬರುತ್ತಿರುವ ಕೊಡವರಿಗೆ ದೇವಸ್ಥಾನದಲ್ಲಿ ಅವಕಾಶ ಮಾಡಿಕೊಡಬೇಕು. ದೇವಾಲಯದ ಬೈಲಾಗಳನ್ನು ಅಳವಡಿಸಿ ಅದನ್ನು ತಡೆದಿದ್ದಾರೆ ಎನ್ನುವ ವಿಚಾರ ತಿಳಿದು ಬಂದಿದೆ. ಅಂತಹ ಬೈಲಾಗಳಿದ್ದರೆ ಅವುಗಳನ್ನು ತಿದ್ದುಪಡಿ ಮಾಡಿ ಅವಕಾಶ ಮಾಡಿಕೊಡುವಂತೆ ದೇವಾಲಯ ಆಡಳಿತ ಮಂಡಳಿಗೆ ಮನವಿ ಮಾಡಿದ್ದಾರೆ.

ಯೇಸುಕ್ರಿಸ್ತನಿಗೆ ಅವಹೇಳನ : ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ಎಸ್‌ಪಿಗೆ ದೂರು



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿದ ಮುಖಂಡರು.

ಮಡಿಕೇರಿ: ಸಾಮಾಜಿಕ ಜಾಲತಾಣದಲ್ಲಿ ಯೇಸುಕ್ರಿಸ್ತರನ್ನು ಅವಹೇಳನ ಮಾಡಿ ಕ್ರೈಸ್ತ ಸಮುದಾಯದ ಭಾವನೆಗೆ ಧಕ್ಕೆ ತಂದಿರುವ ಕಿಡಿಗೇಡಿಗಳನ್ನು ತಕ್ಷಣ ಬಂಧಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಕೊಡಗು ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ನೀಡಿದೆ.

ಕ್ರೈಸ್ತರು ಶ್ರದ್ಧಾಭಕ್ತಿಯಿಂದ ಆರಾಧಿಸುತ್ತಿರುವ ಯೇಸುಕ್ರಿಸ್ತರು ಹಾಗೂ ಕ್ರಿಸ್‌ಮಸ್ ಹಬ್ಬದ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನ ಮಾಡಿರುವ ಪ್ರಕರಣದ ಕುರಿತು ಸೂಕ್ತ ತನಿಖೆ ನಡೆಸಬೇಕು. ಕಿಡಿಗೇಡಿಯೊಬ್ಬ ಕ್ರಿಸ್‌ಮಸ್ ಹಬ್ಬದ ಕುರಿತು ಡಿ.25ರಂದು ಸಾಮಾಜಿಕ ಜಾಲತಾಣದಲ್ಲಿ ಅಗೌರವದ ಪೋಸ್ಟ್ ಮಾಡಿರುವುದಲ್ಲದೆ ಯೇಸುಕ್ರಿಸ್ತರನ್ನು ಕೀಳಾಗಿ ಕಂಡಿದ್ದಾನೆ. ಈತನ ಹೇಳಿಕೆಗೆ ಬೆಂಬಲವಾಗಿ ಮತ್ತೊಬ್ಬ ಕಿಡಿಗೇಡಿ ಅವಹೇಳನಾಕಾರಿ ಪೋಸ್ಟ್ ಮಾಡಿದ್ದಾನೆ. ಇದು ಸಮಾಜದಲ್ಲಿ ಅಶಾಂತಿ ಮೂಡಿಸುವ ಪ್ರಯತ್ನವಾಗಿದ್ದು, ಪೊಲೀಸರು ತಪ್ಪಿತಸ್ಥರನ್ನು ತಕ್ಷಣ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು. ಇನ್ನು ಮುಂದೆ ಈ ರೀತಿಯ ಪ್ರಕರಣಗಳು ನಡೆಯದಂತೆ ಕಠಿಣ ಕಾನೂನು ಜಾರಿಗೊಳಿಸಬೇಕೆಂದು ಪ್ರಮುಖರು ಒತ್ತಾಯಿಸಿದರು.

ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ಪಿ.ಎ.ಹನೀಫ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎಂ.ಸೈಯದ್ ಭಾವ, ಅಲ್ಪಸಂಖ್ಯಾತರ ಘಟಕದ ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆಜಿ.ಪೀಟರ್, ಉಪಾಧ್ಯಕ್ಷ ಆಂಟನಿ ದಾಸ್, ವಿ.ಪೇಟೆ ಬ್ಲಾಕ್ ಅಧ್ಯಕ್ಷ ರಫೀಕ್ ಕೋಲುಮಂಡ ಹಾಜರಿದ್ದರು.

ಶ್ರೀ ಮುತ್ತಪ್ಪ ದೇವರ ಪುತ್ತರಿ ವೆಳ್ಳಾಟಂ, ಗುಳಿಗನ ವೆಳ್ಳಾಟಂ ಆಚರಣೆ



ವಿರಾಜಪೇಟೆ: ಪಟ್ಟಣದ ಅರಸು ನಗರದ ಶ್ರೀ ಮುತ್ತಪ್ಪ ದೇವರ ಪುತ್ತರಿ ವೆಳ್ಳಾಟಂ ಹಾಗೂ ಗುಳಿಗನ ವೆಳ್ಳಾಟಂ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ಶನಿವಾರ ಸಂಜೆ 6 ಗಂಟೆಯಿಂದ ಶ್ರೀ ಮುತ್ತಪ್ಪ ದೇವರ ಪುತ್ತರಿ ವೆಳ್ಳಾಟಂನೊಂದಿಗೆ ಪ್ರಾರಂಭಗೊಂಡು ದೇವಾಲಯದಲ್ಲಿ ವಿಶೇಷ ಪೂಜೆಗಳು ನಡೆದು ರಾತ್ರಿ ಗುಳಿಗನ್ ವೆಳ್ಳಾಟಂ, ಪ್ರಸಾಧ ವಿನಿಯೋಗ ನಡೆಯಿತು. ಬಳಿಕ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಪಟ್ಟಣ ಹಾಗೂ ಗ್ರಾಮೀಣ ಭಾಗದಿಂದಲೂ ಭಕ್ತಾದಿಗಳು ಆಗಮಿಸಿದ್ದರು.

ಹಾಸ್ಟೆಲ್ ವಿದ್ಯಾರ್ಥಿನಿಯರಿಗೆ ರಸ್ತೆ ಸುರಕ್ಷತೆ ಅರಿವು

ಎಲ್ಲರೂ ಕಡ್ಡಾಯವಾಗಿ ಸಂಚಾರ ನಿಯಮ ಪಾಲಿಸಿ: ಪಿಎಸ್‌ಐ ಡಿ.ಧನಂಜಯ



ಅಪರಾಧ ತಡೆ ಮಾಸಾಚರಣೆ ಮತ್ತು ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮದಲ್ಲಿ ಸಂಚಾರ ಠಾಣೆ ಸಬ್ ಇನ್‌ಸ್ಪೆಕ್ಟರ್ ಡಿ.ಧನಂಜಯ ಮಾತನಾಡಿದರು.

ಚಾಮರಾಜನಗರ, ಡಿ.28–ಎಲ್ಲರೂ ಕೂಡ ಕಡ್ಡಾಯವಾಗಿ ಸಂಚಾರ ನಿಯಮಗಳನ್ನು ಪಾಲಿಸಬೇಕು ಎಂದು ಸಂಚಾರ ಠಾಣೆ ಸಬ್ ಇನ್‌ಸ್ಪೆಕ್ಟರ್ ಡಿ.ಧನಂಜಯ ಹೇಳಿದರು.

ನಗರದ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ಜಿಲ್ಲಾ ಪೊಲೀಸ್, ಸಂಚಾರ ಪೊಲೀಸ್ ಠಾಣೆ ವತಿಯಿಂದ ಏರ್ಪಡಿಸಿದ್ದ ಅಪರಾಧ ತಡೆ ಮಾಸಾಚರಣೆ ಮತ್ತು ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದ್ವಿಚಕ್ರ ವಾಹನ ಓಡಿಸುವಾಗ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಕಾರು ಚಲಾಯಿಸುವಾಗ ಸೀಟ್ ಬೆಲ್ಟ್ ಧರಿಸಬೇಕು. ಮದ್ಯಪಾನ ಮಾಡಿ ವಾಹನ ಚಲಾಯಿಸಬಾರದು. ವಾಹನಗಳನ್ನು ಸುಸ್ಥಿತಿಯಲ್ಲಿ ಇರಿಸಿಕೊಂಡು ಅಗತ್ಯ ದಾಖಲೆಗಳನ್ನು ಸರಿಯಾಗಿ ಇಟ್ಟುಕೊಳ್ಳಬೇಕು. ಜಾಗರೂಕತೆಯಿಂದ ವಾಹನ ಚಲಾಯಿಸಿ ಅಪಘಾತಗಳನ್ನು ತಪ್ಪಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಸಂಚಾರ ಠಾಣೆ ಪೊಲೀಸರಾದ ನಂಜುಂಡಸ್ವಾಮಿ, ವಸಂತ ಕುಮಾರ್, ಎಂ.ನಂದೀಶ್ ಹಾಗೂ ವಿದ್ಯಾರ್ಥಿನಿಯರು ಹಾಜರಿದ್ದರು.

ಅಂಬೇಡ್ಕರ್ ಅವರಿಗೆ ಅವಹೇಳನ ಖಂಡಿಸಿ

ಡಿ.31 ರಂದು ಚಾಮರಾಜನಗರ ಬಂದ್‌ಗೆ ಕರೆ



ಚಾಮರಾಜನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಚಾ.ನಗರ ಬಂದ್ ಕುರಿತು ಪೂರ್ವಭಾವಿ ಸಭೆಯಲ್ಲಿ ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ(ಪಾಪು) ಮಾತನಾಡಿದರು.

ಚಾಮರಾಜನಗರ, ಡಿ.28– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಅವಮಾನಿಸುವಂತಹ ಹೇಳಿಕೆ ನೀಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡಲೇ ರಾಜೀನಾಮೆ ನೀಡಬೇಕು. ಇಲ್ಲವೇ ಅವರನ್ನು ಸಂಪುಟದಿಂದ ವಜಾಗೊಳಿಸಬೇಕೆಂದು ಆಗ್ರಹಿಸಿ ದಲಿತ, ರೈತ, ಕನ್ನಡ ಮತ್ತು ಪ್ರಗತಿ ಪರ ಸಂಘಟನೆಗಳು ಡಿ.31 ರಂದು ಚಾಮರಾಜನಗರ ಸ್ವಯಂ ಪ್ರೇರಿತ ಬಂದ್ ನಡೆಸಲು ತೀರ್ಮಾನಿಸಿವೆ.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ(ಪಾಪು) ಅವರ ನೇತೃತ್ವದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದ ಅನೇಕ ಸಂಘಟನೆಗಳ ಮುಖಂಡರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿ, ಅಂತಿಮವಾಗಿ ಅಮಿತ್ ಶಾ ಹೇಳಿಕೆ ಖಂಡಿಸಿ, ಡಿ.31ರಂದು ಚಾನಗರ ಬಂದ್‌ಗೆ ಸಂಪೂರ್ಣ ಬೆಂಬಲ ನೀಡುವುದಾಗಿ ತಿಳಿಸಿದರು. ಅಲ್ಲದೇ ವರ್ತಕರು ಇತರೇ ಸಂಘಟನೆಗಳು ಬಂದ್‌ಗೆ ಹೆಚ್ಚಿನ ಸಹಕಾರ ನೀಡಬೇಕು. ರಾಷ್ಟ್ರಪತಿ ಗಮನ ಸೆಳೆಯಲು ಈ ಬಂದ್ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ ಎಂದರು.

ಸಭೆಯಲ್ಲಿ ಎಸ್‌ಡಿಪಿಐನ ನಗರಸಭಾ ಸದಸ್ಯ ಎಂ.ಮಹೇಶ್, ದಲಿತ ಸಂಘರ್ಷ ಸಮಿತಿ ಸಂಚಾಲಕ ಸಿ.ಎಂ.ಶಿವಣ್ಣ, ಯ.ನಾಗರಾಜು, ಲಾರಿ ಮಾಲೀಕರ ಸಂಘದ ಇರ್ಷಾದ್, ರಾಮಸಮುದ್ರ ಸುರೇಶ್ ಸೇರಿದಂತೆ ಅನೇಕರು ಸ್ವಯಂ ಪ್ರೇರಿತ ಚಾಮರಾಜನಗರ ಬಂದ್‌ಗೆ ನಮ್ಮೆಲ್ಲರ ಬೆಂಬಲ ಇದೆ ಎಂದರು.

ಸಭೆಯ ನೇತೃತ್ವ ವಹಿಸಿದ್ದ ವೆಂಕಟರಮಣಸ್ವಾಮಿ ಮಾತನಾಡಿ, ಸಂಸತ್‌ನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಿ, ದೇಶದಿಂದ ಗಡಿಪಾರು ಮಾಡಬೇಕು. ಪ್ರಧಾನಿ ನರೇಂದ್ರ ಮೋದಿ ಅವರು ಈ ಕೂಡಲೇ ಅಮಿತ್ ಶಾ ವಿರುದ್ಧ ಉಗ್ರ ಕ್ರಮ ಕೈಗೊಂಡು ಬಹಿರಂಗವಾಗಿ ದೇಶದ ಕ್ಷಮೆಯಾಚಿಸಬೇಕು. ಇದರ ಹೊರತಾಗಿ ಮುಂದೆಯು ಸಹ ಇದರ ವಿರುದ್ಧ ಉಗ್ರ ಹೋರಾಟಗಳು ನಡೆಯುತ್ತವೆ ಎಂದು ಎಚ್ಚರಿಕೆ ನೀಡಿದರು.


ಚಾಮರಾಜನಗರ ಬಂದ್‌ಗೆ ವರ್ತಕರ ಸಂಘ, ಕನ್ನಡ ಪರ ಸಂಘಟನೆಗಳು, ರೈತ ಸಂಘಟನೆಗಳು, ದಲಿತ ಸಂಘಟನೆಗಳು, ಚಿತ್ರಮಂದಿರ ಮಾಲೀಕರು, ಬಸ್ ಮಾಲೀಕರು ಚಾಲಕರ ಸಂಘ, ಆಟೋ ಮಾಲೀಕರು ಹಾಗೂ ಚಾಲಕರ ಸಂಘ, ಕಾರು ಮಾಲೀಕರು, ಚಾಲಕರ ಸಂಘ, ಲಾರಿ ಮಾಲೀಕರ ಸಂಘ, ಗೂಡ್ಸ್ ಮಾಲೀಕರ, ಚಾಲಕರ ಸಂಘ, ಹೋಟೆಲ್ ಮಾಲೀಕರು, ಚಿತ್ರಮಂದಿರಗಳ ನೌಕರರು, ಪಟ್ಟಣದ ಎಲ್ಲಾ ಕೋಮಿನ ಯಜಮಾನರು, ಸಮುದಾಯದವರು ಹಾಗೂ ಸಂಘ– ಸಂಸ್ಥೆಗಳ ಮುಖಂಡರಲ್ಲಿ ಮನವಿ ಮಾಡಿಕೊಳ್ಳಲಾಗಿದೆ. ಅವರು ಸಕರಾತ್ಮಕವಾಗಿ ಸ್ಪಂದಿಸಿದ್ದು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಶಾಂತಿಯುತವಾಗಿ ನಡೆಸಲು ಎಲ್ಲರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಯಜಮಾನರಾದ ನಾಗರಾಜು, ಮಹದೇವಯ್ಯ, ಶಿವಯ್ಯ, ದಲಿತ ಮುಖಂಡರಾದ ಛಲವಾದಿ ಮಹಾಸಭಾದ ಸೋಮಸುಂದರ್, ಆಲೂರು ನಾಗೇಂದ್ರ, ಜನಧ್ವನಿ ರಾಮಸಮುದ್ರ ಸುರೇಶ್, ಆಟೋ ಉಮೇಶ್, ಜಿಲ್ಲಾ ಅಂಗವಿಕಲ ಕ್ಷೇಮಾಭಿವೃದ್ಧಿ ಸಂಘ ರಮೇಶ್ ಸಿದ್ದಯ್ಯನಪುರ, ರಂಗಸ್ವಾಮಿ, ಶಿವಣ್ಣ, ನಂಜುಂಡಯ್ಯ, ರಂಗಸ್ವಾಮಿ ಕಾಗಲವಾಡಿ, ದಸಂಸ ಬೆಳ್ಳಿಯಪ್ಪ ಇತರರು ಭಾಗವಹಿಸಿದ್ದರು.

ಕಳೆದ ಸರ್ಕಾರದ ಅನುದಾನದಲ್ಲಿಯೇ ಶಾಸಕ ಗಣೇಶ್ ಪ್ರಸಾದ್ ಗುದ್ದಲಿಪೂಜೆ

ಜಿಲ್ಲಾ ಬಿಜೆಪಿ ಪ್ರದಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್

ಶಾಸಕರಾದ ಬಳಿಕ ಕ್ಷೇತ್ರಕ್ಕೆ ತಂದಿರುವ ಅನುದಾನದ ಲೆಕ್ಕ ಕೊಡಿ



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ಮಾತನಾಡಿದರು.

ಚಾಮರಾಜನಗರ.ಡಿ.28–ಕಳೆದ ಸರ್ಕಾರದಲ್ಲಿ ಬಿಡುಗಡೆಯಾಗಿದ್ದ ಅನುದಾನದಲ್ಲಿ ಗುಂಡ್ಲುಪೇಟೆ ಶಾಸಕ ಗಣೇಶ್ ಪ್ರಸಾದ್ ಗುದ್ದಲಿಪೂಜೆ ಹಾಗೂ ಉದ್ಘಾಟನೆ ಮಾಡುತ್ತಿದ್ದಾರೆಯೇ ಹೊರತು ಇವರು ಸರ್ಕಾರದಿಂದ ಯಾವುದೇ ಅನುದಾನ ತಂದಿಲ್ಲ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಶಾಸಕ ಗಣೇಶ್‌ಪ್ರಸಾದ್ ಅವರು ಮಾಜಿ ಶಾಸಕರ ವಿರುದ್ಧ ಇಲ್ಲಸಲ್ಲದ ಹೇಳಿಕೆ ನೀಡುತ್ತಿರುವುದು ಹೇಳಿಕೆ ಬಾಲಿಶವಾಗಿದ್ದು, ತಾವೇ ಹೇಳಿದಂತೆ ಈಗ ರಚನೆಯಾಗಿರುವ ನಿಮ್ಮ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರದಲ್ಲಿ ಶಾಸಕರಿಗೆ ಕ್ಷೇತ್ರಾಭಿವೃದ್ದಿಗೆ ಒಂದು ನಯಾಪೈಸೆ ಬಿಡುಗಡೆಯಾಗಿಲ್ಲ. ಈ ಬಗ್ಗೆ ನೀವೆ ಒಪ್ಪಿಗೊಂಡಿದ್ದೀರಿ.

ನಿರಂಜನ್‌ಕುಮಾರ್ ಶಾಸಕರಾಗಿದ್ದಾಗ ಕ್ಷೇತ್ರದ ಸರ್ವಾಂಗೀನ ಅಭಿವೃದ್ದಿಗೆ ದುಡಿದ್ದಾರೆ. ಪರಿಶಿಷ್ಟ ಜಾತಿ ಪಂಗಡಗಳಿಗೆ ಎಸ್‌ಇಪಿ, ಟಿಎಸ್‌ಪಿ ಅನುದಾನದಲ್ಲಿ ಬಹಳಷ್ಟು ಬೀದಿಗಳು ಕ್ರಾಂಕೀಟ್ ರಸ್ತೆ, ಚರಂಡಿಗಳು ಆಗಿವೆ. ಅಲ್ಲದೇ ಸಾಮಾನ್ಯ ವರ್ಗದ ಬೀದಿಗಳ ಅಭಿವೃದ್ದಿಗೆ ಅನುದಾನ ನೀಡಿ ಅಭಿವೃದ್ದಿ ಪಡಿಸಿದ್ದೇ ನಮ್ಮ ಶಾಸಕರು ಎಂದ ಅವರು, ಈಗ ಶಾಸಕರಾದ ಬಳಿಕ ನೀವು ಎಷ್ಟು ಅನುದಾನವನ್ನು ಕ್ಷೇತ್ರಕ್ಕೆ ತಂದೀದ್ದಿರಿ ಎಂಬ ಲೆಕ್ಕವನ್ನು ಕ್ಷೇತ್ರದ ಜನರಿಗೆ ನೀಡಿ ಎಂದರು.

ಗುಂಡ್ಲುಪೇಟೆ ತಾಲೂಕಿಗೆ 25 ಕೋಟಿ ರೂ. ಅನುದಾನ ಬಂದಿರುವುದು ನಿಮ್ಮ (ಗಣೇಶ್ ಪ್ರಸಾದ್) ಶ್ರಮದಿಂದಲ್ಲ. ಶಾಸಕ ಯತೀಂದ್ರ ಸಿದ್ದರಾಮಯ್ಯ ಅವರ ಆಪ್ತರು ಅವರ ಲೆಟರ್‌ಹೆಟ್ ಮೂಲಕ ಹಣವನ್ನು ತಂದು ಕಾಮಗಾರಿಗೆ ಮಾಡುತ್ತಿದ್ದಾರೆ. ಇದರಲ್ಲಿ ನಿಮ್ಮ ಪಾತ್ರ ಏನು ಇಲ್ಲ. ನಮ್ಮದು ದಲಿತರ ಪಕ್ಷ ಹಾಗೂ ದಲಿತರ ಉದ್ಧಾರಕ್ಕೂ ಎಂದು ಬೊಬ್ಬೆ ಹೊಡೆಯುವ ನೀವು ತಾಲೂಕಿನ ಯಾವ ದಲಿತರಿಗೆ ಕಾಮಗಾರಿ ಕೊಟ್ಟಿದ್ದೀರ ಎಂಬುದನ್ನು ತಿಳಿಸಿ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊನ್ನೂರು ಮಹದೇಸ್ವಾಮಿ ಜಿಲ್ಲಾ ಮಾಧ್ಯಮ ವಕ್ತಾರ ಕಾಡಳ್ಳಿ ಕುಮಾರ್, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮೂಡಳ್ಳಿ ಮೂರ್ತಿ, ಸಹ ವಕ್ತಾರ ರಾಮಸಮುದ್ರ ಶಿವಣ್ಣ ಹಾಜರಿದ್ದರು.

ದೆಹಲಿ ರೈತರ ಉಪವಾಸ ಸತ್ಯಾಗ್ರಹ ಬೆಂಬಲಿಸಿ ಚಾಮರಾಜನಗರದಲ್ಲಿ ಮೊಂಬತ್ತಿ ಮೆರವಣಿಗೆ



ರೈತ ಮುಖಂಡ ಜಗಜಿತ್ ಸಿಂಗ್ ದಲ್ಲೆವಾಲ ಅವರು ನಡೆಸುತ್ತಿರುವ ಉಪವಾಸ ಸತ್ಯಾಗ್ರಹ ಬೆಂಬಲಿಸಿ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರ ಸಂಘದ ಜಿಲ್ಲಾ ಘಟಕದ ವತಿಯಿಂದ ನಗರದಲ್ಲಿ ಮೊಂಬತ್ತಿ ಮೆರವಣಿಗೆ ನಡೆಸಿದರು.

ಚಾಮರಾಜನಗರ, ಡಿ.28– ರೈತರ ಹಕ್ಕುಗಳಿಗಾಗಿ ದೆಹಲಿ ಗಡಿಯಲ್ಲಿ 30 ದಿನಗಳಿಂದ ರೈತ ಮುಖಂಡರಾದ ಜಗಜಿತ್ ಸಿಂಗ್ ದಲ್ಲೆವಾಲ ಅವರು ನಡೆಸುತ್ತಿರುವ ಉಪವಾಸ ಸತ್ಯಾಗ್ರಹ ಬೆಂಬಲಿಸಿ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರ ಸಂಘದ ಜಿಲ್ಲಾ ಘಟಕದ ವತಿಯಿಂದ ನಗರದಲ್ಲಿ ಮೊಂಬತ್ತಿ ಮೆರವಣಿಗೆ ನಡೆಸಲಾಯಿತು.

ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರ ಸಂಘ ಚಾಮರಾಜನಗರ ಜಿಲ್ಲಾ ಕಾರ್ಯಾಧ್ಯಕ್ಷ ಉಡಿಗಾಲ ರೇವಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಕಳ್ಳಿ ಮಹದೇವಸ್ವಾಮಿ ಅವರ ನೇತೃತ್ವದಲ್ಲಿ ನಗರದ ಚಾಮರಾಜೇಶ್ವರ ಉದ್ಯಾನವನದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು, ಮೊಂಬತ್ತಿ ಹಿಡಿದು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿ ತಡೆದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಕಳ್ಳಿ ಮಹದೇವಸ್ವಾಮಿ ಮಾತನಾಡಿ, ರೈತರ ಹಕ್ಕುಗಳಿಗಾಗಿ ದೆಹಲಿಯಲ್ಲಿ ರೈತ ಮುಖಂಡರಾದ ಜಗಜಿತ್ ಸಿಂಗ್ ದಲ್ಲೆವಾಲ ಅವರು ನಡೆಸುತ್ತಿರುವ ಉಪವಾಸ ಸತ್ಯಾಗ್ರಹದ ಬಗ್ಗೆ ಕೇಂದ್ರ ಸರ್ಕಾರ ನಿರ್ಲಕ್ಷ್ಯ ವಹಿಸಿದೆ. ಅವರಿಗೆ ತೊಂದರೆ ಉಂಟಾದರೆ ಕೇಂದ್ರ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕೇಂದ್ರ ಸರ್ಕಾರ ರೈತರು ಬೆಳೆದ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ ಘೋಷಿಸಬೇಕು. ರೈತರ ಸಂಪೂರ್ಣ ಸಾಲ ಮನ್ನಾ, 60 ವರ್ಷ ತುಂಬಿದ ರೈತರಿಗೆ ಪಿಂಚಣಿ ಯೋಜನೆಯನ್ನು ತತ್‌ಕ್ಷಣವೇ ಜಾರಿಗೊಳಿಸಬೇಕು ರೈತರ ಬೇಡಿಕೆಗಳನ್ನು ಈಡೇರಿಸಬೇಕು ಇಲ್ಲದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ತಿಳಿಸಿದರು.


ಮೆರವಣಿಗೆಯಲ್ಲಿ ಜಿಲ್ಲಾ ಉಪಾಧ್ಯಕ್ಷ ಪಟೇಲ್ ಶಿವಮೂರ್ತಿ, ತಾಲೂಕು ಅಧ್ಯಕ್ಷ ಸತೀಶ್, ಕಾರ್ಯದರ್ಶಿ ಉಡಿಗಾಲ ಸುಂದರಪ್ಪ, ಉಪಾಧ್ಯಕ್ಷ ಶಿವಸ್ವಾಮಿ, ಎಚ್.ಮೂಕಳ್ಳಿ ಎಂ.ಬಿ.ರಾಜು, ಗೌಡಿಕೆ ಶಿವಕುಮಾರಸ್ವಾಮಿ, ಪಿ.ಕುಮಾರ್, ಯರಿಯೂರು ಮಹೇಶ್, ಶಿವಕುಮಾರ್, ಉಡಿಗಾಲ ನಟರಾಜು, ವೀರನಪುರ ನವೀನ್, ಗುರುಸ್ವಾಮಿ, ರಘು, ಜಗದೀಶ್, ಗುರುಪ್ರಸಾದ್, ನಾಗೇಂದ್ರ, ಗುರುಸಿದ್ದಪ್ಪ ಇತರರು ಭಾಗವಹಿಸಿದ್ದರು.

ವಾರದ ಮಿತ್ರ
ಸಾಪ್ತಾಹಿಕ ಪುರವಣೆ

ಮೈಸೂರು ಮಿತ್ರ
ಭಾನುವಾರ 29-12-2024

ವಿಶ್ವಮಾನವ ಕುವೆಂಪು

■ ಬನ್ನೂರು ಕೆ.ರಾಜು
ಸಾಹಿತಿ-ಪತ್ರಕರ್ತ.



ಇಂದು, ವಿಶ್ವಮಾನವ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನ. ತನ್ನಿಮಿತ್ತ ಈ ಲೇಖನ.

"ಯುಗದ ಕವಿಗೆ, ಜಗದ ಕವಿಗೆ
ಶ್ರೀರಾಮಾಯಣ ದರ್ಶನದಿಂದಲೇ
ಕೈ ಮುಗಿದ ಕವಿಗೆ–
ಮಣಿಯದವರು ಯಾರು?
ರಾಮಕೃಷ್ಣ ವಚನೋದಿತ ಪ್ರತಿಭೆ
ತೆರೆದ ಕವನ ತತಿಗೆ
ತಣಿಯದವರು ಆರು?
ಮಲೆನಾಡಿನ ಸೌಂದರ್ಯಕೆ
ಕುಣಿದಾಡಿದ ಕವಿಯ ಜತೆಗೆ
ಕುಣಿಯದವರು ಆರು?"

–ವರಕವಿ ದ.ರಾ.ಬೇಂದ್ರೆ

ಕುಪ್ಪಳ್ಳಿ, ಮಲೆನಾಡಿನ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಬೆಕ್ಕನೂರು ಗ್ರಾಮಕ್ಕೆ ಸೇರಿದ ಚಿಕ್ಕ ಊರು. ಊರೆಂದರೆ ಅದು ಬರೀ ಊರಲ್ಲ. ಊರಾದ ಕಾಡು. ಕಾಡೆಲ್ಲಾ ಊರು. ಸದಾ ಕಾಲ ನೀರ ಸಿರಿ ಬಂದಂತೆ ಧೋ ಎಂದು ಸುರಿಯುವ ಮಳೆ. ಒಂದು ರೀತಿ ಆಕಾಶ ತೂತು ಬಿದ್ದಿದೆ ಏನೋ ಎಂಬಂತಹ ಭಾವ. ಸುಯ್ಯನೆ ತೀಡಿ ಬರುವ ಬಿರುಗಾಳಿ. ಎದೆ ಝಲ್ಲೆನಿಸುವ ಸಿಡಿಲು-ಗುಡುಗು, ಮಿಂಚುಗಳ ರುದ್ರನರ್ತನ. ಇಂತಹ ಊರು ಕಾಡಿನ, ಅದೂ ಹೆಗ್ಗಾಡಿನ ಪೂರ್ವೋತ್ತರ ದಕ್ಷಿಣದಲ್ಲಿ ಭೀಮಾಕಾರದ ಬೃಹತ್ ಪರ್ವತ ಶ್ರೇಣಿಯ ಅಂಕದಲ್ಲಿ ಪುಟ್ಟ ಕೋಟೆಯಂತಹ ಒಂಟಿ ಮನೆ. ಅದು ಬರೀ ಮನೆಯಲ್ಲ. ಅದೊಂದು ಹೆಮ್ಮನೆ, ಪೂರ್ವಾಭಿಮುಖಿಯಾದ ಆ ಉಪ್ಪರಿಗೆ ಮನೆಗೇ 'ಕುಪ್ಪಳ್ಳಿ' ಎಂಬ ಹೆಸರು! ಇಂತಹ ನಿಸರ್ಗದ ಐಸಿರಿಯೊಳಗಿನ ಸಗ್ಗದಂತಹ ದೊಡ್ಮನೆಯ ಹಿರಿಯ ಯಜಮಾನ ವೆಂಕಟಪ್ಪಗೌಡ. ಇವರ ಮಡದಿ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಹಿರಿಕೊಡಿಗೆ ಗ್ರಾಮದ ಸೀತಮ್ಮ. ಈ ದಂಪತಿಗೆ 1904 ಡಿ.29ರಂದು ಜನಿಸಿದವರೇ ನಮ್ಮ ಕುಪ್ಪಳ್ಳಿಯ ವೆಂಕಟಪ್ಪಗೌಡ ಪುಟ್ಟಪ್ಪ (ಕುವೆಂಪು). ಮೊದಲಿಗೆ 'ಜ್ಞಾನಪೀಠ ಪ್ರಶಸ್ತಿ'ಯನ್ನು ತಂದುಕೊಟ್ಟ ಕನ್ನಡ ಸಾರಸ್ವತ ಲೋಕದ ಮೇರು ಸಾಹಿತಿ.

ಪ್ರಾಥಮಿಕ ಶಿಕ್ಷಣವನ್ನು ತೀರ್ಥಹಳ್ಳಿಯಲ್ಲಿ ಮುಗಿಸಿ ಪ್ರೌಢ ಶಿಕ್ಷಣಕ್ಕೆ ಮೈಸೂರಿಗೆ ಬಂದ ಕುವೆಂಪು ಅಲ್ಲಿಂದ ತಮ್ಮ ಸಂಪೂರ್ಣ ವಿದ್ಯಾಭ್ಯಾಸವನ್ನು ಮೈಸೂರಿನಲ್ಲೇ ಪೂರೈಸಿದರು. ಟಿ.ಎಸ್.ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ, ಬಿ.ಎಂ.ಶ್ರೀ. ಅವರಂಥ ಗುರುಗಳನ್ನು ಪಡೆದಿದ್ದ ಇವರು ಮೈಸೂರಿನ ಮಹಾರಾಜ ಕಾಲೇಜಿನಿಂದ 1927ರಲ್ಲಿ ಬಿ.ಎ. ಪದವಿಯನ್ನೂ, 1929ರಲ್ಲಿ ಕನ್ನಡ ಎಂಎ. ಪದವಿಯನ್ನೂ ಪಡೆದು ಆ ವರ್ಷದಿಂದಲೇ ಪ್ರತಿಷ್ಠಿತ ಮೈಸೂರು ಮಹಾರಾಜ ಕಾಲೇಜಿನ ಕನ್ನಡ ಅಧ್ಯಾಪಕರಾಗಿ ತಮ್ಮ ವೃತ್ತಿ ಜೀವನ ಆರಂಭಿಸಿದರು. ನಂತರ ಅದೇ ಕಾಲೇಜಿನಲ್ಲಿ ಉಪಪ್ರಾಧ್ಯಾಪಕ ಹಾಗೂ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ 1955ರಲ್ಲಿ ಪ್ರಿನ್ಸಿಪಾಲ್ ಆಗಿ, 1956ರಿಂದ 1960ರ ವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ನಿವೃತ್ತರಾದರು. ಕುಲಪತಿಯಾಗಿ ಅವರು ಸಾಧನೆಗೈದು ಕಂಡ ಕನಸನ್ನು ಸಾಕ್ಷಾತ್ಕಾರಗೊಳಿಸಿಕೊಂಡಿದ್ದಕ್ಕೆ ಸಾಕ್ಷಿ ಮೈಸೂರಿನ 'ಮಾನಸ' ಗಂಗೋತ್ರಿಯೇ ಆಗಿದೆ!

ಹೊಸಗನ್ನಡ ಸಾಹಿತ್ಯದ ದಿಗ್ಗಜರಲ್ಲೊಬ್ಬರಾದ ಕುವೆಂಪು ಅವರ ಹುಟ್ಟು ಹೆಸರು ಕೆ.ವಿ. ಪುಟ್ಟಪ್ಪ. ಬರೆಯುತ್ತಾ, ಬೆಳೆಯುತ್ತಾ 'ಕುವೆಂಪು' ಕಾವ್ಯನಾಮದಿಂದ ಪ್ರಸಿದ್ಧಿಯ ಶಿಖರವೇರಿದರು. ಇವರು ತಮ್ಮ ಬರವಣಿಗೆಯ ಆರಂಭದ ದಿನಗಳಲ್ಲಿ 'ಕಿಶೋರ ಚಂದ್ರ' ಎಂಬ ಹೆಸರಿನಿಂದಲೂ ಸಾಹಿತ್ಯಕೃಷಿಯನ್ನು ಮಾಡಿದ್ದರು. ಜೈಮಿನಿ ಭಾರತ, ತೊರವೆ ರಾಮಾಯಣಗಳ ವಾಚನ ಮತ್ತು ಅಕ್ಷರಾಭ್ಯಾಸದ ಮೂಲಕ ಬಾಲ್ಯದಲ್ಲೇ ಸಾಹಿತ್ಯ ಸಂಸ್ಕಾರ ಪಡೆದಿದ್ದ ಕುವೆಂಪು ಅವರು ತೀರ್ಥಹಳ್ಳಿ ಮತ್ತು ಮೈಸೂರಿನಲ್ಲಿ ಓದುತ್ತಿರುವಾಗಲೇ ಓದಿನ ಜೊತೆ ಜೊತೆಗೆ ಶೆಲ್ಲಿ, ವರ್ಡ್ಸ್‌ವರ್ಥ್, ಕೀಟ್ಸ್ ಮುಂತಾದ ಆಂಗ್ಲಕವಿಗಳನ್ನು ಓದಿಕೊಂಡಿದ್ದರು. ಪರಿಣಾಮ ಇವರೆಲ್ಲರ ಪ್ರಭಾವದಿಂದಾಗಿ ಇಂಗ್ಲೀಷ್ ಸಾಹಿತ್ಯದತ್ತ ಹೆಜ್ಜೆಯಿರಿಸಿದ ಇವರು 1922ರಲ್ಲಿ ತಮ್ಮ 18ನೇ ವಯಸ್ಸಿಗೇ 'ಬಿಗಿನರ್ಸ್ ಮ್ಯೂಸ್' ಇಂಗ್ಲೀಷ್ ಕವನ ಸಂಕಲನ ಪ್ರಕಟಿಸಿದ್ದರು. ಇದನ್ನು ಓದಿದ ಐರಿಷ್ ಕವಿ ಜೇಮ್ಸ್ ಕಸಿನ್ಸ್, 'ಹುಟ್ಟಿನೊಡನೆ ಬಂದ ಭಾಷೆಯಲ್ಲಿ ಮಾತ್ರ ಸೃಜನಶೀಲ ಸಾಹಿತ್ಯ ಉತ್ತಮವಾಗಿ ಸೃಷ್ಟಿಯಾಗಬಲ್ಲದು' ಎಂದು, ಕನ್ನಡದಲ್ಲೇ ಬರೆಯುವಂತೆ ಕುವೆಂಪು ಅವರಿಗೆ ಸಲಹೆ ನೀಡಿದ ಪರಿಣಾಮವಾಗಿ ಇವರು ಕನ್ನಡ ಸಾಹಿತ್ಯ ರಚನೆಯತ್ತ ಸಾಗಿದರು. ಹಾಗಾಗಿ ಕುವೆಂಪು ಅವರ ಕನ್ನಡ ಸಾಹಿತ್ಯದ ಕೀರ್ತಿಯ ಕ್ರೆಡಿಟ್ ಈ ಐರಿಷ್ ಕವಿಗೇ ಸಲ್ಲಬೇಕು.

ಕುವೆಂಪು ಅವರು ಮಕ್ಕಳಿಗಾಗಿ ಬರೆದ ಲಘು ಕಾಲ್ಪನಿಕ ಕಾವ್ಯ 'ಅಮಲನ ಕಥೆ' ಎಂಬ ಕೃತಿಯನ್ನು 1924 ರಲ್ಲಿ ಪ್ರಕಟಿಸಿದರು. ಇದು ಕುವೆಂಪು ಅವರ ಪ್ರಪ್ರಥಮ ಕನ್ನಡ ಪುಸ್ತಕ. ಅಲ್ಲಿಂದೀಚೆಗೆ 'ದೀಕ್ಷೆಯ ತೊಡು ಇಂದೇ; ಕಂಕಣ ಕಟ್ಟಿಂದೇ; ಕನ್ನಡ ನಾಡೊಂದೇ....' ಎನ್ನುತ್ತಲೇ ಎಣ್ಣೆಯಿಲ್ಲದ ಕನ್ನಡದ ಅಭಿಮಾನವನ್ನು ಎದೆಯಲ್ಲಿ ತುಂಬಿಕೊಂಡು ತಮ್ಮ ಲೇಖನಿಯ ಮೂಲಕ ಕನ್ನಡ ಕೃತಿಗಳ ಮಾಲೆಯನ್ನೇ ಕಟ್ಟತೊಡಗಿದರು. ಇಲ್ಲಿ ಪ್ರಕೃತಿಯ ಮಹತ್ತೆಲ್ಲವನ್ನೂ ತೆರೆದಿಡುವ ಕೊಳಲು, ಪಕ್ಷಿಕಾಶಿ, ನವಿಲು, ಕದರಡಕೆ, ಕಲಾಸುಂದರಿಯಂಥ ಕವನ ಸಂಕಲನಗಳಿವೆ. ಪ್ರೇಮ ಕಾಶ್ಮೀರ, ಚಂದ್ರಮಂಚಕೆ ಬಾ ಚಕೋರಿ, ಷೋಡಶಿ, ಜೇನಾಗುವ, ಅನುತ್ತರಾದಂತಹ ಹದಿಹರೆಯದವರೆದೆ ಅರಳಿಸುವ ಮಹದದ್ಭುತ ಪ್ರೇಮಗೀತಾ ಗುಚ್ಛಗಳಿವೆ. ಮೇಘಪುರ, ಮರಿವಿಜ್ಞಾನಿ, ನನ್ನ ಮನೆ ತರಹದ ಅರಿವಿನ ಬೆಳಕಿನ ಶಿಶುಗೀತಾ ಸಂಗ್ರಹಗಳಿವೆ.

ಪಾಂಚಜನ್ಯ, ಕ್ರಾಂತಿ ಕಹಳೆ, ಕೋಗಿಲೆ ಮತ್ತು ಸೋವಿಯತ್ ರಷ್ಯಾ ರೀತಿಯ ನಾಡಿಗೆ ಕ್ರಾಂತಿ ದೀವಿಗೆ ಹಚ್ಚುವ ಕ್ರಾಂತಿ ಗೀತೆಗಳಿವೆ. ಚಿತ್ರಾಂಗದಾ, ಸಮುದ್ರ ಲಂಘನಾ, ಮಹಾದರ್ಶನ ಮತ್ತು ಪ್ರಾಯಶ್ಚಿತ್ತದಂಥ ಅಪೂರ್ವವಾದ ಸರಳ ರಗಳೆಯ ಖಂಡ ಕಾವ್ಯಗಳಿವೆ. ಬೊಮ್ಮನಹಳ್ಳಿಯ ಕಿಂದರಿಜೋಗಿ, ಶ್ರೀಸ್ವಾತಂತ್ರ್ಯೋದಯದಂತಹ ಮಹಾ ಪ್ರಗಾಥಗಳು ಹಾಗೂ ಕಿಂಕಿಣಿಯಂತಹ ಅತ್ಯಪೂರ್ವ ಧ್ವನಿಯುಳ್ಳ ಕಾವ್ಯ ಶಕ್ತಿಯ ವಚನಗಳಿವೆ.

ಹಾಗೆಯೇ ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಅಂತಹ ಮಹಾಕಾದಂಬರಿಗಳೂ ಇವೆ. ಶ್ರೀ ರಾಮಾಯಣದರ್ಶನಂನಂಥ ಮಹಾ ಕಾವ್ಯವೂ ಇದೆ. ಮಹಾ ಶಿವರಾತ್ರಿ, ಯಮನ ಸೋಲು, ಸ್ಮಶಾನ ಕುರುಕ್ಷೇತ್ರಂ, ಶೂದ್ರ ತಪಸ್ವಿಯಂತಹ ಉತ್ತಮೋತ್ತಮ ನಾಟಕಗಳಿವೆ. ಮೋಡಣ್ಣನ ತಮ್ಮ, ನನ್ನ ಗೋಪಾಲದಂತಹ ಚಿಣ್ಣರ ಸೆಳೆವ ಮಕ್ಕಳ ನಾಟಕಗಳಿವೆ. ಸನ್ಯಾಸಿ ಮತ್ತು ಇತರ ಕಥೆಗಳು, ನನ್ನ ದೇವರು ಮತ್ತು ಇತರ ಕಥೆಗಳು, ಕಥೆಗಳೊಡನೆ ಆರಂಭದಂತಹ ಶಕ್ತಿಪೂರ್ಣ ಕಥಾ ಸಂಕಲನಗಳಿವೆ. ಮಲೆನಾಡಿನ ಚಿತ್ರಗಳು ರೀತಿಯ ಸಶಕ್ತ ಗದ್ಯ ಚಿತ್ರಗಳ ಸಂಕಲನಗಳಿವೆ. ಕಾವ್ಯ ವಿಹಾರ, ವಿಭೂತಿ ಪೂಜೆ, ತಪೋನಂದನ, ದ್ರೌಪದಿಯ ಶ್ರೀಮುಡಿಯಂತಹ ಸಾಹಿತ್ಯ ವಿಮರ್ಶೆ ಮತ್ತು ಕಾವ್ಯ ಮೀಮಾಂಸೆಗಳಿವೆ. ವಿಚಾರಕ್ರಾಂತಿಗೆ ಆಹ್ವಾನ, ಮನುಜ ಮತ ವಿಶ್ವಪಥ, ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿಯಂತಹ ಸಾರಸ್ವತ ಲೋಕದಲ್ಲಿ ವೈಚಾರಿಕ ಬೆಳಕು ಚೆಲ್ಲುವ ಭಾಷಣಗಳ ಸಂಗ್ರಹಗಳಿವೆ. ಸ್ವಾಮಿ ವಿವೇಕಾನಂದ, ಶ್ರೀ ರಾಮಕೃಷ್ಣ ಪರಮಹಂಸರಂತಹ ಮಹನೀಯರ ಜೀವನ ಚರಿತ್ರೆಗಳಿವೆ. ಆತ್ಮಕಥೆ ಪ್ರಕಾರದಲ್ಲೇ ಅದ್ಭುತವೆನಿಸುವ ನೆನಪಿನ ದೋಣಿಯಂತಹ ಆತ್ಮಕಥೆಯೂ ಇದೆ. ಜನಪ್ರಿಯ ವಾಲ್ಮೀಕಿ ರಾಮಾಯಣ, ಗುರುವಿನೊಡನೆ ದೇವರಡಿಗೆ, ವಿವೇಕ ವಾಣಿ, ವೇದಾಂತದಂತಹ ಶ್ರೇಷ್ಠ ಅನುವಾದಿತ ಕೃತಿಗಳೂ ಇವೆ. ಕರ್ನಾಟಕ ಭಾರತ ಕಥಾ ಮಂಜರಿಯಂಥ ಅಗ್ರಮಾನ್ಯ ಸಂಪಾದಿತ ಗ್ರಂಥವೂ ಉಂಟು.

ಹೀಗೆ ಅವರಿಂದ ಸೃಷ್ಟಿಯಾದ ಕನ್ನಡ ಸಾಹಿತ್ಯ ಕೃತಿ ಮಾಲೆಯಲ್ಲಿ ಕಾವ್ಯ, ಸಣ್ಣಕಥೆ, ಕಾದಂಬರಿ, ನಾಟಕ, ಜೀವನ ಚರಿತ್ರೆ, ಪ್ರಬಂಧ, ಖಂಡಕಾವ್ಯ, ಹರಟೆ, ಸಂಶೋಧನೆ, ವಿಮರ್ಶೆ, ನೀಳ್ಗವಿತೆ, ಹನಿಗವಿತೆ ಸೇರಿದಂತೆ ಮಕ್ಕಳ ಸಾಹಿತ್ಯದಿಂದ ಹಿಡಿದು ಮಹಾಕಾವ್ಯದವರೆಗೂ ಎಲ್ಲಾ ಬಗೆಯ ಸಾಹಿತ್ಯ ಪುಷ್ಪಗಳುಂಟು. ಸಂಖ್ಯೆಯ ದೃಷ್ಟಿಯಿಂದ ಕುವೆಂಪು ಅವರ ಕೃತಿಗಳು ಎಪ್ಪತ್ತೈದನ್ನೂ ದಾಟಿದಿದ್ದರೂ ಕೂಡ ಸತ್ವದ ದೃಷ್ಟಿಯಲ್ಲಿ ಇವರಿಂದ ರಚಿತವಾಗಿರುವ ಒಂದೊಂದು ಕೃತಿ ರತ್ನಗಳೂ ಸಾಹಿತ್ಯದ ಮಹತ್ತುಗಳಾಗಿವೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನವನ್ನು ಮತ್ತು ಭಾರತೀಯ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಿರುವ ಇವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯವೊಂದೇ ಸಾಕು ಕೋಟಿ ಕೃತಿಗಳನ್ನು ಮೀರಿಸೀತು! ಅದಕ್ಕೇ ವರಕವಿ ಬೇಂದ್ರೆಯವರು ಕುವೆಂಪು ಅವರನ್ನು 'ಯುಗದ ಕವಿ ಜಗದ ಕವಿ' ಎಂದು ಎದೆತುಂಬಿ ಹಾಡಿ ಹೊಗಳಿರುವುದು.

ಕುವೆಂಪು, ತಮ್ಮ ಮಹತ್ಕೃತಿ "ಶ್ರೀರಾಮಾಯಣ ದರ್ಶನಂ" ಮಹಾಕಾವ್ಯದ ಮೂಲಕ ರಾಷ್ಟ್ರದ ಪ್ರತಿಷ್ಠಿತ ಪ್ರಶಸ್ತಿಗಳಾದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಜ್ಞಾನಪೀಠ ಪ್ರಶಸ್ತಿ ಸೇರಿದಂತೆ ಹಲವು ಹತ್ತು ಪ್ರಶಸ್ತಿಗಳನ್ನು ಮೊಟ್ಟ ಮೊದಲಿಗೆ ಕನ್ನಡಕ್ಕೆ ತಂದುಕೊಟ್ಟ ಕೀರ್ತಿಯೊಡನೆ ಕರ್ನಾಟಕ ಸರ್ಕಾರದ ಪ್ರಮುಖ ನಾಗರಿಕ ಪ್ರಶಸ್ತಿಗಳಾದ ಕರ್ನಾಟಕ ರತ್ನ ಪ್ರಶಸ್ತಿ ಮತ್ತು ಪಂಪ ಪ್ರಶಸ್ತಿ ಪಡೆದ ಮೊದಲಿಗರೆನಿಸಿದ್ದಾರೆ. ಹಾಗೆಯೇ ಕೇಂದ್ರ ಸರ್ಕಾರದಿಂದ ಪದ್ಮಭೂಷಣ ಪಡೆದ ಕನ್ನಡ ಭಾಷೆಯ ಮೊದಲ ಕವಿಯೂ ಆಗಿದ್ದಾರೆ.


ಸಾವಿರ ವರ್ಷಗಳ ಹಿಂದೆ ಆದಿಕವಿ ಪಂಪ ನುಡಿದ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬುದನ್ನು ತಮ್ಮ ಬದುಕಿನ ಧ್ಯೇಯವಾಕ್ಯವನ್ನಾಗಿಸಿಕೊಂಡು ಅದರಂತೆಯೇ ಬರೆದು ಬದುಕಿದವರು. "ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ; ಬಡತನವ ಬುಡಮಟ್ಟ ಕೀಳಬನ್ನಿ; ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ; ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ" ಎಂದವರು. ಅದರಲ್ಲೂ ಕುವೆಂಪು ಅವರು ತಮ್ಮ ಜೀವನ ಸಂಧ್ಯಾಕಾಲದಲ್ಲಿ ವಿಶ್ವಮಾನವತ್ವಕ್ಕೆ ಮಿಡಿದ ಬಗೆ ಇಡೀ ಮಾನವ ಕುಲಕ್ಕೆ ಮಾದರಿ. ತಮ್ಮ ಬದುಕಿನ ಕಟ್ಟಕಡೆಯ ಸಂದೇಶ ವಿಶ್ವಮಾನವ ಸಂದೇಶ ಎನ್ನುತ್ತಲೇ 1994ರ ನವೆಂಬರ್ 11 ರಂದು ನಿಸರ್ಗಲೀನರಾದ ಕುವೆಂಪು ಮಹಾ ಮಾನವತಾವಾದಿಯಾಗಿ ಬದುಕಿದವರು.

* * *

ಮಕ್ಕಳ ಚಿತ್ರಕಥೆ

'ಒಂದು ಮಾಂಸದ ತುಂಡು'

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199



ಮರದ ಮೇಲೆ ಕುಳಿತಿದ್ದ ಕಾಗೆಯೊಂದಕ್ಕೆ ಕಸದ ತೊಟ್ಟಿಯ ಬಳಿ ಬಿದ್ದಿದ್ದ ಮಾಂಸದ ಚೂರೊಂದು ಕಾಣಿಸಿತು.



ಸಂತೋಷದಿಂದ ಕಾಗೆಯು ಭರ್ರೆಂದು ಹಾರಿ ಬಂದು ಮಾಂಸದ ಚೂರನ್ನು ಕಚ್ಚಿಕೊಂಡು ಮೇಲೇರಿ ಆಕಾಶದತ್ತ ಹೊರಟಿತ್ತು.



ಕೂಡಲೇ ಉಳಿದ ಕಾಗೆಗಳು, ಹದ್ದುಗಳೂ ಈ ಕಾಗೆಯನ್ನು ಹಿಂಬಾಲಿಸುತ್ತಾ ಹಾರಿಬಂದು ಓಡಿಸಲು ಪ್ರಾರಂಭಿಸಿದವು.



ಮಾಂಸದ ತುಂಡನ್ನು ಕಾಪಾಡಿಕೊಳ್ಳಲು ಕಾಗೆ ಇನ್ನೂ ಮೇಲೆ ಹಾರಿತು. ಉಳಿದ ಕಾಗೆಗಳು, ಹದ್ದುಗಳೂ ಶ್ರಮ ಲೆಕ್ಕಿಸದೇ ಹಿಂದೆ ಹಿಂದೆ ಹಾರಿ ಹೋದವು.




ಒಂದು ಘಟ್ಟದಲ್ಲಿ ಕಾಗೆ ಮಾಂಸದ ತುಂಡನ್ನು ಕೆಳಗೆ ಬೀಳಿಸಿತು. ಇಷ್ಟುಹೊತ್ತು ಕಾಗೆಯನ್ನು ಅಟ್ಟಿಸಿಕೊಂಡು ಬಂದ ಕಾಗೆಗಳು, ಹದ್ದುಗಳು ಕೆಳಗೆ ಬಿದ್ದ ಮಾಂಸದ ಚೂರಿನತ್ತ ಹಾರಿದವು.



ಈ ಕಾಗೆಗೆ ಉಳಿದೆಲ್ಲಾ ಪಕ್ಷಿಗಳಿಂದ ಬಿಡುಗಡೆ ಸಿಕ್ಕಿತು. ಆಗಲೇ ಕಾಗೆಗೊಂದು ವಿಷಯ ತಿಳಿಯಿತು. ನಾನು ಮಾಂಸದ ತುಂಡನ್ನು ಕಳೆದುಕೊಂಡಿದ್ದೇನೊ ನಿಜವೆ. ಆದರೆ ಈಗ ನಾನು ಅನುಭವಿಸುತ್ತಿರುವುದು ಎಂಥದೊಂದು ಹಾಯಾದ ಸ್ವಾತಂತ್ರ್ಯ ಎಂದು.

ನೀತಿ :- ನಮ್ಮೊಳಗಿರುವ ಅಹಂಕಾರ ಕೂಡ ಈ ಮಂಸದ ತುಂಡಿನ ಹಾಗೆ. ಇದನ್ನು ನೀವು ಬಿಟ್ಟುಬಿಟ್ಟರೆ ಸಾಕು, ಬದುಕು ಹಗುರವಾಗಿಬಿಡುತ್ತದೆ. ಟೆನ್ಷನ್ ಇರುವುದಿಲ್ಲ. ಕಾಗೆಗೆ ಗಗನದ ಸೊಬಗು ತಿಳಿದಂತೆ ನಿಮಗೆ ಬದುಕಿನ ಸೊಬಗು ಕಣ್ಣಿಗೆ ಬೀಳುತ್ತದೆ.



ವಾರಭವಿಷ್ಯ

29.12.2024 ರಿಂದ 4.01.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಧನುಸ್ಸು, ಚಂದ್ರ-ವೃಶ್ಚಿಕ, ಧನುಸ್ಸು, ಮಕರ, ಕುಂಭ, ಕುಜ-ಕಟಕ, ಬುಧ-ವೃಶ್ಚಿಕ, ಗುರು, ವೃಷಭ, ಶುಕ್ರ-ಕುಂಭ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಜೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ಕುಟುಂಬ ಸೌಖ್ಯ, ಶ್ರದ್ಧೆಯಿಂದ ಮಾಡುವ ಕೆಲಸದಲ್ಲಿ ಸಫಲತೆ. ಷೇರು ವ್ಯವಹಾರದಲ್ಲಿ ಲಾಭ ಗಳಿಕೆ. ವಿವಾಹಾಕಾಂಕ್ಷಿಗಳಿಗೆ ಸೂಕ್ತ ಜೋಡಿ ದೊರೆಯುವ ಸಾಧ್ಯತೆ. ಪ್ರಭಾವಿ ವ್ಯಕ್ತಿಗಳ ಭೇಟಿಯಿಂದ ಮಹತ್ವದ ಕೆಲಸ ಪೂರ್ಣವಾಗುವುದು. ರೈತಾಪಿ ಜನರಿಗೆ ಉತ್ತಮ ಬೆಳೆ ಹಾಗೂ ಬೆಲೆ ದೊರಕುವುದು. ಸ್ನಾಯು ಸಂಬಂಧಿ ತೊಂದರೆಯನ್ನು ಅನುಭವಿಸುವಿರಿ.

ಶ್ರೀ ವಿನಾಯಕ ಅರ್ಚನೆ. ಶುಭ ಸಂಖ್ಯೆ-5

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ನಿರೀಕ್ಷಿತ ಹಣ ಕೈ ಸೇರಿದರೂ ಖರ್ಚುಗಳು ಅಡತಡೆಯಿಲ್ಲದೆ ನಡೆಯುವುದು. ಅಧಿಕ ತಿರುಗಾಟಗಳಿಂದ ದೇಹಕ್ಕೆ ದಣಿವು, ನಿಮಗೆ ವಿಶ್ರಾಂತಿಯ ಅಗತ್ಯವಿದೆ. ವಾರಮಧ್ಯೆ ಸುಭೋಜನ, ಶಯನ ಸುಖ, ಕಳೆದು ಹೋದ ವಸ್ತು ಮರಳಿ ದೊರೆಯುವ ಸಾಧ್ಯತೆ. ಸಾಫ್ಟ್‌ವೇರ್ ಉದ್ಯೋಗಿಗಳಿಗೆ ಕಂಪನಿ ಬದಲಾವಣೆಯಿಂದ ಆರ್ಥಿಕ ಉನ್ನತಿ. ಅಗ್ನಿ ಅವಘಡಗಳಿಂದ ಎಚ್ಚರವಾಗಿರಿ.

ಶ್ರೀ ದೇವೀ ಉಪಾಸನೆ. ಶುಭ ಸಂಖ್ಯೆ-2

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಈ ವಾರದಲ್ಲಿ ನಿಮ್ಮ ಸ್ವಂತ ಕೆಲಸಗಳನ್ನು ಆಜ್ಞಾಪೂರ್ವಕವಾಗಿ ಪೂರೈಸಿಕೊಳ್ಳುವಿರಿ. ನಿಮ್ಮ ನಿಕಟ ಸಂಬಂಧಿಗಳ ಸಹಕಾರವೂ ದೊರಕುವುದು. ಹೊಸ ವ್ಯಾಪಾರವನ್ನು ಧನುರ್ಮಾಸ ಕಳೆದ ನಂತರ ಪ್ರಾರಂಭಿಸಿ. ಸಾಲದ ಪ್ರಯತ್ನ ಮುಂದುವರೆಯುವುದು. ಸರ್ಕಾರಿ ಅಧಿಕಾರಿಗಳು ಕಾನೂನು ಮೀರದೆ ಕೆಲಸ ನಿರ್ವಹಿಸುವ ಮನೋಧರ್ಮವಿರಲಿ, ಅನ್ಯಥಾ ತೊಂದರೆಯ ಸುಳಿಗೆ ಸಿಲುಕುವರು.

ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ-6

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)

ಈ ವಾರ ನಿಮಗೆ ಶುಭವಾರ. ನಿಮ್ಮ ಗೌರವ, ಪ್ರತಿಷ್ಠೆಗಳು ಹೆಚ್ಚುವುದು. ಐಷಾರಾಮಿ ವಸ್ತುಗಳು ಮನೆಗೆ ಬರುವುದು. ಶ್ರೀಮತಿಯ ಸಹಕಾರದಿಂದ ಕಷ್ಟ ನಿವಾರಣೆ. ಲೆಖ್ಖ ಪರಿಶೋಧಕರಿಗೆ ಹೊಸ ಕಕ್ಷಿದಾರರು ದೊರಕುವರು. ಸರ್ಕಾರಿ ಕಚೇರಿ ಕೆಲಸಗಳು ನೀವಂದುಕೊಂಡಂತೆ ಸಾಗದು. ಆರೋಗ್ಯದಲ್ಲಿ ವ್ಯತ್ಯಯ ಹಾಗೂ ವೈದ್ಯರ ಭೇಟಿ ಅನಿವಾರ್ಯವಾಗಬಹುದು. ಹೊಸ ವರ್ಷಾಚರಣೆ ಸರಹದ್ದು ಮೀರದಿರಲಿ.

ಶ್ರೀ ದುರ್ಗಾದರ್ಶನ. ಶುಭ ಸಂಖ್ಯೆ-8

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಬಯಸಿದ್ದೆಲ್ಲಾ ಸಿಗುವುದಿಲ್ಲ. ಸಿಕ್ಕಿದ್ದನ್ನೇ ಬಳಸಿಕೊಳ್ಳಬೇಕು. ಬಿರುಸು ಮಾತಿನಿಂದ ಸಂಬಂಧಗಳು ಕೆಡಬಹುದು. ಪಿತ್ರಾರ್ಜಿತ ಆಸ್ತಿ ವಿಚಾರಗಳು ಇತ್ಯರ್ಥಗೊಳ್ಳುವಲ್ಲಿ ವಿಳಂಬವಾಗುವುದು. ವಾರದ ಉತ್ತರಾರ್ಧದಲ್ಲಿ ಹೊಸ ಮಿತ್ರರ ಪರಿಚಯ, ಉತ್ತಮ ಭೋಜನ, ಸ್ತ್ರೀ ಸಂಬಂಧಗಳು ದೊರಕುವುದು. ತಾತ್ಕಾಲಿಕ ಒತ್ತಡಗಳಿಂದ ಹೊರ ಬರುವಿರಿ. ದೈವ ಚಿಂತನೆಯಿಂದ ಮನಃಶಾಂತಿ.

ಶ್ರೀ ಶಿವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-1

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ದಂಪತಿಗಳ ವಾದ-ವಿವಾದದಲ್ಲಿ ಸೋತವರು ಗೆದ್ದಂತೆ. ಅನಾದರ ಆದರದಲ್ಲಿ ಕೊನೆಗೊಳ್ಳುವುದು. ಯಾವುದೇ ಕೆಲಸವನ್ನು ಸುದೀರ್ಘವಾಗಿ ಆಲೋಚಿಸಿ ಮಾಡಿ. ತಿಳಿಯದ ವ್ಯವಹಾರಕ್ಕೆ ಬಂಡವಾಳ ಹೂಡಿಕೆಯಿಂದ ನಷ್ಟ ಉಂಟಾಗಬಹುದು. ಫ್ಯಾಬ್ರಿಕೇಶನ್ ಉದ್ಯಮದವರಿಗೆ ಉತ್ತಮ ಕೆಲಸಗಳಿಂದ ಲಾಭ ದ್ವಿಗುಣವಾಗುವುದು. ಉಷ್ಣಜನಿತ ಕಾಯಿಲೆ ಉಂಟಾದೀತು. ಆಹಾರ-ವಿಹಾರಗಳಲ್ಲಿ ಸಂಯಮವಿರಲಿ.

ಶ್ರೀ ಶ್ರೀನಿವಾಸ ದರ್ಶನ. ಶುಭ ಸಂಖ್ಯೆ-4

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದ ಆದಿಗೆ ಘಟನೆಗಳು ನಿಮಗೆ ಅನುಕೂಲಕರವಾಗಿದೆ. ಎನ್‌ಕ್ಯಾಶ್ ಮಾಡಿಕೊಳ್ಳಲು ಹಿಂದೆ ಬೀಳದಿರಿ. ರಫ್ತು ಉದ್ಯಮಿಗಳಿಗೆ ಭರಪೂರ ಲಾಭವಾಗುವುದು. ವಿಶ್ವಾಸ ಪಾತ್ರರಿಂದ ಮಹತ್ವದ ಯೋಜನೆಯ ಸಫಲತೆ. ಮನೆ ಮಂದಿಯೊಂದಿಗೆ ಸೌಹಾರ್ದತೆ ಕೆಡದಂತೆ ನಡೆದುಕೊಂಡರೆ ನಿಮಗೇ ಒಳಿತು. ಅಷ್ಟಮ ಗುರುವಿನ ಕಾರಣ ಕೆಲವೊಮ್ಮೆ ಬುದ್ಧಿ ಶೂನ್ಯತೆ. ಹೊಸ ವರ್ಷ ಆಚರಣೆ ಲಕ್ಷ್ಮಣಗೆರೆ ದಾಟದಿರಲಿ.

ಶ್ರೀ ಚಾಮುಂಡೇಶ್ವರಿ ಅರ್ಚನೆ. ಶುಭ ಸಂಖ್ಯೆ-5

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರ ಹರ್ಷೋಲ್ಲಾಸಗಳನ್ನು ತರಲಿದ್ದಾನೆ. ವೈಯಕ್ತಿಕ ಕೆಲಸಗಳನ್ನು ಲವಲವಿಕೆಯಿಂದ ಪೂರೈಸಿಕೊಳ್ಳುವಿರಿ. ನಿಮ್ಮ ಮನೋಭಿಲಾಷೆ ಈಡೇರಲು ಮಾತೃಶ್ರೀಯವರ ಆಶೀರ್ವಾದ ಪಡೆದುಕೊಳ್ಳಿ. ನೂತನ ವಾಹನ ಖರೀದಿಯಾಗಲಿದೆ. ಬಾಳ ಸಂಗಾತಿ ದೊರೆಯಲು ಗುರುಬಲವಿದೆ. ಪ್ರಯತ್ನಗಳು ಮುಂದುವರೆಯಲಿ.

ಶ್ರೀ ನೃಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ-3

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸಪ್ತಾಹದ ಆದಿಗೆ ಚಂದ್ರ ಬಲ, ತಾರಾಬಲ ಶುಭವಿದೆ. ಹೊಸ ಯೋಜನೆಗಳಿಗೆ ಚಾಲನೆ ನೀಡಲು ಹಾದಿ ಸುಗಮವಾಗಿದೆ. ಅನುಭವಿಗಳ ಮಾರ್ಗದರ್ಶನವೂ ದೊರೆಯುವುದು. ಕಳೆದುಕೊಂಡ ಆರೋಗ್ಯವನ್ನು ಮರಳಿ ಪಡೆಯುವಿರಿ. ಕೃಷಿ ಮಾಡುವುದರಿಂದ ದುರ್ಭಿಕ್ಷವಿರದು. ಕೋರ್ಟು ವಿಚಾರಗಳಲ್ಲಿ ಅನುಕೂಲ ಉಂಟಾದೀತು. ಸ್ಥಿರಾಸ್ತಿ ಲಭ್ಯವಾಗುವ ಅವಕಾಶವಿದೆ.

ಶ್ರೀ ದಕ್ಷಿಣಾಮೂರ್ತಿ ಸ್ತುತಿ. ಶುಭ ಸಂಖ್ಯೆ-9

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಸಾಡೇಸಾತಿ ಶನಿದೇವನ ದೃಷ್ಟಿ ಮುಂದಿನ ರಾಶಿಯ ಮೇಲೆ ಇರುವ ಕಾರಣ ಆರ್ಥಿಕ ಬಿಕ್ಕಟ್ಟುಗಳು ನಿವಾರಣೆ ಆಗುವುದು. ಉದ್ಯೋಗದಲ್ಲಿ ಅನುಕೂಲವೂ ಅಧಿಕಾರಿಗಳಿಂದ ಸಹಕಾರವೂ ದೊರೆಯಲಿದೆ. ಆರೋಗ್ಯದಲ್ಲಿ ಚೇತರಿಕೆಯನ್ನು ಕಾಣುವಿರಿ. ವಾರದ ಕಡೆಗೆ ಕೈ ಹಿಡಿದು ಖರ್ಚು ಮಾಡಿ, ಉಳಿತಾಯವೇ ಗಳಿಕೆ.

ಶ್ರೀ ಆಂಜನೇಯನಿಗೆ ತುಳಸಿ ಸಮರ್ಪಣೆ. ಶುಭ ಸಂಖ್ಯೆ-1

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದ ಆದಿಗೆ ಶುಭ ಚಂದ್ರನ ಪರಿಣಾಮ ಶುಭ ಕಾರ್ಯಕ್ಕೆ ಪ್ರೇರಣೆ. ಮನೆಯಲ್ಲಿ ನವ ಉಲ್ಲಾಸದ ವಾತಾವರಣ. ಅಧಿಕಾರಿಗಳ ಭೇಟಿಯಿಂದ ಕಾರ್ಯ ಸಾಧನೆ. ನಿರೀಕ್ಷಿತ ಹಣ ಕೈ ಸೇರುವುದು. ಮುಖ್ಯ ಕೆಲಸಗಳನ್ನು ಆದ್ಯತೆಯ ಆಧಾರದ ಮೇಲೆ ಪೂರೈಸಿಕೊಳ್ಳಿ. ವಾರದ ಕಡೆಗೆ ಹಿರಿಯರ ಮಾತನ್ನು ಕಡೆಗಣಿಸುವುದರಿಂದ ಕಷ್ಟ-ನಷ್ಟಗಳಿಗೆ ಗುರಿಯಾಗುವಿರಿ. ವಾಹನ ನಿಧಾನವಾಗಿ ಚಲಿಸಿ.

ಶ್ರೀ ವಿಷ್ಣು ನಾಮಜಪ. ಶುಭ ಸಂಖ್ಯೆ-6

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದಾರಂಭಕ್ಕೆ ವಿಶ್ವಾಸಪಾತ್ರರ ಮಿಲನ. ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ಲಭ್ಯವಾಗುವ ಯೋಗವಿದೆ. ಸಾರಿಗೆ ಸಂಸ್ಥೆಗಳಿಗೆ ಹೇರಳ ಧನಲಾಭವಾಗುವುದು. ವರಮಾನ ಹೆಚ್ಚಾದಂತೆ ಖರ್ಚುಗಳೂ ಹೆಚ್ಚುವುದು. ಪೂರ್ವ ದಿಕ್ಕಿನ ಪ್ರಯಾಣದಿಂದ ಅನುಕೂಲವಾಗುವುದು. ಸದ್ವರ್ತನೆಯಿಂದ ಸಮಾಜದಲ್ಲಿ ಗೌರವ ಪ್ರಾಪ್ತಿ. ಹೊಸ ವರ್ಷಾಚರಣೆ ಶಿಷ್ಟಾಚಾರ ಮೀರಿ ನಡೆದರೆ ತೊಂದರೆ ಗ್ಯಾರಂಟಿ.

ಶ್ರೀ ಸಾಯಿಬಾಬಾ ದರ್ಶನ. ಶುಭ ಸಂಖ್ಯೆ-7

ಭವಿಷ್ಯದ ಪ್ರಜೆಗಳ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಪ್ರಮುಖ

ಗುರುವಂದನಾ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್

ಜಯಪುರ, ಡಿ.28– ಭವಿಷ್ಯದ ಪ್ರಜೆಗಳ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಪ್ರಮುಖ ಎಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಹೇಳಿದರು.

ಮೈಸೂರು ತಾಲೂಕು ಜಯಪುರದ ಶ್ರೀರಾಘವೇಂದ್ರ ವಿದ್ಯಾಪೀಠ ಪ್ರೌಢಶಾಲೆಯಲ್ಲಿ ಶನಿವಾರ 1994–95ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳ ಬಳಗದಿಂದ ಆಯೋಜಿಸಿದ್ದ ಗುರುವಂದನಾ ಹಾಗೂ ಸ್ನೇಹ ಭಾವಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಾಲೆಯ ಹಳೇ ವಿದ್ಯಾರ್ಥಿಗಳು 3 ದಶಕಗಳ ನಂತರ ಒಗ್ಗೂಡಿ ತಮಗೆ ಅಕ್ಷರ ಕಲಿಸಿದ ಗುರುಗಳನ್ನು ಗುರುವಂದನಾ ಕಾರ್ಯಕ್ರಮದ ಮೂಲಕ ಗೌರವಿಸಿರುವುದು ಹೃದಯಸ್ಪರ್ಶಿಯಾಗಿದೆ ಎಂದರು.

ಸಿಎಂ ಸಿದ್ದರಾಮಯ್ಯ ಅವರು ಯಾವುದೇ ಸಭೆ ಸಮಾರಂಭಗಳಲ್ಲಿ ತಮ್ಮ ಬಾಲ್ಯದ ಶಿಕ್ಷಕರಾದ ರಾಜಪ್ಪ ಮೇಷ್ಟ್ರು ಬಗ್ಗೆ ಅಪಾರ ಪ್ರೀತಿ ವ್ಯಕ್ತಪಡಿಸುತ್ತಾರೆ. ರಾಷ್ಟ್ರಪತಿ, ಪ್ರಧಾನಿಯಾದವರು ಕೂಡ ಶಿಕ್ಷಕರಿಗೆ ಶಿರಬಾಗಿ ನಮಸ್ಕರಿಸುತ್ತಾರೆ. ಆದರ್ಶ ಶಿಕ್ಷಕರಿಂದ ಮಾತ್ರ ದೇಶದಲ್ಲಿ ಸಂಸ್ಕೃತಿ ಇಂದಿಗೂ ಜೀವಂತವಾಗಿದೆ. ಮಾಜಿ ರಾಷ್ಟ್ರಪತಿ ಡಾ.ಎಸ್.ರಾಧಾಕೃಷ್ಣನ್ ಅವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಮೈಸೂರಿಂದ ತೆರಳುವಾಗ ಅವರ ಮೆಚ್ಚಿನ ವಿದ್ಯಾರ್ಥಿಗಳು ಸಾರೋಟಿನಲ್ಲಿ ಮೆರವಣಿಗೆ ಮಾಡಿಕೊಂಡು ರೈಲ್ವೆ ನಿಲ್ದಾಣಕ್ಕೆ ಅವರನ್ನು ಬಿಟ್ಟು ಬೀಳ್ಕೊಟ್ಟರು. ಶಿಕ್ಷಕರಾದವರಿಗೆ ಇವೆಲ್ಲವೂ ಅವಿಸ್ಮರಣೀಯ ಕ್ಷಣಗಳು ಎಂದರು.

ವಿದ್ಯಾರ್ಥಿಗಳು ಗುರುವಿನ ಮಾರ್ಗದರ್ಶನದಲ್ಲಿ ಮುನ್ನಡೆದರೆ ಯಶಸ್ವಿಯಾಗುತ್ತಾರೆ. ಶಿಕ್ಷಕರನ್ನು ಗೌರವಿಸಿದಾಗ ಮಾತ್ರ ಗುರು ದೇವೋಭವಕ್ಕೆ ಅರ್ಥ ಬರುತ್ತದೆ. ಗುರುಗಳಿಗೆ ಗೌರವ ನೀಡಿ, ಗುರು ಪರಂಪರೆ ಉಳಿಸಬೇಕು. ವಿದ್ಯಾರ್ಥಿಗಳಿಗೆ ಶಿಸ್ತು ಏಕಾಗ್ರತೆ, ವಿಧೇಯತೆ, ಸಂಯಮ, ಬದ್ಧತೆ ಇರಬೇಕು. ರಾಷ್ಟ್ರೀಯತೆ ಮೈಗೂಡಿಸಿಕೊಳ್ಳಬೇಕು. ವಿಷಯ ಜ್ಞಾನ, ತಾಳ್ಮೆ, ಶುದ್ಧ ನಡತೆ, ಆತ್ಮವಿಶ್ವಾಸ, ಕಠಿಣ ಪರಿಶ್ರಮ ಇರಬೇಕು. ಗುರಿ ಉದ್ದೇಶಗಳು ಸ್ಪಷ್ಟವಾಗಿರಬೇಕು. ಮೊಬೈಲ್ ಮತ್ತು ಟಿವಿ ಗೀಳು ಬಿಡಬೇಕು. ಪತ್ರಿಕೆಗಳನ್ನು ಓದಬೇಕು. ಗ್ರಂಥಾಲಯ ಬಳಕೆ ಮೂಲಕ ಜ್ಞಾನ ಸಂಪಾದಿಸಬೇಕು. ಮಹನೀಯರ ಆದರ್ಶಗಳನ್ನು ಅಳವಡಿಸಿಕೊಂಡು ಮಾನವೀಯ ಮೌಲ್ಯ ಹೆಚ್ಚಿಸಿಕೊಂಡು ಸುತ್ತಮುತ್ತಲ ಪರಿಸರದ ಬಗ್ಗೆ ಕಾಳಜಿ ವಹಿಸಬೇಕು. ವಿದ್ಯಾರ್ಥಿಗಳು ದೊಡ್ಡ ಕನಸುಗಳನ್ನು ಕಾಣುವ ಮೂಲಕ ಐಎಎಸ್, ಐಪಿಎಸ್, ಕೆಎಎಸ್ ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು. ಭಾರತದ ಮಕ್ಕಳ ಬುದ್ಧಿಮತ್ತೆ ಪ್ರಸ್ತುತ ಚಾಲ್ತಿಯಲ್ಲಿರುವ 'ಎಐ' ತಂತ್ರಜ್ಞಾನಕ್ಕಿಂತಲೂ ಹೆಚ್ಚಿದೆ ಎಂದರು.


ಜಯಪುರದಲ್ಲಿ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ಶಿಕ್ಷಕರನ್ನು ಸನ್ಮಾನಿಸಲಾಯಿತು.

ನಿವೃತ್ತ ಮುಖ್ಯಶಿಕ್ಷಕ ಹೆಚ್.ಕೆ.ಪ್ರಭಾಕರ್ ಮೂರ್ತಿ ಮಾತನಾಡಿ, 1976ರಲ್ಲಿ ಸ್ಥಾಪನೆಯಾದ ಶಾಲೆ ಬೆಳವಣಿಗೆ ಬಗ್ಗೆ ತಿಳಿಸಿದ ಅವರು ನನ್ನ 32 ವರ್ಷಗಳ ಶಿಕ್ಷಕ ವೃತ್ತಿ ಸೇವೆ ತೃಪ್ತಿ ನೀಡಿದೆ. ನನ್ನ ವಿದ್ಯಾರ್ಥಿಗಳು ಇಂದು ರಾಜ್ಯ ಹಾಗೂ ದೇಶದ ವಿವಿಧೆಡೆ ಐಎಎಸ್, ಕೆಎಎಸ್ ಸೇರಿದಂತೆ ನ್ಯಾಯಾಧೀಶರಾಗಿ, ವೈದ್ಯರಾಗಿ, ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಪ್ರೊಫೆಸರ್‌ಗಳಾಗಿ, ಪ್ರತಿಯೊಂದು ಇಲಾಖೆಯಲ್ಲೂ ನನ್ನ ವಿದ್ಯಾರ್ಥಿಗಳಿದ್ದಾರೆ. ಹಲವರು ರಾಜಕೀಯದಲ್ಲಿ ಉನ್ನತ ಸ್ಥಾನದಲ್ಲಿದ್ದಾರೆ. ಉದ್ಯಮಿಗಳಾಗಿದ್ದಾರೆ. ಇಂತಹ ಸಾವಿರಾರು ವಿದ್ಯಾರ್ಥಿಗಳಿಗೆ ನಾನು ಪಾಠ ಹೇಳಿಕೊಟ್ಟಿದ್ದು, ನನ್ನ ಜೀವನ ಸಾರ್ಥಕತೆ ಎನಿಸಿದೆ. ಮುಂದಿನ ಜನ್ಮವಿದ್ದರೆ ನಾನು ಮತ್ತೆ ಶಿಕ್ಷಕನಾಗಿ ಹುಟ್ಟುವೆ. ಪ್ರೀತಿಯ ವಿದ್ಯಾರ್ಥಿಗಳು ನೀಡಿದ ಗುರುವಂದನೆಗೆ ನಾವು ಆಭಾರಿಯಾಗಿದ್ದೇವೆ. ಎಲ್ಲಾ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲಿ, ಆದರ್ಶ ವ್ಯಕ್ತಿಗಳಾಗಿ ಬಹು ಎತ್ತರಕ್ಕೆ ಬೆಳೆಯಲಿ ಎಂದು ಆಶಿಸಿದರು.

ನಿವೃತ್ತ ವಿಜ್ಞಾನ ಶಿಕ್ಷಕ ಬಿ.ವಿ.ನಂಜುಂಡಸ್ವಾಮಿ ಮಾತನಾಡಿದರು. 1994–95ನೇ ಸಾಲಿನ ವಿದ್ಯಾರ್ಥಿಗಳಾದ ಮೋಹಿದ್ದಿನ್, ದೊರೆಸ್ವಾಮಿ, ಲಕ್ಷ್ಮಿ, ಬಸಪ್ಪ ತಮ್ಮ ಶಾಲಾ ದಿನಗಳ ವ್ಯಾಸಂಗದ ಬಗ್ಗೆ ಮಾತನಾಡಿದರು. ಹೆಚ್.ಎಂ.ಐ ಮಾಲೀಕ ಮೋಹಿದ್ದಿನ್ ಎಸ್‌ಎಸ್‌ಎಲ್‌ಸಿಯಲ್ಲಿ ಅತಿಹೆಚ್ಚು ಅಂಕ ಪಡೆಯುವ ಇಬ್ಬರು ವಿದ್ಯಾರ್ಥಿಗಳಿಗೆ ಪ್ರತಿ ವರ್ಷ 10 ಸಾವಿರ ರೂ. ಬಹುಮಾನ ನೀಡಲಾಗುವುದು ಎಂದು ಘೋಷಿಸಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಸಹ ಶಿಕ್ಷಕರಾದ ಎಸ್.ಎಸ್.ವಾಗಿಷನ್, ಸಿ.ಎನ್.ಬಾಲಕೃಷ್ಣ, ವೈ.ಜೆ.ದೇವರಾಜೇಗೌಡ, ಮಾದಪ್ಪಸ್ವಾಮಿ, ಆರ್.ಜಯಶೇಖರ್, ಪ್ರವೀಣ್ ಕುಮಾರ್, ಎ.ಎನ್ ಸುನಂದಾ, ಸವಿತಾ, ನಿರ್ಮಲ, ನಿವೃತ್ತ ಬೋಧಕೇತರ ಸಿಬ್ಬಂದಿಗಳಾದ ನಂಜಯ್ಯ, ರೇಣುಕಾ, ಶಿವರಾಜು ನಾಯಕ ಹಾಗೂ ರಾಘವೇಂದ್ರ ಶಾಲೆ ಮುಖ್ಯಶಿಕ್ಷಕ ಬಿ.ಸಿದ್ದರಾಮು, ಸಹಶಿಕ್ಷಕರಾದ ಎಂ.ಕೆ ಭಾಗ್ಯ, ಮಹಾಲಕ್ಷ್ಮಿ, ಕೆಎನ್.ಸಿದ್ದೇಗೌಡ, ಹೇಮಂತ್ ಮತ್ತು ಅಡುಗೆ ಸಿಬ್ಬಂದಿಗಳನ್ನು ಹಳೆಯ ವಿದ್ಯಾರ್ಥಿಗಳು ಫಲಪುಷ್ಪ ಮತ್ತು ಸ್ಮರಣಿಕೆ ನೀಡಿ ಸನ್ಮಾನಿಸಿದರು.

ಶಾಲಾ ವಿದ್ಯಾರ್ಥಿಗಳಿಗೆ ಸಿಹಿಖಾದ್ಯದ ಊಟ ಬಡಿಸಿದರು. ಕಾರ್ಯಕ್ರಮದಲ್ಲಿ 60ಕ್ಕೂ ಹೆಚ್ಚು ಹಳೆಯ ವಿದ್ಯಾರ್ಥಿಗಳು ಮತ್ತು ಶಾಲಾ ವಿದ್ಯಾರ್ಥಿಗಳು ಹಾಜರಿದ್ದರು.

ಮೂಗೂರಲ್ಲಿ ಡಾ.ಮನಮೋಹನ್ ಸಿಂಗ್‌ಗೆ ಶ್ರದ್ಧಾಂಜಲಿ



ಮನಮೋಹನ್ ಸಿಂಗ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೂಗೂರು, ಡಿ.28– ಗ್ರಾಮದ ವಾಲ್ಮೀಕಿ ಸಮುದಾಯ ಭವನದಲ್ಲಿ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರಿಗೆ ಎಂ.ಡಿ.ಬಸವರಾಜು ಅಭಿಮಾನಿ ಬಳಗ ಹಾಗೂ ಗ್ರಾಮಸ್ಥರು ಶ್ರದ್ಧಾಂಜಲಿ ಸಲ್ಲಿಸಿದರು.

ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಮಾತನಾಡಿ, ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರು ಬಡತನದಲ್ಲಿ ಹುಟ್ಟಿ ಬೆಳೆದು ಆರ್ಥಿಕ ತಜ್ಞರಾಗಿ ರಾಷ್ಟ್ರವನ್ನು ಕಟ್ಟಿ ಬೆಳೆಸಿದ ಧೀಮಂತ ನಾಯಕ. ದೇಶ ಆರ್ಥಿಕವಾಗಿ ಮುಂದುವರಿಯಲು ಭದ್ರ ಬುನಾದಿ ಹಾಕುವ ಮೂಲಕ ದೇಶವನ್ನು ಉತ್ತಮ ಸ್ಥಾನಕ್ಕೆ ಕೊಂಡೊಯ್ದ ಕೀರ್ತಿ ಸಿಂಗ್ ಅವರಿಗೆ ಸಲ್ಲುತ್ತದೆ. ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ದೇಶವನ್ನು ಪಾರು ಮಾಡಿದ ಅವರು ಪ್ರಧಾನಿಯಾಗಿ ದೇಶದ ಅಭಿವೃದ್ಧಿ ಮತ್ತು ಪ್ರಗತಿಗೆ ಅವರು ನೀಡಿರುವ ಕೊಡುಗೆ ಸದಾ ಸ್ಮರಣೀಯ ಎಂದು ಸ್ಮರಿಸಿದರು.

ಈ ವೇಳೆ ಡೇರಿ ಅಧ್ಯಕ್ಷ ಎಂ.ಎಂ.ಬಸವಣ್ಣ, ದೇವಾನಂದ್, ನಾಗರಾಜು, ಎಂ.ಎಂ.ಜಗದೀಶ್, ಎಂ.ಬಿ.ಸಾಗರ್, ಡೇರಿ ನಾಗೇಂದ್ರ, ಪುಟ್ಟರಾಜು, ಎಂ.ರಾಜು, ಎಂ.ಬಿ.ಕೃಷ್ಣಸ್ವಾಮಿ, ದೀಲಿಪ್ ಕುಮಾರ್, ಪುಟ್ಟರಾಜು, ಕೆಂಚನಾಯ್ಕ, ಶಿವಮೂರ್ತಿ, ಮಹದೇವಸ್ವಾಮಿ, ರಂಗಸ್ವಾಮಿ, ಮರಿಸ್ವಾಮಿ ಇತರರಿದ್ದರು.

ಪಿ.ಪಟ್ಟಣದಲ್ಲಿ ಅದ್ದೂರಿ ಹನುಮ ಜಯಂತಿ


ಪಿರಿಯಾಪಟ್ಟಣದಲ್ಲಿ ಹನುಮ ಜಯಂತಿ ನಡೆಯಿತು.

ಪಿರಿಯಾಪಟ್ಟಣ, ಡಿ.28– ಪಟ್ಟಣದ ಕೋಟೆ ಆಂಜನೇಯಸ್ವಾಮಿ ಸಮಿತಿ ನೇತೃತ್ವದಲ್ಲಿ ಪಟ್ಟಣದಲ್ಲಿ 7ನೇ ವರ್ಷದ ಹನುಮ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಪಟ್ಟಣದ ಕೋಟೆ ಶ್ರೀಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ದೇವರಿಗೆ ಮುಂಜಾನೆಯಿಂದಲೇ ಗಣಪತಿ ಹೋಮ, ನವಗ್ರಹ ಪೂಜೆ, ಹೋಮ ಹವನ ನೆರವೇರಿಸಲಾಯಿತು. ಬಳಿಕ ವಿವಿಧ ಹೂಗಳಿಂದ ಅಲಂಕರಿಸಿ ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಬಳಿಕ 11 ಗಂಟೆಗೆ ಸಂಸದ ಯದುವೀರ್ ಅವರು ಅಲಂಕೃತಗೊಂಡ ವಾಹನದಲ್ಲಿ ಪ್ರತಿಷ್ಠಾಪಿಸಿದ್ದ ಹನುಮನ ವಿಗ್ರಹಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಈ ವೇಳೆ ಸಾವಿರಾರು ಭಕ್ತರು ವೀರಾಂಜನೇಯನಿಗೆ ಜೈಕಾರ ಹಾಕುವ ಮೂಲಕ ಭಕ್ತಿ ಮೆರೆದರು. ಮೆರವಣಿಗೆ ಪಟ್ಟಣದ ಒಳಕೋಟೆ ಉಪ್ಪಾರಗೇರಿ, ಬಿ.ಎಂ.ರಸ್ತೆ ಮಾರ್ಗವಾಗಿ ಇಲ್ಲಿನ ಬೆಟ್ಟದಪುರ ಸರ್ಕಲ್ ತಲುಪಿ ನಂತರ ನೆಹರು ರಸ್ತೆ ದೊಡ್ಡ ಬೀದಿ, ಆರ್ಯ ಈಡಿಗರ ಬೀದಿ ಮೂಲಕ ಹಾದು ಕಾನ್ವೆಂಟ್ ರಸ್ತೆಯ ಮುಖಾಂತರ ಸರ್ಕಾರಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಸಮಾಪ್ತಿಯಾಯಿತು.

ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡರಾದ ಭರತ್ ಬೊಮ್ಮಾಯಿ, ರಾಮದೂರು ಮುರುಗ ಮಠದ ಮುರುಘ ರಾಜೇಂದ್ರಸ್ವಾಮೀಜಿ, ಮಾಜಿ ಸಂಸದ ಪ್ರತಾಪ್ ಸಿಂಹ,

ಮಾಜಿ ಶಾಸಕ ಕೆ.ಮಹದೇವ್, ಬಿಜೆಪಿ ತಾಲೂಕು ಅಧ್ಯಕ್ಷ ರಾಜೇಂದ್ರ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಣ್ ಜಯರಾಮೇಗೌಡ, ಮೈಮುಲ್ ಮಾಜಿ ಅಧ್ಯಕ್ಷ ಪಿ.ಎಂ.ಪ್ರಸನ್ನ, ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಪುರಸಭಾ ಸದಸ್ಯೆ ರೇವತಿ, ವೀರಾಂಜನೇಯ ಸಮಿತಿ ಪದಾಧಿಕಾರಿಗಳಾದ ಮುರಳಿ, ಷಣ್ಮುಖರಾವ್, ಪ್ರಸಾದ್, ರವಿ, ಪ್ರವೀಣ್, ಕರ್ನಾಟಕ ಕಾವಲು ಪಡೆ ತಾಲೂಕು ಅಧ್ಯಕ್ಷ ಸುಬ್ರಹ್ಮಣ್ಯ, ಬಿಜೆಪಿ ಮುಖಂಡರಾದ ರಾಜೇಗೌಡ, ವಿಕ್ರಂರಾಜ್, ನಳಿನಿ ಗೌಡ, ಟಿ.ರಮೇಶ್, ಶುಭಗೌಡ, ಪಿ.ಜೆ.ರವಿ ಇನ್ನಿತರರಿದ್ದರು.

ಹೈರಿಗೆಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ


ಹೈರಿಗೆ ಗ್ರಾಮದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.

ಹೆಚ್.ಡಿ.ಕೋಟೆ, ಡಿ.28– ತಾಲೂಕಿನ ಹೈರಿಗೆ ಗ್ರಾಮದಲ್ಲಿ ಬುದ್ಧ ಚಾರಿಟಬಲ್ ಟ್ರಸ್ಟ್ ಮತ್ತು ರೋಟರಿ ಕ್ಲಬ್ ಹೆಚ್.ಡಿ.ಕೋಟೆ ಹಾಗೂ ಶಂಕರ್ ಕಣ್ಣಿನ ಆಸ್ಪತ್ರೆ ಬೆಂಗಳೂರು ಇವರ ಸಹಯೋಗದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.

ಶಿಬಿರದಲ್ಲಿ 80 ಮಂದಿ ತಪಾಸಣೆಗೊಳಪಟ್ಟರು. ಈ ಪೈಕಿ 30 ಮಂದಿಗೆ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ಶಂಕರ್ ಆಸ್ಪತ್ರೆಗೆ ರವಾನಿಸಲಾಯಿತು. ಈ ವೇಳೆ ತಾಲೂಕು ಆರೋಗ್ಯಾಧಿಕಾರಿ ಡಾ.ರವಿ ಕುಮಾರ್, ಡಾ.ಎಸ್.ಮರಿದೇವಯ್ಯ, ಬುದ್ಧ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಹೆಚ್.ಸಿ.ಲಿಂಗರಾಜು, ರೋಟರಿ ಕ್ಲಬ್ ಅಧ್ಯಕ್ಷ ಎಸ್.ಎನ್.ನಿರಂಜನ್, ಕಾರ್ಯದರ್ಶಿ ಬಿ.ಎನ್.ಶಿವಣ್ಣ, ಮಂಜುನಾಥ್, ಮುಖಂಡರಾದ ಶಿವರಾಜು, ಮಹದೇವು, ದೇವರಾಜು, ಸೋಮಣ್ಣ, ಮಲ್ಲೇಶ್, ಮುದ್ದುಮಲ್ಲಯ್ಯ, ದೇವರಾಜ್, ದಿನೇಶ್, ಶಿವಣ್ಣ ಶ್ರೀಕಂಠಮೂರ್ತಿ, ಪರ ಶಿವಮೂರ್ತಿ, ಸಂಘದ ಪದಾಧಿ ಕಾರಿಗಳು ಹಾಗೂ ಹೈರಿಗೆ ಗ್ರಾಮಸ್ಥರು, ಆಶಾ ಕಾರ್ಯಕರ್ತೆಯರು, ಆಸ್ಪತ್ರೆ ಸಿಬ್ಬಂದಿ ವರ್ಗ ಇದ್ದರು.

ಮ.ಬೆಟ್ಟ ಪ್ರಾಧಿಕಾರ ನಿರ್ದೇಶಕಿಗೆ ಸನ್ಮಾನ


ತಿ.ನರಸೀಪುರದ ಬೃಂದಾ ಆಸ್ಪತ್ರೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರದ ನಿರ್ದೇಶಕರಾಗಿ ಸರ್ಕಾರದಿಂದ ನೇಮಕಗೊಂಡ ವರುಣ ಕ್ಷೇತ್ರದ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಕುಪ್ಯ ಭಾಗ್ಯಮ್ಮ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಉಪನ್ಯಾಸಕ ಕುಮಾರಸ್ವಾಮಿ, ಬೃಂದಾ ಆಸ್ಪತ್ರೆ ಮಾಲೀಕ ಗುರು, ಅನಾಥ ಶವಗಳ ಮುಕ್ತಿದಾತ ಡಾ. ಎಂ. ಮಾದೇಶ್, ಗೋವಿಂದ, ರಮೇಶ್, ಮಹದೇವ್, ಮಲ್ಲೇಶ್, ಡ್ಯಾನ್ಸ್ ಬಸವರಾಜು, ಸುಶ್ಮಿತಾ, ರಕ್ಷಿತಾ ಮತ್ತಿತರರಿದ್ದರು.

ತಿ.ನರಸೀಪುರದಲ್ಲಿ ಮನುಸ್ಮೃತಿ ಸುಡುವ ಚಳುವಳಿ

ತಿ.ನರಸೀಪುರ, ಡಿ.28– ಸಾಮಾಜಿಕ ಅಸಮಾನತೆ ಪ್ರತಿಪಾದಿಸುತ್ತಿದ್ದ ಕೋಮುವಾದಿಗಳ ಪವಿತ್ರ ಗ್ರಂಥ ಮನುಸ್ಮೃತಿಯನ್ನು ಡಾ.ಬಿ.ಆರ್.ಅಂಬೇಡ್ಕರ್ ಸುಟ್ಟು ಹಾಕಿದ ದಿನದ ಅಂಗವಾಗಿ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಹಾಗೂ ಮುಖಂಡರು ಪಟ್ಟಣದ ತಾಲೂಕು ಆಡಳಿತಸೌಧದ ಎದುರಿನ ಅಂಬೇಡ್ಕರ್ ಪುತ್ಥಳಿ ಬಳಿ ಸಂವಿಧಾನ ಎದೆಗಪ್ಪಿಕೊಂಡು ಮನುಸ್ಮೃತಿ ಸುಡುವ ಚಳುವಳಿ ನಡೆಸಿದರು.

ಪಟ್ಟಣದ ಅಂಬೇಡ್ಕರ್ ಪುತ್ಥಳಿ ಬಳಿ ಜಮಾಯಿಸಿದ ದಸಂಸ ಪದಾಧಿಕಾರಿಗಳು ದೇಶದಲ್ಲಿ ಕೋಮು ಸಂಘರ್ಷದ ಮೂಲಕ ಸಾಮಾಜಿಕ ಅಸಮಾನತೆ ಮರು ಸ್ಥಾಪಿಸಲು ಹವಣಿಸುತ್ತಿರುವ ಮನುವಾದಿಗಳ ವಿರುದ್ಧ ಘೋಷಣೆ ಕೂಗಿ ಮನುಸ್ಮೃತಿ ಪ್ರತಿಗಳಿಗೆ ಬೆಂಕಿ ಹಚ್ಚಿ ಸುಟ್ಟು ಹಾಕಿದರು.

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲಿ ದೇಶದಲ್ಲಿ ಅಲಿಖಿತ ಮನುಸ್ಮೃತಿ ಸಂವಿಧಾನ ಜಾರಿಯಲ್ಲಿತ್ತು. ಜಾತಿ ಜಾತಿಗಳ ನಡುವೆ ವಿಷಬೀಜ ಬಿತ್ತುವುದು, ಧರ್ಮಗಳ ಮಧ್ಯೆ ಮತ್ತು ಬಡವ ಬಲ್ಲಿದನ ನಡುವೆ ಅಂತರವಿರಬೇಕು. ಸಮಾಜದಲ್ಲಿ ಮೇಲು–ಕೀಳೆಂಬ ಶ್ರೇಣೀಕೃತ ವ್ಯವಸ್ಥೆ ಮುಂದುವರೆಯಬೇಕು ಎಂಬುದೇ ಮುಖ್ಯವಾಗಿತ್ತು. ಇದನ್ನೆಲ್ಲಾ ಅಧ್ಯಯನ ಮಾಡಿದ ಅಂಬೇಡ್ಕರ್ ಅವರು ಅಧ್ಯಯನ ನಡೆಸಿ, ಅಪ್ಪಟ ಪುಸ್ತಕ ಪ್ರೇಮಿಯಾಗಿದ್ದರೂ, ಸ್ವಾತಂತ್ರ್ಯ ನಂತರ ಮನುಸ್ಮೃತಿಯನ್ನು ಸುಟ್ಟು ಹಾಕಿದರು. ದೇಶದಲ್ಲಿ ಪ್ರಗತಿಪರ ಚಿಂತನೆಗಳು ಹಾಗೂ ದಲಿತ ಸಂಘಟನೆಗಳು ಜೀವಂತ ಇರುವವರೆಗೂ ಮತ್ತೆ ಮನುಸ್ಮೃತಿ ಜಾರಿಗೆ ತರಲು ಬಿಡುವುದಿಲ್ಲ ಎಂದು ಗುಡುಗಿದರು.


ಮನುಸ್ಮೃತಿ ಸುಡುವ ಚಳವಳಿ ನಡೆಯಿತು.

ಕಾರ್ಯಕ್ರಮದಲ್ಲಿ ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್, ಬನ್ನಹಳ್ಳಿ ಸೋಮಣ್ಣ, ಯರಗನಹಳ್ಳಿ ಸುರೇಶ್, ತಾಲೂಕು ಸಂಚಾಲಕ ಕುಕ್ಕೂರು ರಾಜು, ಕಿರಗಸೂರು ರಜನಿ, ಬನ್ನಹಳ್ಳಿ ಹುಂಡಿ ಉಮೇಶ್, ಆಲಗೂಡು ನಾಗರಾಜ್ ಮೂರ್ತಿ, ಯಡದೊರೆ ನಾರಾಯಣ, ಮಾವಿನಹಳ್ಳಿ ಕುಮಾರ್, ಮುತ್ತತ್ತಿ ನಾಗರಾಜು, ತುಂಬಲ ಮಹದೇವಸ್ವಾಮಿ, ಶಾಂತಕುಮಾರ್, ರಘು, ಮಾದಿಗಹಳ್ಳಿ ರಾಮು, ತುರುಗನೂರು ಲಕ್ಷ್ಮಣ್, ಬಸವರಾಜು, ಇಂಡವಾಳು ಹೊನ್ನಯ್ಯ, ನಾಗರಾಜ್, ಉಕ್ಕಲಗೆರೆ ರಾಜು, ಜಯಮಲ್ಲೇಶ, ಕೇತಹಳ್ಳಿ ಪ್ರಶಾಂತ, ಕನ್ನಹಳ್ಳಿ ಶಶಿಕುಮಾರ್, ಸೋಮಣ್ಣ, ಸಿದ್ದಾರ್ಥ್, ಸಂಪತ್ತು, ಬಿಲಗೆರೆಹುಂಡಿ ಶಿವಕುಮಾರ್, ಸಿದ್ದರಾಜು, ಶ್ರೀನಿವಾಸ್, ಕುಕ್ಕೂರು ಪ್ರಭು, ವಾಟಾಳ್ ಕೃಷ್ಣ, ಮನು, ತೊಟ್ಟವಾಡಿ ಮಹಾದೇವ, ಕೊಳತೂರು ಮಾದೇಶ, ಚೌಹಳ್ಳಿ ಕೃಷ್ಣ, ಶಿವು, ಕೇತುಪುರ ಶಿವನಂಜು, ಹ್ಯಾಕನೂರು ರಾಚಪ್ಪ, ಮಹದೇವಸ್ವಾಮಿ, ಕಿರಗಸೂರು ಮಾದೇಶ ಇತರರಿದ್ದರು.

ಶಿವಾರ್ಚಕರ ಶ್ರೇಯೋಭಿವೃದ್ಧಿಗೆ ಸರ್ಕಾರ ಶ್ರಮಿಸಲಿ

ಕರ್ನಾಟಕ ರಾಜ್ಯ ಶಿವಾರ್ಚಕರ ಸಂಘದ ಅಧ್ಯಕ್ಷ, ನಿವೃತ್ತ ಪ್ರೊ.ಮಲ್ಲಣ್ಣ

ಸರಗೂರು, ಡಿ.28– ಹಿಂದೂ ದೇವಾಲಯಗಳಲ್ಲಿ ಅರ್ಚಕರಾಗಿ ಸೇವೆ ಸಲ್ಲಿಸುತ್ತಿರುವ ಶಿವಾರ್ಚಕರ ಸಮಾಜದ ಶ್ರೇಯೋಭಿವೃದ್ಧಿಗೆ ಸರ್ಕಾರ ಶ್ರಮಿಸಬೇಕು ಎಂದು ಕರ್ನಾಟಕ ರಾಜ್ಯ ಶಿವಾರ್ಚಕರ ಸಂಘದ ಅಧ್ಯಕ್ಷ, ನಿವೃತ್ತ ಪ್ರೊ.ಮಲ್ಲಣ್ಣ ತಿಳಿಸಿದರು.

ತಾಲೂಕಿನ ಶ್ರೀಚಿಕ್ಕದೇವಮ್ಮನವರ ಬೆಟ್ಟದ ಸನ್ನಿಧಿಯಲ್ಲಿ ಹೆಚ್.ಡಿ.ಕೋಟೆ, ಸರಗೂರು ತಾಲೂಕು ಶಿವಾರ್ಚಕರ ಸಂಘದ 2025ನೇ ಸಾಲಿನ ನೂತನ ಕ್ಯಾಲೆಂಡರ್ ಬಿಡುಗಡೆ ಮತ್ತು ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಶಿವಾರ್ಚಕರ ಮಕ್ಕಳು ಕಡ್ಡಾಯವಾಗಿ ಶಿಕ್ಷಣ ಪಡೆಯಬೇಕು. ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ಸಂಘ ಪ್ರೋತ್ಸಾಹಿಸಲಿದ್ದು, ಎಲ್ಲರೂ ಸದ್ಬಳಕೆ ಮಾಡಿಕೊಳ್ಳಬೇಕು. ಜೊತೆಗೆ ಸಮಾಜದ ಏಳಿಗೆಗೆ ದುಡಿಯಬೇಕಿದ್ದು, ಸರಗೂರು, ಹೆಚ್.ಡಿ.ಕೋಟೆ ಸಂಘದ ಕಾರ್ಯ ವೈಖರಿಯೂ ರಾಜ್ಯ ಸಂಘಕ್ಕೆ ಮಾದರಿ ಎಂದರು.


ಕಾರ್ಯಕ್ರಮದಲ್ಲಿ ಕ್ಯಾಲೆಂಡರ್ ಅನ್ನು ಬಿಡುಗಡೆಗೊಳಿಸಲಾಯಿತು.

ತಾಲೂಕು ಶಿವಾರ್ಚಕರ ಸಂಘದ ಸಲಹೆಗಾರ ಎನ್.ಮಹದೇವಸ್ವಾಮಿ ಮಾತನಾಡಿ, ಭಗವಂತನಿಗೆ ಸೇವೆ ಮಾಡುವ ಕಾಯಕದಿಂದಲೇ ನಮ್ಮಗಳ ಕುಟುಂಬ ನಿರ್ವಹಣೆ ಮಾಡಿಕೊಂಡಿದ್ದೇವೆ. ಆದ್ದರಿಂದ ಪ್ರತಿಯೊಬ್ಬರೂ ಕಾಯಕದಲ್ಲಿ ನಿಷ್ಠೆಯಿಂದ ದುಡಿದು ಸಮಾಜದ ಉನ್ನತಿಗೆ ಶ್ರಮಿಸಬೇಕು. ಜೊತೆಗೆ ಸಂಘದಿಂದ ಸಮುದಾಯ ಭವನ ನಿರ್ಮಾಣವೂ ಆಗಲಿದೆ ಎಂದರು.

ತಾಲೂಕು ಶಿವಾರ್ಚಕರ ಸಂಘದ ಅಧ್ಯಕ್ಷ ಕೆ.ಜಿ.ಯಶ್ವಂತ್ ಮಾತನಾಡಿ ಸಂಘಟನೆ ಮೂಲಕ ಬೆಳೆಯಲು ಸಾಧ್ಯ. ಸಂಘದ ಪದಾಧಿಕಾರಿಗಳು, ಸದಸ್ಯರಿಂದ ಸಂಘ ಬೆಳವಣಿಗೆ ಹೊಂದುತ್ತಿದೆ. ಮುಂದಿನ ದಿನಗಳಲ್ಲಿ ಶಿವಾರ್ಚಕರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಸಂಘ ಹೆಜ್ಜೆ ಹಾಕಲಿದೆ. ಪ್ರತಿಯೊಬ್ಬರ ಸಲಹೆ ಸಹಕಾರ ಅಗತ್ಯ ಎಂದರು.

ಇದೇ ವೇಳೆ 2025ನೇ ಸಾಲಿನ ನೂತನ ಕ್ಯಾಲೆಂಡರ್ ಅನ್ನು ಬಿಡುಗಡೆಗೊಳಿಸಲಾಯಿತು. ಈ ವೇಳೆ ರಾಜ್ಯ ಸಂಘದ ಗೌರವಾಧ್ಯಕ್ಷ ಶಿವಣ್ಣ, ಕಾರ್ಯದರ್ಶಿ ನಾಗೇಂದ್ರ, ಖಜಾಂಚಿ ಗಿರೀಶ್, ಹೆಚ್.ಡಿ.ಕೋಟೆ, ಸರಗೂರು ತಾಲೂಕು ಶಿವಾರ್ಚಕರ ಸಂಘದ ಅಧ್ಯಕ್ಷ ಉಪಾಧ್ಯಕ್ಷ ಪ್ರಸನ್ನಕುಮಾರ್, ಕಾರ್ಯದರ್ಶಿ ವೀರಣ್ಣ, ಖಜಾಂಚಿ ಶಿವ ಕುಮಾರ್, ಗೌರವಾಧ್ಯಕ್ಷ ಸುಬ್ಬಣ್ಣ, ಸಿ.ನಾಗ ರಾಜಪ್ಪ, ಜಗದೀಶ್, ನಂಜುಂಡಸ್ವಾಮಿ, ನಿರ್ದೇಶಕರಾದ ರವಿಶಾಸ್ತ್ರಿ, ರಾಜಶಾಸ್ತ್ರಿ, ನಂಜಪ್ಪ, ಸುರೇಶ್, ಚಂದ್ರಪ್ಪ ಎನ್, ಸತೀಶ್, ಮಹದೇವಪ್ಪ, ನೀಲಕಂಠ, ನಟರಾಜು, ಸೋಮಣ್ಣ, ಮೇಗಾವತಿ ರಘುಕೀರ್ತಿ ಇತರರಿದ್ದರು.

ಕ್ಯಾಲೆಂಡರ್ ಸೇವಾರ್ಥದಾರರಾದ ಜಯಮ್ಮ ನಾಗರಾಜು, ಸೋಮ ಶೇಖರ್, ಎಸ್.ಪಿ. ವೀರಭದ್ರಸ್ವಾಮಿ, ನಂದೀಶ್, ಮಹದೇವಪ್ರಸಾದ್, ನಾಗರತ್ನ, ವಿನಯ್ ಕುಮಾರ್ ಅವರನ್ನು ಸಂಘದಿಂದ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಶಿವಾರ್ಚಕರು ಹಾಜರಿದ್ದರು.

ಕಾಡು ಮಾರಮ್ಮ ಒಡತಿ, ಶ್ರೀಕಾಡು ಒಡೆಯನಿಗೆ ವಿಶೇಷ ಪೂಜೆ



ಹೆಚ್.ಡಿ.ಕೋಟೆ, ಡಿ.28– ತಾಲೂಕಿನ ಅಣ್ಣೂರು ಹೊಸಳ್ಳಿ ಹಾಡಿಯಲ್ಲಿ ಕಾಡು ಮಾರಮ್ಮ ಒಡತಿ, ಶ್ರೀಕಾಡು ಒಡೆಯನಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

ಅಣ್ಣೂರು ಚಿಕ್ಕರೆ ಹಾಡಿ, ಉದ್ದೂರು ಕಾಲೋನಿ ಗಿರಿಜನರು ಪ್ರತಿ ವರ್ಷದಂತೆ ಈ ವರ್ಷವೂ ವಿಶೇಷ ಪೂಜೆ ಸಲ್ಲಿಸಿ ಪ್ರಸಾದ ವಿತರಿಸಿದರು. ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಹೆಚ್.ಎಸ್.ಸ್ವಾಮಿ ಉಪಾಧ್ಯಕ್ಷ ರಾಜು, ಸುಂದ್ರಾಮಣಿ, ಹೀವನ್‌ರಾಜು, ಗ್ರೀನ್ ಇಂಡಿಯಾ ಸಂಸ್ಥೆ ನಿರ್ದೇಶಕ ಮಹೇಂದ್ರ ಕುಮಾರ್, ವಿಜಯ್ ಕುಮಾರ್, ಕಾಳಕಲ್ಕರ್, ಜಿ.ಚಂದ್ರು, ಹೊಸಹಳ್ಳಿ ಹಾಡಿ, ಟೈಗರ್ ಬ್ಲಾಕ್ ಹಾಡಿ, ಅಣ್ಣೂರು ಚಿಕ್ಕಕೆರೆ ಹಾಡಿಯ ಗಿರಿಜನರು, ಉದ್ದೂರು ಕಾಲೋನಿ ಪರಿಶಿಷ್ಟ ಪಂಗಡದ ಯಜಮಾನರು, ಹಾಡಿಗಳ ಮಹಿಳೆಯರು, ಅರಣ್ಯ ಇಲಾಖೆ ಫಾರೆಸ್ಟರ್ ಸಚಿನ್, ಗಾರ್ಡ್ ಕೃಷ್ಣ ಹಾಗೂ ನೂರಾರು ಹಾಡಿ ಜನರು ಭಾಗವಹಿಸಿದ್ದರು.

ನಂ.ಗೂಡನ್ನು ಪ್ರವಾಸೋದ್ಯಮ ಕೇಂದ್ರವಾಗಿಸಲು ಶ್ರಮಿಸುತ್ತೇವೆ

ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ರಾಮಕೃಷ್ಣ


ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

ನಂಜನಗೂಡು, ಡಿ.28– ನಂಜನಗೂಡು ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾಗಿದ್ದು, ರಾಜ್ಯದ ವಿವಿಧೆಡೆಗಳಿಂದ ಆಗಮಿಸುವ ಭಕ್ತರಿಗೆ ತೃಪ್ತಿಕರ ಸೇವೆ ಒದಗಿಸುವ ಮೂಲಕ ನಂಜನಗೂಡನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ರೂಪಿಸಲು ಹೋಟೆಲ್ ಮಾಲೀಕರು ಶ್ರಮಿಸುತ್ತಿದ್ದಾರೆ ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ರಾಮಕೃಷ್ಣ ತಿಳಿಸಿದರು.

ನಗರದ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ಹೋಟೆಲ್ ಮಾಲೀಕರ ಸಂಘದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ರಾಜ್ಯದ ವಿವಿಧೆಡೆಗಳಿಂದ ಆಗಮಿಸುವ ಭಕ್ತರಿಗೆ ಸೂಕ್ತ ಮತ್ತು ಸುರಕ್ಷಿತ ವಸತಿ ಸೌಕರ್ಯ ಸೇರಿದಂತೆ ತೃಪ್ತಿಕರ ಭೋಜನ ವ್ಯವಸ್ಥೆ ಕೈಗೊಳ್ಳುವ ಮೂಲಕ ನಂಜನಗೂಡು ಕ್ಷೇತ್ರವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ರೂಪಿಸಲು ಹೋಟೆಲ್ ಮಾಲೀಕರು ಕಾರ್ಯ ಪ್ರವೃತ್ತರಾಗಿರುವುದು ಶ್ಲಾಘನೀಯ ಎಂದರು.

ಹೋಟೆಲ್ ಮಾಲೀಕರ ನಿಸ್ವಾರ್ಥ ಸೇವೆಗೆ ಶಾಸಕ ದರ್ಶನ್ ಕೈಜೋಡಿಸಿದ್ದು, ಕಡಿಮೆ ದಾಖಲಾತಿ ಮತ್ತು ಯಾವುದೇ ದಂಡ ಶುಲ್ಕವಿಲ್ಲದೆ, ನಿಗದಿತ ಶುಲ್ಕ ಭರಿಸಿ ಸ್ಥಳದಲ್ಲೇ ಉದ್ದಿಮೆ ಪರವಾನಗಿ ಪಡೆಯುವ ಅವಕಾಶ ಕಲ್ಪಿಸಿ ಕೊಟ್ಟಿದ್ದಾರೆ. ಹೋಟೆಲ್ ಮಾಲೀಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ನೂತನ ವರ್ಷದ ದಿನದರ್ಶಿಕೆ ಬಿಡುಗಡೆಗೊಳಿಸಲಾಯಿತು.

ಸಮಾರಂಭದಲ್ಲಿ ಹೋಟೆಲ್ ಮಾಲೀಕರ ಸಂಘದ ಉಪಾಧ್ಯಕ್ಷ ಎಂ.ಎನ್.ಮಂಜುನಾಥ್, ಕಾರ್ಯದರ್ಶಿ ರಾಜೇಂದ್ರ ಕುಮಾರ್, ಖಜಾಂಚಿ ಸಂದೀಪ್, ಸದಸ್ಯರಾದ ಅನಿಲ್ ಕುಮಾರ್, ಕೆ.ಜಿ.ಆನಂದ್, ಲೋಕೇಶ್, ಆರ್.ಶ್ರೀನಿವಾಸ್, ಪ್ರಭುಸ್ವಾಮಿ, ಶೇಖರ್, ಸುಧೀರ್ ರಾಜ್, ಗಣೇಶ್, ನಂಜುಂಡಸ್ವಾಮಿ ಸೇರಿದಂತೆ ಇತರರಿದ್ದರು.

ದೆಹಲಿ ರೈತರ ಹೋರಾಟ ಬೆಂಬಲಿಸಿ ಪ್ರತಿಭಟನೆ

ತಿ.ನರಸೀಪುರ, ಡಿ.28– ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತ್ರಿ ಕಾನೂನು ಜಾರಿಯಾಗಬೇಕು. ದೇಶದ ರೈತರ ಸಂಪೂರ್ಣ ಸಾಲ ಮನ್ನಾ ಮಾಡಬೇಕು. 60 ವರ್ಷ ತುಂಬಿದ ರೈತರಿಗೆ ತಿಂಗಳಿಗೆ 10 ಸಾವಿರ ಪೆನ್ಷನ್ ಕೊಡಬೇಕು. ರೈತಪರ ಸಮಸ್ಯೆಗಳ ಬಗೆಹರಿಸುವಂತೆ ಒತ್ತಾಯಿಸಿ ದೆಹಲಿ ಗಡಿಯಲ್ಲಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ರೈತ ಮುಖಂಡ ಜಗಜಿತ್ ಸಿಂಗ್ ದಲ್ಲೈವಾಲ ಹೋರಾಟ ಬೆಂಬಲಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘ ಬನ್ನೂರು ಗ್ರಾಮಾಂತರ ಘಟಕದ ಮುಖಂಡರು ಬನ್ನೂರು ಸಂತೆಮಾಳದ ಬಸವೇಶ್ವರ ವೃತ್ತದಲ್ಲಿ ಮೇಣದ ಬತ್ತಿ ಬೆಳಗಿಸುವ ಮೂಲಕ ಪ್ರತಿಭಟನೆ ನಡೆಸಿದರು.

ಒಕ್ಕೂಟದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್ ಮಾತನಾಡಿ, ಎಂಎಸ್‌ಪಿ ಕಾನೂನು ಜಾರಿಗೆ ಒತ್ತಾಯಿಸಿ ಪಂಜಾಬ್– ಹರಿಯಾಣ ಕನೂರಿ ಬಾರ್ಡರ್‌ನಲ್ಲಿ ಕಳೆದ 33 ದಿನಗಳಿಂದ ನಿರಂತರ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಸಂಯುಕ್ತ ಕಿಸಾನ್ ಮೋರ್ಚಾ ರಾಜಕೀಯೇತರ ಸಂಘಟನೆಯ ರೈತ ಮುಖಂಡ ಜಗಜಿತ್ ಸಿಂಗ್ ದಲ್ಲೈವಾಲ ಹೋರಾಟ ಬೆಂಬಲಿಸಲಾಗುವುದು ಎಂದರು.


ದೆಹಲಿಯಲ್ಲಿ ರೈತರ ಹೋರಾಟ ಬೆಂಬಲಿಸಿ ಬನ್ನೂರಲ್ಲಿ ಪ್ರತಿಭಟನೆ ನಡೆಸಲಾಯಿತು.

ದೇಶಾದ್ಯಂತ ಮೇಣದ ಬತ್ತಿ ಬೆಳಗಿಸಿ ಹೋರಾಟ ನಡೆಸಬೇಕೆಂದು ಸಂಯುಕ್ತ ಕಿಸಾನ್ ಮೋರ್ಚಾ ಮುಖಂಡರು ಕರೆ ನೀಡಿದ್ದ ಹಿನ್ನೆಲೆಯಲ್ಲಿ ರೈತ ಮುಖಂಡ ಜಗಜಿತ್ ಸಿಂಗ್ ದಲ್ಲೈವಾಲ ಆರೋಗ್ಯ ಸುಧಾರಿಸಲಿ ಹಾಗೂ ರೈತ ಪರವಾಗಿ ಹಮ್ಮಿಕೊಂಡಿರುವ ಅವರ ಹೋರಾಟಕ್ಕೆ ಜಯವಾಗಲಿ ಎಂದು ಪ್ರಾರ್ಥಿಸಿ ಮೇಣದ ಬತ್ತಿ ಬೆಳಗಿಸಲಾಗಿದೆ ಎಂದರು.

ಕಳೆದ ಐದಾರು ದಿನಗಳ ಹಿಂದೆ ಸುಪ್ರೀಂ ಕೋರ್ಟ್ ನ್ಯಾಯಾಧೀಶರು ವಿಚಾರಣೆ ನಡೆಸಿ ಸರ್ಕಾರದ ಪರ ಹಾಜರಿದ್ದ ವಕೀಲರಿಗೆ ಎಚ್ಚರಿಕೆ ನೀಡಿ ಕೂಡಲೇ ದಲ್ಲೈವಾಲ ಅವರನ್ನು ಆಸ್ಪತ್ರೆಗೆ ವರ್ಗಾಯಿಸಿ, ತುರ್ತು ಚಿಕಿತ್ಸೆ ಕೊಡಿಸಬೇಕು ಎಂದು ಪಂಜಾಬ್ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಮತ್ತು ಪೊಲೀಸ್ ಮಹಾ ನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ. ರೈತರ ನೋವು ನಮ್ಮನಾಳುವ ಸರ್ಕಾರಗಳಿಗೆ ಏಕೆ ತಿಳಿಯುತ್ತಿಲ್ಲ ಎಂಬುದೇ ಅನುಮಾನವಾಗುತ್ತಿದೆ. ವರ್ಷದ ಅಂತ್ಯದಲ್ಲಾದರೂ ಪ್ರಧಾನಿ ಮೋದಿಯವರು ರೈತರ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಬೇಕು. ತಪ್ಪಿದರೆ ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ್, ತಾಲೂಕು ಸಂಘಟನಾ ಕಾರ್ಯದರ್ಶಿ ಕುರುಬೂರು ಪ್ರದೀಪ್, ಮುಖಂಡರಾದ ಅತ್ತಹಳ್ಳಿ ಸಿ.ಲಿಂಗಣ್ಣ ಅರುಣ್ ಕುಮಾರ್, ಬನ್ನೂರು ಸೂರಿ, ನಂಜೇಗೌಡ, ಮೆಡಿಕಲ್ ಮಹೇಶ್, ನಂದಿ ಸ್ಟೋರ್ ನಟೇಶ್, ಹನುಮನಾಳು ಲೋಕೇಶ್ ರಾಮು, ಎ.ಪಿ.ನವೀನ್, ಶಿವರಾಜ್, ವಿನಯ್, ಚೇತನ್, ಮಹೇಶ್, ವರದ ರಾಜ್, ರಮೇಶ, ಕಾಳಪ್ಪ, ಹೊನ್ನಯ್ಯ, ರಾಚಾಚಾರಿ ಹಾಗೂ ಬನ್ನೂರು ಗ್ರಾಮಾಂತರ ಹಳ್ಳಿಗಳ ರೈತರು ಭಾಗವಹಿಸಿದ್ದರು.

ಮೈಸೂರು ಮಿತ್ರ

ಖಾಸಗಿ ಕಂಪನಿಗಳು ಮೆರಿಟ್ ಇದ್ದವರಿಗಷ್ಟೇ ಮಣೆ

●ಹೈಕೋರ್ಟ್ ನ್ಯಾಯಮೂರ್ತಿ ಶಿವಶಂಕರೇಗೌಡ ವಿಷಾದ ●ಎಲ್ಲರಿಗೂ ಸ್ಥಾನಮಾನ ಕಲ್ಪಿಸುವುದೇ ಸಾಮಾಜಿಕ ನ್ಯಾಯ ●ಮಹಾಜನ ಕಾಲೇಜಲ್ಲಿ ರಾಷ್ಟ್ರೀಯ ಕಾರ್ಯಾಗಾರಕ್ಕೆ ಚಾಲನೆ

ಮೈಸೂರು,ಡಿ.28(ಎಂಟಿವೈ)– ಬಹು ರಾಷ್ಟ್ರೀಯ ಕಂಪನಿಗಳಲ್ಲಿ ಸಾಮಾಜಿಕ ನ್ಯಾಯ ಮರೀಚಿಕೆಯಾಗಿದ್ದು, ಮೆರಿಟ್ ಇದ್ದವರಿಗೆ ಮಾತ್ರ ಖಾಸಗಿ ಕಂಪನಿಗಳು ಮಣೆ ಹಾಕುತ್ತಿರುವುದು ಸಂವಿಧಾನದ ಪೀಠಿಕೆಗೆ ವಿರುದ್ಧವಾದ ನಡೆಯಾಗಿದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಶಿವಶಂಕರೇಗೌಡ ವಿಷಾದಿಸಿದ್ದಾರೆ.



ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಕಾಲೇಜಿನಲ್ಲಿ ಆಯೋಜಿಸಿದ್ದ ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಹೈಕೋರ್ಟ್ ನ್ಯಾಯಮೂರ್ತಿ ಶಿವಶಂಕರೇಗೌಡ ಉದ್ಘಾಟಿಸಿದರು.

ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಮಹಾಜನ ಕಾಲೇಜಿನಲ್ಲಿ ಬೆಳಗಾವಿ ಕಾನೂನು ವಿಶ್ವವಿದ್ಯಾನಿಲಯದ ನೆರವಿನೊಂದಿಗೆ ಆಯೋಜಿಸಿದ್ದ 'ಸಮಕಾಲೀನ ಯುಗದಲ್ಲಿ ಸಾಮಾಜಿಕ ನ್ಯಾಯದ ಬದಲಾದ ಮಜಲುಗಳು' ವಿಷಯ ಕುರಿತ ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಸಾಮಾಜಿಕ ನ್ಯಾಯ ಎಂದರೆ ಎಲ್ಲರಿಗೂ ಸಾಮಾಜಿಕ ಸ್ಥಾನಮಾನ ಅನುಷ್ಠಾನಕ್ಕೆ ಶ್ರಮಿಸುವುದು. ಜಗತ್ತಿನ 200 ದೇಶಗಳ ಅವಲೋಕಿಸಿದರೆ ನಾವು ಅತ್ಯುತ್ತಮ ಸ್ಥಾನದಲ್ಲಿದ್ದೇವೆ ಎಂದರು.

ಪ್ರತಿ ವರ್ಷ ಕಂಪನಿಗಳು ಸಾಮಾಜಿಕ ಜವಾಬ್ದಾರಿಯಡಿ ಸಾವಿರಾರು ಕೋಟಿ ರೂ.ಗಳನ್ನು ಸಿಎಸ್‌ಆರ್ ಅನುದಾನದಡಿ ನೀಡುತ್ತವೆ. ಅಷ್ಟು ಹಣ ಎಲ್ಲಿಗೆ ಹೋಗುತ್ತದೆ? ಒಂದೇ ಒಂದು ಗ್ರಾಮ ಅಭಿವೃದ್ಧಿ ಮಾಡಿದ ಉದಾಹರಣೆ ಇಲ್ಲ. ಬೆಂಗಳೂರಿನ ಮೆಟ್ರೋ ನಿಲ್ದಾಣವೊಂದಕ್ಕೆ ಕಂಪನಿ ಹೆಸರು ಹಾಕಿದ್ದಾರೆ. ಅದಕ್ಕೆ ಸಿಎಸ್‌ಆರ್ ಅನುದಾನ ಬಳಸಿಕೊಂಡಿದ್ದಾರೆ. ಸರ್ಕಾರ ಸಮಾಜ ಕಲ್ಯಾಣ ಇಲಾಖೆಗೆ 35 ಸಾವಿರ ಕೋಟಿ ರೂ. ಕೊಡುತ್ತಿದೆ. ಲೋಕೋಪಯೋಗಿ ಇಲಾಖೆಗಿಂತ ಹೆಚ್ಚಿನ ಅನುದಾನ ನೀಡುತ್ತಿದೆ. ಅಷ್ಟು ಹಣ ಎಲ್ಲಿಗೆ ಹೋಗುತ್ತಿದೆ? ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನವನ್ನು ಪ್ರಾಮಾಣಿಕವಾಗಿ ಮಾಡಬೇಕು ಎಂದು ಹೇಳಿದರು.

ಸಮಾನ ನ್ಯಾಯ ಕಲ್ಪಿಸುವುದು: ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಉದ್ಘಾಟಿಸಿದ ಹೈಕೋರ್ಟ್ ನ್ಯಾಯಮೂರ್ತಿ ಇ.ಎಸ್. ಇಂದ್ರೇಶ್ ಮಾತನಾಡಿ, ಸಾಮಾಜಿಕ ನ್ಯಾಯ ಎಂದರೆ ಜಾತಿ, ಲಿಂಗ, ವರ್ಣ, ವರ್ಗ, ಭಾಷೆ ಸಹಿತವಾಗಿ ಯಾವುದೇ ತಾರತಮ್ಯ ಇಲ್ಲದೇ ಎಲ್ಲರನ್ನೂ ಒಳಗೊಳ್ಳುವುದೇ ಸಾಮಾಜಿಕ ನ್ಯಾಯ. ಭಾರತಾಂಬೆಯ ಮಕ್ಕಳಾದ ಎಲ್ಲರಿಗೂ ಯಾವುದೇ ತಾರತಮ್ಯವಿಲ್ಲದೇ ಸಮಾನ ನ್ಯಾಯ ಕೊಡುವುದಾಗಿದೆ ಎಂದು ತಿಳಿಸಿದರು.

ಜಗತ್ತಿನ ಬಹುದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದ ಅದ್ಭುತ ದಾಖಲೆಯಾದ ಸಂವಿಧಾನವನ್ನು ಎಲ್ಲರೂ ನಂಬಿ, ಅದನ್ನು ಅನುಷ್ಠಾನಕ್ಕೆ ತರಲು ಶ್ರಮಿಸಬೇಕು. ಬಿ.ಆರ್.ಅಂಬೇಡ್ಕರ್ ಅವರು ಆಳವಾದ ಬದ್ಧತೆಯಿಂದ ಸಂವಿಧಾನ ರಚಿಸಿದ್ದಾರೆ. ಇದರಡಿ ರಾಜಕೀಯ ಸ್ವಾತಂತ್ರ್ಯ ಸಿಕ್ಕಿದೆ. ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಸಿಗಬೇಕು ಎಂದು ತಿಳಿಸಿದರು.

ರಾಜ್ಯ ಕಾನೂನು ಆಯೋಗದ ಮುಖ್ಯಸ್ಥ ಡಾ. ಅಶೋಕ ಬಿ. ಹಿಂಜಗೇರಿ ಮಾತನಾಡಿ, ಲಿಂಗ ಸಮಾನತೆಯೇ ಸಾಮಾಜಿಕ ನ್ಯಾಯ. ದೇಶದಲ್ಲಿ ಅರ್ಧಕ್ಕಿಂತ ಹೆಚ್ಚಿನ ಸಂಖ್ಯೆಯ ಮಹಿಳೆಯರಿದ್ದಾರೆ. ಪುರುಷ ಮತ್ತು ಮಹಿಳೆಯರ ನಡುವೆ ಅಸಮಾನತೆ ಇರಬಾರದು. ವರ್ತಮಾನದಲ್ಲಿ ಪುರುಷರಿಗಿಂತ ಮಹಿಳೆಯರೇ ಹೆಚ್ಚು ಶಕ್ತಿಯುತವಾಗಿದ್ದಾರೆ. ಪ್ರತಿ ಜೀವಿಯೂ ಸಮಾನ ಎಂದರು.

ಸಂವಿಧಾನದ ಬಗ್ಗೆ ಆಕ್ಷೇಪ ಸಲ್ಲ: ಸಾಮಾಜಿಕ ಹೋರಾಟಗಾರ ವಾದಿರಾಜ್ ಮಾತನಾಡಿ, ಭಾರತದ ಸಂವಿಧಾನ ಜಾರಿಗೊಂಡು 75 ವರ್ಷಗಳಾಗಿದೆ. ಇದರ ಬಗ್ಗೆ ಲಘುವಾಗಿ ಮಾತಾಡುವುದು ಸಲ್ಲದು. ವೈವಿಧ್ಯಮಯ ದೇಶವನ್ನು ಅಭಿವೃದ್ಧಿಯತ್ತ ಮುನ್ನಡೆಸಿದ ಭಾರತದ ಸಂವಿಧಾನವೂ ಕಾಲದ ಪರೀಕ್ಷೆಯಲ್ಲಿ ಉತ್ತೀರ್ಣವಾಗಿದೆ. ಸಂವಿಧಾನದ ಬಗ್ಗೆ ಲಘುವಾದ ಮಾತುಗಳು ಅನುಚಿತವಾದವು. ಉಳಿದಿರುವುದನ್ನು ಕೊಡುವುದಲ್ಲ. ಸಮಾನವಾಗಿ ಹಂಚಿಕೊಳ್ಳುವುದೇ ಸಾಮಾಜಿಕ ನ್ಯಾಯ ಎಂದು ಅಭಿಪ್ರಾಯಪಟ್ಟರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕಾನೂನು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಸಿ.ಬಸವರಾಜು ಅಧ್ಯಕ್ಷತೆ ವಹಿಸಿದ್ದರು. ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ವಿಜಯಲಕ್ಷ್ಮೀ ಮುರಳಿಧರ್ ಉಪಸ್ಥಿತರಿದ್ದರು.

ಮೈಸೂರಿನ ಮಹಾಜನ, ವಿದ್ಯಾವರ್ಧಕ, ವಿದ್ಯಾವಿಕಾಸ, ಜೆಎಸ್‌ಎಸ್, ಶಾರದಾ ವಿಲಾಸ, ಮಂಡ್ಯದ ಪಿಇಎಸ್, ಮಳವಳ್ಳಿಯ ನಾಡಗೌಡ ಕಾನೂನು ಕಾಲೇಜುಗಳ ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭೈರತಿ ರಣಗಲ್(ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುಐ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಪುಷ್ಪ–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೇಬಿಜಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ಔಟ್ ಆಫ್ ಸಿಲಬಸ್(ಕ) + ಪುಷ್ಪ–2 (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಮ್ಯಾಕ್ಸ್ (ಕ): ಬೆ.9ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12ಕ್ಕೆ, ಸಂ.5.10ಕ್ಕೆ, ರಾ.7.40ಕ್ಕೆ, ಯುಐ (2024) (ಕ): ಮ.2.30ಕ್ಕೆ, ಬರೋಜ್(3ಡಿ) (ಮ): ರಾ.10.10ಕ್ಕೆ.
ಸ್ಕ್ರೀನ್ 2	ಯುಐ (2024) (ಕ): ಬೆ.9.40ಕ್ಕೆ, ಸಂ.4.25ಕ್ಕೆ, ಪುಷ್ಪಾ 2 (ಕ): ಮ.12.30ಕ್ಕೆ, ಬೇಬಿ ಜಾನ್ (ಹಿಂ): ರಾ.7.10ಕ್ಕೆ, ಮಾರ್ಕೊ (ಮ): ರಾ.10.30ಕ್ಕೆ.
ಸ್ಕ್ರೀನ್ 3	ಹರಿದಾಸರ ದಿನಚರಿ (ಕ): ಬೆ.10.50ಕ್ಕೆ, ಬೇಬಿ ಜಾನ್ (ಹಿಂ): ಮ.12.55ಕ್ಕೆ, ಸಂ.4.15ಕ್ಕೆ, ಯುಐ (2024) (ಕ): ರಾ.7.35ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.10.15ಕ್ಕೆ, ಮ.1.10ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519


ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ನಗರ, ಜಿಲ್ಲಾ ಔಷಧಿ ವ್ಯಾಪಾರಿಗಳ ಸಂಘದ ನೂತನ ಕ್ಯಾಲೆಂಡರ್ ಬಿಡುಗಡೆ



ಮೈಸೂರು ನಗರ ಮತ್ತು ಜಿಲ್ಲಾ ಚಿಲ್ಲರೆ ಔಷಧಿ ವ್ಯಾಪಾರಿಗಳ ಸಂಘದ ನೂತನ ಕ್ಯಾಲೆಂಡರ್ ಅನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಿಡುಗಡೆಗೊಳಿಸಿದರು.

ಮೈಸೂರು, ಡಿ.28(ಜಿಎ)–ಮೈಸೂರು ನಗರ ಮತ್ತು ಜಿಲ್ಲಾ ಚಿಲ್ಲರೆ ಔಷಧಿ ವ್ಯಾಪಾರಿಗಳ ಸಂಘದ ನೂತನ ಕ್ಯಾಲೆಂಡರ್ ಅನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, ಚಿಲ್ಲರೆ ವ್ಯಾಪಾರದಿಂದ ದೇಶದಲ್ಲಿ ಹೆಚ್ಚಿನ ಉದ್ಯೋಗ ಸೃಷ್ಟಿಯಾಗುತ್ತಿದೆ. ಆ ಮೂಲಕ ದೇಶದ ಆರ್ಥಿಕ ಅಭಿವೃದ್ಧಿಗೆ ಸಾಕಷ್ಟು ಆದಾಯ ಬರುತ್ತದೆ. ಆದರೆ ಜಾಗತೀಕರಣದ ನಂತರ ಚಿಲ್ಲರೆ ವ್ಯಾಪಾರಕ್ಕೆ ಬಹುದೊಡ್ಡ ಹೊಡೆತ ಬಿದ್ದಿದೆ. ಒಂದು ವೇಳೆ ಚಿಲ್ಲರೆ ವ್ಯಾಪಾರಕ್ಕೆ ಧಕ್ಕೆ ಉಂಟಾದರೆ ಉದ್ಯೋಗದಲ್ಲಿ ಭಾರಿ ಪ್ರಮಾಣದ ನಷ್ಟ ಉಂಟಾಗುತ್ತದೆ. ಚಿಲ್ಲರೆ ವ್ಯಾಪಾರಗಳು ಉಳಿದರೆ ಮಾತ್ರ ದೇಶ ಉಳಿಯುತ್ತದೆ. ಆದ್ದರಿಂದ ಎಲ್ಲಾ ಚಿಲ್ಲರೆ ವ್ಯಾಪಾರಿಗಳು ಒಂದಾಗಿ ಸರ್ಕಾರದ ಕಣ್ಣು ತೆರೆಸುವ ಪ್ರಯತ್ನ ಆಗಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಸಂಘದ ಅಧ್ಯಕ್ಷ ಎಂ.ರಾಜು, ಕಾರ್ಯನಿರ್ವಾಹಕ ಅಧ್ಯಕ್ಷ ಎಸ್.ದೇವರಾಜು, ಕಾರ್ಯದರ್ಶಿ ಸಿ.ಕೆ.ಅರುಣ್, ಟ್ರಸ್ಟಿ ಮನ್ಸೂರ್ ಅಹಮದ್ ಖಾನ್, ಉಪಾಧ್ಯಕ್ಷ ಹೆಚ್.ಕೆ.ಮಂಜುನಾಥ್, ಜಂಟಿ ಕಾರ್ಯದರ್ಶಿ ವಿ.ಬಿ. ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ಕೆಎಸ್‌ಆರ್‌ಟಿಸಿ ಎಸ್‌ಸಿ–ಎಸ್‌ಟಿ ನೌಕರರು, ಅಧಿಕಾರಿಗಳ ಸಂಘದಿಂದ ಅಂಬೇಡ್ಕರ್ ಕ್ಯಾಲೆಂಡರ್ ಬಿಡುಗಡೆ

ಮೈಸೂರು, ಡಿ.28(ಜಿಎ)–ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಗರ, ಗ್ರಾಮಾಂತರ ಘಟಕದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಧಿಕಾರಿಗಳು ಹಾಗೂ ನೌಕರರ ಸಂಘ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಕ್ಯಾಲೆಂಡರ್ ಅನ್ನು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಬಿಡುಗಡೆಗೊಳಿಸಿದರು.



ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಗರ, ಗ್ರಾಮಾಂತರ ಘಟಕದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಧಿಕಾರಿಗಳು ಹಾಗೂ ನೌಕರರ ಸಂಘ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಕ್ಯಾಲೆಂಡರ್ ಅನ್ನು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಇತರರು ಬಿಡುಗಡೆಗೊಳಿಸಿದರು.

ನಂತರ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಎಲ್ಲರಿಗೂ ಆದರ್ಶ ವ್ಯಕ್ತಿಯಾಗಿದ್ದಾರೆ. ಆದರೆ ಇವರನ್ನು ಸದನದಲ್ಲಿಯೇ ಜನಪ್ರತಿನಿಧಿಗಳು ಅವಹೇಳನ ಮಾಡುತ್ತಾರೆಂದರೆ ಅದು ಬೇಸರದ ಸಂಗತಿಯಾಗಿದೆ. ಇದರ ವಿರುದ್ಧ ಎಲ್ಲರೂ ಎದ್ದು ನಿಲ್ಲಬೇಕಾಗಿದೆ ಎಂದರು.

ಅಂಬೇಡ್ಕರ್ ಅವರು ಯಾರನ್ನು ವಿರೋಧಿಸಲಿಲ್ಲ. ಎಲ್ಲರಿಗೂ ಆದರ್ಶ ಎನಿಸುವ ಸಂವಿಧಾನ ನೀಡಿದ್ದಾರೆ. ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲರನ್ನೂ ಒಗ್ಗೂಡಿಸುವ ಕೆಲಸ ಮಾಡಿದರು. ಹೀಗಾಗಿ ಅವರನ್ನು ತೆಗಳುವವರನ್ನು ಸಂಸದ ಸ್ಥಾನದಿಂದ ವಜಾಗೊಳಿಸಬೇಕು.ಈ ಸಂಘ ಸಹಾ ಕೇವಲ ಒಂದು ವರ್ಗಕ್ಕೆ ಸೀಮಿತವಾಗದೇ ಸಮಾಜದ ಇತರೆ ಎಲ್ಲಾ ಶೋಷಿತರ ನೆರವಿಗೆ ನಿಲ್ಲುವ ಕೆಲಸ ಮಾಡಬೇಕೆಂದು ಕಿವಿಮಾತು ಹೇಳಿದರು.

ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ, ಅಮಿತ್ ಶಾ ಅವರು ಅಪಮಾನ ಮಾಡಿದುದು ಕೇವಲ ಅಂಬೇಡ್ಕರ್ ಅವರಿಗೆ ಮಾತ್ರವಲ್ಲ, ಇಡೀ ದೇಶದ ಘನತೆ ಗೌರವಕ್ಕೆ ಮಾಡಿದ ಅಪಮಾನವಾಗಿದೆ. ಇನ್ನು, ರಾಜ್ಯ ಸಾರಿಗೆ ಸಂಸ್ಥೆ ನೌಕರರು ನಿಜಕ್ಕೂ ಸಂವಿಧಾನದ ಆಶಯದ ಅಡಿಯಲ್ಲಿ ಕೆಲಸ ಮಾಡುವವರಾಗಿದ್ದಾರೆ. ಬಸ್ ಹತ್ತುವ ಯಾರನ್ನೂ ಎಂದು ಜಾತಿ ನೋಡದೇ ಸೇವೆ ಒದಗಿಸುತ್ತಿದ್ದಾರೆ. ಇದೇ ವೇಳೆ ಅಂಬೇಡ್ಕರ್ ಅವರು ಸಹಾ ಕಾರ್ಮಿಕರ ಒಳಿತಿಗಾಗಿ ಶ್ರಮಿಸಿದರು. ಆದರೆ ಈಗ ದುಡಿಮೆ ಅವಧಿಯನ್ನು ಎಂಟರಿಂದ 12 ಗಂಟೆಗೆ ಹೆಚ್ಚಿಸುವ ಚಿಂತನೆ ನಡೆದಿದೆ. ಇದು ಜಾರಿಯಾದಲ್ಲಿ ಕಾರ್ಮಿಕರ ಬದುಕು ಕಗ್ಗತ್ತಲೆಗೆ ದೂಡಿದಂತಾಗುತ್ತದೆ. ಇದರ ವಿರುದ್ಧ ಹೋರಾಟ ಮಾಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಭಾಗೀಯ ಅಧಿಕಾರಿಗಳಾದ ಬಿ.ಶ್ರೀನಿವಾಸ್, ಎನ್.ರವೀಂದ್ರ ಮಹೇಶ್, ಹೆಚ್.ಟಿ.ವೀರೇಶ್ ತ್ಯಾಪಿ, ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

ತನ್ನ ಪಾಡಿಗೆ ತಾನು ಬೈಕ್‌ನಲ್ಲಿ ಹೋಗುತ್ತಿದ್ದ ವ್ಯಾಪಾರಿ ಮೇಲೆ ಪುಂಡರ ದಾಳಿ

ಮೈಸೂರು ಹೃದಯಭಾಗ ಅರಮನೆ ಬಳಿ ಅಪರಿಚಿತರ ಅಟ್ಟಹಾಸ

ಮೈಸೂರು, ಡಿ.28(ಎಸ್‌ಬಿಡಿ)– ಬೈಕ್‌ನಲ್ಲಿ ತೆರಳುತ್ತಿದ್ದ ವ್ಯಾಪಾರಿಗೆ ರಾಡ್‌ನಿಂದ ಹೊಡೆದು ಕೆಳಗೆ ಬೀಳಿಸಿ, ತೀವ್ರ ಹಲ್ಲೆ ನಡೆಸಿರುವ ಘಟನೆ ಮೈಸೂರಿನ ಆಲ್ಬರ್ಟ್ ವಿಕ್ಟರ್(ಎವಿ) ರಸ್ತೆಯಲ್ಲಿ ನಡೆದಿದೆ.

ನಗರದ ಇಟ್ಟಿಗೆಗೂಡು ನಿವಾಸಿ ಜೀತು ಅವರ ಮೇಲೆ ಗುರುವಾರ ರಾತ್ರಿ 7.45ರ ಸಮಯದಲ್ಲಿ ಹಲ್ಲೆ ನಡೆಸಲಾಗಿದೆ. ಹನುಮಂತರಾವ್ ಸ್ಟ್ರೀಟ್‌ನಲ್ಲಿರುವ ಅಂಗಡಿಯಿಂದ ತಮ್ಮ ಸ್ಟಾರ್ ಸಿಟಿ ಬೈಕ್‌ನಲ್ಲಿ ದೊಡ್ಡಗಡಿಯಾರ ಮಾರ್ಗವಾಗಿ ಎವಿ ರಸ್ತೆಯಲ್ಲಿ ಹೋಗುತ್ತಿದ್ದಾಗ ನಾಲ್ವರು ಅಪರಿಚಿತರು ಅಡ್ಡಗಟ್ಟಿದ್ದಾರೆ. ಭಯದಿಂದ ಜೀತು ಬೈಕ್ ನಿಲ್ಲಿಸದಿದ್ದಾಗ ಏಕಾಏಕಿ ಸ್ಟೀಲ್ ರಾಡ್‌ನಿಂದ ಅವರ ಕಾಲಿಗೆ ಹೊಡೆದಿದ್ದಾರೆ. ಪರಿಣಾಮ ನಿಯಂತ್ರಣ ತಪ್ಪಿ ಕೆಳಗೆ ಬಿದ್ದ ಜೀತು ಮೇಲೆ ಹಲ್ಲೆ ನಡೆಸಿದ್ದಾರೆ. ಇದನ್ನು ಗಮನಿಸಿದ ಸಾರ್ವಜನಿಕರು ಗುಂಪುಗೂಡುತ್ತಿದ್ದಂತೆ ನಾಲ್ವರು ಪರಾರಿಯಾಗಿದ್ದಾರೆ.

ಈ ಸಂಬಂಧ ಜೀತು ನೀಡಿದ ದೂರಿನನ್ವಯ ದೇವರಾಜ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಹಲ್ಲೆ ನಡೆಸಿದವರ ಪತ್ತೆಗೆ ಕ್ರಮ ವಹಿಸಿದ್ದಾರೆ.

ಶ್ರದ್ಧಾಂಜಲಿ ಸಭೆ



ಮೈಸೂರು ದಸರಾ ವಸ್ತುಪ್ರದರ್ಶನ ಆವರಣದ ಪಿ.ಕಾಳಿಂಗರಾವ್ ಬಯಲು ರಂಗಮಂದಿರದಲ್ಲಿ ದಿವಂಗತ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಶ್ರದ್ಧಾಂಜಲಿ ಸಭೆ ನಡೆಯಿತು. ಈ ವೇಳೆ ಮನಮೋಹನ್ ಸಿಂಗ್ ಅವರು ಮೈಸೂರಿಗೆ ನೀಡಿದ ಕೊಡುಗೆ ಬಗ್ಗೆ ವಿಶ್ರಾಂತ ಕುಲಪತಿ ಇಂದುಮತಿ ವಿವರಿಸಿದರು. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ನಗರಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಮಲ್ಲೇಶ್, ರಘು ರಾಜೇ ಅರಸ್, ಫೈರೋಜ್ ಖಾನ್, ಕಾಂಗ್ರೆಸ್ ಮುಖಂಡರಾದ ಶೌಕತ್ ಅಲಿಖಾನ್, ಪದ್ಮನಾಭನ್, ಮಹೇಂದ್ರ ಈಶ್ವರ್ ಚಕ್ಕಡಿ, ಡೈರಿ ವೆಂಕಟೇಶ್, ಕೈಸರ್, ರಂಗಸ್ವಾಮಿ, ಇಂದಿರಾ, ಚಂದ್ರಕಲಾ, ಜಬೀನ್ ತಾಜ್ ಮತ್ತಿತರರು ಉಪಸ್ಥಿತರಿದ್ದರು.

ಅಣ್ಣಾ ವಿವಿ ಲೈಂಗಿಕ ದೌರ್ಜನ್ಯ ಪ್ರಕರಣ
ತನಿಖೆಗೆ ಎಸ್‌ಐಟಿ ರಚನೆ: ಸಂತ್ರಸ್ತೆಗೆ 25 ಲಕ್ಷ ರೂ. ಪರಿಹಾರ ನೀಡಲು ಹೈಕೋರ್ಟ್ ಸೂಚನೆ

ತಮಿಳುನಾಡು, ಡಿ.28– ಚೆನ್ನೈನ ಅಣ್ಣಾ ವಿಶ್ವವಿದ್ಯಾಲಯದ ಆವರಣದಲ್ಲಿ 19 ವರ್ಷದ ವಿದ್ಯಾರ್ಥಿನಿಯ ಮೇಲೆ ನಡೆದಿದ್ದ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ವಿಶೇಷ ತನಿಖಾ ತಂಡ (ಎಸ್‌ಐಟಿ) ತನಿಖೆ ನಡೆಸುವಂತೆ ಮದ್ರಾಸ್ ಹೈಕೋರ್ಟ್ ಶನಿವಾರ ನಿರ್ದೇಶಿಸಿದೆ.

ಪೊಲೀಸ್ ಇಲಾಖೆಗೆ ಸಂಬಂಧಿಸಿದ ಸಾಮಾಜಿಕ ಜಾಲತಾಣದಲ್ಲಿ ಎಫ್‌ಐಆರ್ ವಿವರವನ್ನು ಬಹಿರಂಗಪಡಿಸುವ ಮೂಲಕ ಪೊಲೀಸರು ಎಸಗಿದ ಗಂಭೀರ ಲೋಪಕ್ಕಾಗಿ ಸಂತ್ರಸ್ತೆಗೆ 25 ಲಕ್ಷ ರೂ. ಮಧ್ಯಂತರ ಪರಿಹಾರ ನೀಡುವಂತೆ ರಾಜ್ಯಸರ್ಕಾರಕ್ಕೆ ನ್ಯಾಯಾಲಯ ತಿಳಿಸಿದೆ. ಜತೆಗೆ ಸಂತ್ರಸ್ತೆ ಮತ್ತು ಆಕೆಯ ಕುಟುಂಬಕ್ಕೆ ಸೂಕ್ತ ರಕ್ಷಣೆ ನೀಡುವಂತೆಯೂ ಪೊಲೀಸರಿಗೆ ನ್ಯಾಯಾಲಯ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಎಸ್.ಎಂ. ಸುಬ್ರಮಣ್ಯಂ ಮತ್ತು ವಿ.ಲಕ್ಷ್ಮೀನಾರಾಯಣ್ ಅವರಿದ್ದ ಪೀಠ ತನಿಖೆಯಲ್ಲಿ ಉಂಟಾಗಿರುವ ವಿವಿಧ ಲೋಪಗಳನ್ನು ಪ್ರಸ್ತಾಪಿಸಿ, ಮೂವರು ಮಹಿಳಾ ಐಪಿಎಸ್ ಅಧಿಕಾರಿಗಳನ್ನು ಒಳಗೊಂಡ ಎಸ್‌ಐಟಿ ರಚಿಸುವಂತೆ ಆದೇಶಿಸಿದೆ.

ಎಫ್‌ಐಆರ್‌ನಲ್ಲಿ ಸಂತ್ರಸ್ತ ವಿದ್ಯಾರ್ಥಿನಿಯ ವಿವರಗಳನ್ನು ಬಹಿರಂಗಪಡಿಸಿ, ಆಕೆಗೆ ಅವಮಾನ ಉಂಟು ಮಾಡಿರುವುದು ದುರದೃಷ್ಟಕರ. ಇದು ಆಕೆಯನ್ನು ಇನ್ನಷ್ಟು ಮಾನಸಿಕ ಸಂಕಟಕ್ಕೆ ದೂಡಿತು. ಮಹಿಳೆಯರನ್ನು ರಕ್ಷಿಸುವುದು ರಾಜ್ಯ ಮತ್ತು ಸಮಾಜದ ಆದ್ಯ ಕರ್ತವ್ಯವಾಗಿದೆ. ಎಫ್‌ಐಆರ್ ಸೋರಿಕೆ ಸಂತ್ರಸ್ತೆಯ ಘನತೆಯ ಹಕ್ಕನ್ನು ಮತ್ತು ದೈಹಿಕ ಸ್ವಾಯತ್ತತೆಯ ಹಕ್ಕಿನ ಉಲ್ಲಂಘನೆಯಾಗಿದೆ. ಪ್ರಸ್ತುತ ಪ್ರಕರಣದಲ್ಲಿ, ಸಂವಿಧಾನದ 21ನೇ ವಿಧಿಯಡಿ ಸಂತ್ರಸ್ತೆಯ ಹಕ್ಕನ್ನು ಉಲ್ಲಂಘಿಸಲಾಗಿದೆ ಎಂದ ಪೀಠ, ಪರಿಹಾರ ನೀಡುವಂತೆ ಆದೇಶಿಸಿತು.

ಸಂತ್ರಸ್ತೆಯನ್ನು ದೂಷಿಸುವುದು ಸ್ತ್ರೀ ದ್ವೇಷ: ಸಂತ್ರಸ್ತೆಯನ್ನು ದೂಷಿಸುವುದು ಅಥವಾ ನಾಚಿಕೆಪಡುವಂತೆ ಮಾಡಿರುವುದು ಸ್ತ್ರೀ ದ್ವೇಷ ಎಂದಿರುವ ನ್ಯಾಯಾಲಯ, ಸಂವಿಧಾನಕ್ಕೆ ಪುರುಷ ಅಥವಾ ಮಹಿಳೆ ಎಂಬ ವ್ಯತ್ಯಾಸವಿಲ್ಲ. ಸಮಾಜ ಮಹಿಳೆಯರನ್ನು ಕೀಳಾಗಿ ಕಾಣುವುದಕ್ಕೆ ನಾಚಿಕೆಪಡಬೇಕು ಎಂದಿತು. ಇದೇ ವೇಳೆ ಮಹಿಳೆ ಯಾಕೆ ಸ್ವತಂತ್ರವಾಗಿ ನಡೆಯಲು ಸಾಧ್ಯವಿಲ್ಲ. ಅವಳು ಬಯಸಿದ ರೀತಿಯಲ್ಲಿ ಉಡುಗೆ ತೊಡಲು ಅಥವಾ ಪುರುಷನೊಂದಿಗೆ ಮಾತನಾಡಲು ಯಾಕೆ ಸಾಧ್ಯವಿಲ್ಲ ಎಂದು ಪೀಠ ಪ್ರಶ್ನಿಸಿತು.

ಎಫ್‌ಐಆರ್‌ನಲ್ಲಿ 19 ವರ್ಷದ ಸಂತ್ರಸ್ತೆಯನ್ನೇ ದೂಷಿಸಿರುವುದನ್ನು ನ್ಯಾಯಾಲಯ ಗಂಭೀರವಾಗಿ ಪರಿಗಣಿಸಿದೆ. ಎಫ್‌ಐಆರ್‌ನ ಶೋಚನೀಯ ಭಾಷೆ ಸಂತ್ರಸ್ತರನ್ನು ದೂಷಿಸಲು ದಾರಿ ಮಾಡಿಕೊಡುತ್ತದೆ. ಇದು ಆಘಾತಕಾರಿ ಎಂದು ನ್ಯಾಯಪೀಠ ವಿಚಾರಣೆಯ ಸಂದರ್ಭದಲ್ಲಿ ಅಡ್ವೊಕೇಟ್ ಜನರಲ್ ಪಿ.ಎಸ್. ರಾಮನ್ ಅವರನ್ನು ಉದ್ದೇಶಿಸಿ ಹೇಳಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವಯಂಪ್ರೇರಿತವಾಗಿ ಮೊಕದ್ದಮೆ ದಾಖಲಿಸಿಕೊಂಡಿದ್ದ ನ್ಯಾಯಾಲಯ, ವಿದ್ಯಾರ್ಥಿನಿಯ ಗುರುತಿನ ವಿವರಗಳನ್ನು ಸೋರಿಕೆ ಮಾಡಿದ್ದಕ್ಕಾಗಿ ಚೆನ್ನೈ ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿತು.

ಕೆಆರ್‌ಎಸ್‌ನಲ್ಲಿ ಸಂಗೀತ ಕಾರಂಜಿ ಬಂದ್: ಪ್ರವಾಸಿಗರು-ಸಿಬ್ಬಂದಿ ನಡುವೆ ವಾಗ್ವಾದ

ಮಾಜಿ ಪ್ರಧಾನಿ ಡಾ. ಮನಮೋಹನ್‌ಸಿಂಗ್ ನಿಧನದ ಹಿನ್ನೆಲೆಯಲ್ಲಿ ಮನೋರಂಜನಾ ಕಾರ್ಯಕ್ರಮ ರದ್ದು

ಸಂಗೀತ ಕಾರಂಜಿ ವೀಕ್ಷಿಸಲು ಕಾದು ಕುಳಿತ ಪ್ರವಾಸಿಗರು ಮುನ್ನವೇ ಮಾಹಿತಿ ನೀಡದ ಅಧಿಕಾರಿಗಳ ವಿರುದ್ಧ ಆಕ್ರೋಶ

ಮೈಸೂರು, ಡಿ.28(ಎಂಟಿವೈ)– ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ನಿಧನದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಶೋಕಾಚರಣೆ ಜಾರಿಯಲ್ಲಿರುವುದರಿಂದ ಕೆಆರ್‌ಎಸ್‌ನಲ್ಲಿ ಸಂಗೀತ ಕಾರಂಜಿ ಸ್ಥಗಿತಗೊಳಿಸಿರುವ ಮಾಹಿತಿ ಅರಿಯದೆ ಪ್ರವಾಸಿಗರು ಶನಿವಾರ ಕೆಆರ್‌ಎಸ್‌ಗೆ ಆಗಮಿಸಿದ್ದು, ಇದರಿಂದ ಅರಣ್ಯ ಸಿಬ್ಬಂದಿಗಳ ಜೊತೆ ಮಾತಿನ ಚಕಮಕಿ ನಡೆಸಿದರು.



ಕೆಆರ್‌ಎಸ್ ಉದ್ಯಾನವನದ ಸಂಗೀತ ಕಾರಂಜಿ ಬಳಿ ಕಾದು ಕುಳಿತಿರುವ ಪ್ರವಾಸಿಗರು.

ರಾಜ್ಯದಲ್ಲಿ 7 ದಿನ ಶೋಕಾಚರಣೆ ಘೋಷಿಸಿರುವ ಹಿನ್ನೆಲೆಯಲ್ಲಿ ಸರ್ಕಾರದ ವತಿಯಿಂದ ನಡೆಯುವ ಮನರಂಜನಾ ಕಾರ್ಯಕ್ರಮ ರದ್ದು ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಕೆಆರ್‌ಎಸ್‌ನಲ್ಲಿ ಸಂಜೆ ವೇಳೆ ನಡೆಸುತ್ತಿದ್ದ ಸಂಗೀತ ಕಾರಂಜಿ ಕಾರ್ಯಕ್ರಮವನ್ನು ಶೋಕಾಚರಣೆ ಅಂಗವಾಗಿ ರದ್ದು ಮಾಡಲಾಗಿತ್ತು. ಸಂಗೀತ ಕಾರಂಜಿ ರದ್ದಾಗಿರುವ ವಿಷಯ ಅರಿಯದೇ ಇಂದು ಸಂಜೆ ವಿವಿಧೆಡೆಯಿಂದ ಕೆಆರ್‌ಎಸ್ ಉದ್ಯಾನ ವೀಕ್ಷಣೆಗೆ ಬಂದ ನೂರಾರು ಪ್ರವಾಸಿಗರು ಸಂಗೀತ ಕಾರಂಜಿಯ ನೃತ್ಯದ ಸೊಬಗನ್ನು ಕಣ್ತುಂಬಿಕೊಳ್ಳಲು ಆಗಮಿಸಿ, ಆಸನಗಳಲ್ಲಿ ಕಾದು ಕುಳಿತಿದ್ದರು.

ಅರ್ಧ ಗಂಟೆಗೂ ಹೆಚ್ಚು ಸಮಯ ಕಾದರೂ ಸಂಗೀತ ಕಾರಂಜಿ ಸುತ್ತಲಿನ ಮೆಟ್ಟಿಲುಗಳ ಮೇಲೆ ಕುಳಿತಿದ್ದ ಪ್ರವಾಸಿಗರು ಸಂಗೀತ ಕಾರಂಜಿ ಆನ್ ಮಾಡದೇ ಇರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು. ಸ್ಥಳಕ್ಕೆ ಬಂದ ಉದ್ಯಾನವನದ ಸಿಬ್ಬಂದಿಯೊಬ್ಬರು ಡಾ.ಮನಮೋಹನ್ ಸಿಂಗ್ ಅವರ ಗೌರವಾರ್ಥ ಸಂಗೀತ ಕಾರಂಜಿ ರದ್ದು ಮಾಡಿರುವುದಾಗಿ ತಿಳಿಸಿದರು.

ಇದರಿಂದ ಆಕ್ರೋಶಗೊಂಡ ಪ್ರವಾಸಿಗರು ಶೋಕಾಚರಣೆಗಾಗಿ ಸಂಗೀತ ಕಾರಂಜಿ ರದ್ದುಗೊಳಿಸಿರುವ ಮಾಹಿತಿ ಮೊದಲೇ ನೀಡಿದ್ದರೆ ನಾವು ವಾಪಸ್ಸಾಗುತ್ತಿದ್ದೆವು. ಆದರೆ, ಯಾವುದೇ ಮಾಹಿತಿ ನೀಡದೆ ಪ್ರವಾಸಿಗರಿಗೆ ತೊಂದರೆ ನೀಡಿದ್ದೀರಿ. ಸಂಗೀತ ಕಾರಂಜಿ ವೀಕ್ಷಿಸಲು ದೂರದ ಊರುಗಳಿಂದ ಬಂದು ಕಾದು ಕುಳಿತಿದ್ದೇವೆ. ಮೊದಲೇ ಹೇಳಿದ್ದರೆ ನಮ್ಮ ಊರುಗಳಿಗೆ ವಾಪಸುಗುತ್ತಿದ್ದೆವು ಎಂದು ಅಸಮಾಧಾನ ಹೊರ ಹಾಕಿದರು.

> ಮಕ್ಕಳನ್ನು ಬೆಂಗಳೂರಿನಿಂದ ಕೆಆರ್‌ಎಸ್ ಉದ್ಯಾನವನಕ್ಕೆ ಕರೆದುಕೊಂಡು ಬಂದಿದ್ದೆ. ಸಂಗೀತ ಕಾರಂಜಿ ತೋರಿಸುವ ಸಲುವಾಗಿಯೇ ಸಂಜೆ ಕೆಆರ್‌ಎಸ್‌ಗೆ ಆಗಮಿಸಿದ್ದೆ. ಉದ್ಯಾನವನ ತೋರಿಸಿದ ನಂತರ ಮೊದಲ ಶೋನಲ್ಲಿ ಮಕ್ಕಳಿಗೆ ನೃತ್ಯ ಕಾರಂಜಿ ತೋರಿಸಿ ವಾಪಸ್ಸು ಕರೆದುಕೊಂಡು ಹೋಗಬೇಕೆಂದುಕೊಂಡಿದ್ದೆ. ಸಂಗೀತ ಕಾರಂಜಿ ಸ್ಥಳದಲ್ಲಿ ಅರ್ಧ ಗಂಟೆ ಕಾದು ಕುಳಿತಿದ್ದ ನಂತರ ಶೋಕಾಚರಣೆ ಹಿನ್ನೆಲೆಯಲ್ಲಿ ಸಂಗೀತ ಕಾರಂಜಿ ರದ್ದಾಗಿರುವುದು ತಿಳಿಯಿತು. ಸಿಬ್ಬಂದಿಗಳು ಮೊದಲೇ ಮಾಹಿತಿ ನೀಡಿದ್ದರೆ ಕಾಯುವ ಪ್ರಮೇಯ ಉದ್ಭವಿಸುತ್ತಿರಲಿಲ್ಲ.
> – ಜಿ.ಶಶಿಧರ್, ಬೆಂಗಳೂರು

ಕುವೆಂಪು ಕೃತಿ, ಪ್ರತಿ ಮಾತು 'ವಿಶ್ವ ಮಾನವ ಸಂದೇಶ' ಒಳಗೊಂಡಿದ್ದವು

• ಹಿರಿಯ ಸಾಹಿತಿ ಡಾ.ಸಿಪಿಕೆ ಅಭಿಮತ • ಕುವೆಂಪು ಸಾಂಸ್ಕೃತಿಕ ನಾಯಕರಾದರೆ; ಸಿ.ಅಶ್ವಥ್ ಸಾಂಸ್ಕೃತಿಕ ಗಾಯಕರು • ಈ ಇಬ್ಬರು ಮಹನೀಯರ ಜಯಂತಿ ಪ್ರಯುಕ್ತ 'ಗೀತ ನಮನ'



ರಾಷ್ಟ್ರಕವಿ ಕುವೆಂಪು ಹಾಗೂ ಗಾಯಕ ಡಾ.ಸಿ.ಅಶ್ವಥ್ ಜಯಂತಿ ಅಂಗವಾಗಿ ಪ್ರಸ್ತುತ ಪಡಿಸಿದ 'ಗೀತ ನಮನ' ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ.ಸಿಪಿಕೆ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಡಿ.28(ಎಸ್‌ಪಿಎನ್)– ರಾಷ್ಟ್ರಕವಿ ಕುವೆಂಪು ಅವರು ಪ್ರಾದೇಶಿಕ ವಿಷಯಗಳಿಂದ ವಿಶ್ವ ಮಾನವ ಸಂದೇಶ ನೀಡುವುದು ಅವರ ಬರವಣಿಗೆಯ ಉದ್ದೇಶವಾಗಿತ್ತು ಎಂದು ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾಭವನದಲ್ಲಿ ಕರ್ನಾಟಕ ಸುಗಮ ಸಂಗೀತ ಪರಿಷತ್ ಮೈಸೂರು ಜಿಲ್ಲಾ ಘಟಕದ ವತಿಯಿಂದ ರಾಷ್ಟ್ರಕವಿ ಕುವೆಂಪು ಹಾಗೂ ಗಾಯಕ ಡಾ.ಸಿ.ಅಶ್ವಥ್ ಜಯಂತಿ ಅಂಗವಾಗಿ ಪ್ರಸ್ತುತ ಪಡಿಸಿದ 'ಗೀತ ನಮನ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಅವರು ರಚಿಸಿದ ಕಾದಂಬರಿಗಳಾದ 'ಮಲೆಗಳಲ್ಲಿ ಮದುಮಗಳು', 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಸೇರಿದಂತೆ ಇತರೆ ಕಾದಂಬರಿಗಳಲ್ಲಿನ ವಿಷಯ ಸ್ಥಳೀಯವೇ ಆದರೂ ಅದರಲ್ಲಿರುವ ಸಂದೇಶ ಮತ್ತು ಪಾತ್ರಗಳು ವಿಶ್ವ ಮಾನವ ಸಂದೇಶಗಳಾಗಿ ಹೊರಹೊಮ್ಮಿದೆ. 12ನೇ ಶತಮಾನದ ಭಕ್ತಿ ಭಂಡಾರಿ ಬಸವಣ್ಣ ಆ ಕಾಲಕ್ಕೆ ಸಾಂಸ್ಕೃತಿಕ ನಾಯಕನಾಗಿ ಹೊರಹೊಮ್ಮಿದರೆ, 19ನೇ ಶತಮಾನದಲ್ಲಿ ರಾಷ್ಟ್ರಕವಿ ಕುವೆಂಪು ಸಾಂಸ್ಕೃತಿಕ ಜಗತ್ತಿನ ಶಕಪುರುಷ, ಸಾಂಸ್ಕೃತಿಕ ನಾಯಕನಾಗಿಯೂ ಹೊರಹೊಮ್ಮಿದ್ದಾರೆ. ಅವರ ಯೋಚನೆಗಳು, ಆಲೋಚನೆಗಳೆಲ್ಲವು ವಿಶ್ವ ಮಾನವ ಸಂದೇಶಗಳಾಗಿದ್ದವು ಎಂದು ಹಲವು ವಿದ್ವಾಂಸರ ವಿಮರ್ಶೆಯಲ್ಲಿ ಅಭಿವ್ಯಕ್ತಿಗೊಂಡಿವೆ ಎಂದು ಅಭಿಪ್ರಾಯಪಟ್ಟರು.

ಬಸವಣ್ಣನವರ ನಂತರ ಕುವೆಂಪು ಅವರು ಸಾಂಸ್ಕೃತಿಕ ನಾಯಕರಾದರೆ ಸಿ. ಅಶ್ವತ್ಥ್ ಸಾಂಸ್ಕೃತಿಕ ಗಾಯಕರಾಗಿ ಗುರುತಿಸಬಹುದು. ಕುವೆಂಪು ಉತ್ತರಾರ್ಧದಲ್ಲಿ ವಿಶ್ವಮಾನವ ಸಂದೇಶ ಪ್ರಚಾರದ ವ್ರತದಂತೆ ಕೈಗೊಂಡಿದ್ದರು. ಯಾರೇ ಕಾರ್ಯಕ್ರಮಕ್ಕೆ ಕರೆಯಲು ಹೋದರೂ ಆ ಪ್ರತಿನಿಧಿಗಳಿಗೆ ವಿಶ್ವಮಾನವ ಸಂದೇಶದ ಪ್ರತಿಗಳನ್ನು ಮುದ್ರಿಸಿ, ಹಂಚಿ ಎಂದು ಸಲಹೆ ನೀಡುತ್ತಿದ್ದರು. ಅಲ್ಲದೇ ತಮ್ಮ ಪಕ್ಕದಲ್ಲಿಯೂ ಪ್ರತಿಗಳನ್ನಿಟ್ಟುಕೊಂಡು ಬಂದವರಿಗೆಲ್ಲಾ ಕೊಡುತ್ತಿದ್ದನ್ನು ಸ್ಮರಿಸಿದರು.

ಕುವೆಂಪು ಕನ್ನಡದ ಜೊತೆ ಜೊತೆಗೆ ಅದಕ್ಕಿಂತಲೂ ವಿಶ್ವಮಾನವ ಸಂದೇಶಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು. ಅವರ ಆತ್ಮಕಥೆ, ಪಲ್ಲವಿ ಎಲ್ಲವೂ ವಿಶ್ವಮಾನವ ಸಂದೇಶವೇ ಆಗಿತ್ತು. ಜಾತಿ, ಮತ ನಿವಾರಣೆಯಾಗದೇ ಸಮಾಜ ಪರಿವರ್ತನೆ ಅಸಾಧ್ಯ ಎಂಬುದು ಅವರ ವಾದವಾಗಿತ್ತು. ಅವರ ಮಾತಿನಲ್ಲಿ ವಿಶ್ವಮಾನವ ಸಂದೇಶ ಸ್ಥಾಯಿಯಾಗಿತ್ತು ಉಳಿದೆಲ್ಲವೂ ಸಂಚಾರಿಯಾಗಿದ್ದವು ಎಂದರು.

ಒಮ್ಮೆ ಕುವೆಂಪು ಅವರು ಅನಿಕೇತನ ಕವನದ ಬಗ್ಗೆ ಯಾರೋ ಒಬ್ಬರಿಗೆ ಹೇಳಿದಾಗ ಅರ್ಥವಾಗದಂತೆ ನಟಿಸಿದರು. ಆಗ ಕುವೆಂಪು ಅವರು ಜ್ಞಾನಪೂರ್ವ ಮೌಢ್ಯ, ಜ್ಞಾನೋತ್ತರ ಮೌಢ್ಯ– ಎರಡೂ ಅಪಾಯಕಾರಿ ಎಂದು ಪರಿಭಾವಿಸಿದ್ದ ಪ್ರಸಂಗವನ್ನು ವಿವರಿಸಿದರಲ್ಲದೆ, ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ಬಂದಾಗ ಈ ಪ್ರಶಸ್ತಿ ನನಗೆ ಅಗತ್ಯವಿಲ್ಲ. ಆದರೆ, ಪ್ರಶಸ್ತಿ ವಿಶ್ವ ಮಾನವ ಸಂದೇಶ ಸಾರಲು ಉಪಯೋಗವಾಗಬಹುದು. ಆದರೆ, ಸಾಧನೆಗೆ ಪ್ರಶಸ್ತಿಗಳೇ ಮಾನದಂಡವಲ್ಲ ಎಂದು ಅಭಿಪ್ರಾಯ ಹೊಂದಿದ್ದ ಪ್ರಸಂಗ ವಿವರಿಸಿದರು.

ಈ ವೇಳೆ ಕುವೆಂಪು ರಚಿತ 'ಎಲ್ಲಾದರೂ ಇರು ಎಂತಾದರು ಇರು', 'ಜಯ ಭಾರತ ತನುಜಾತೆ, ಜಯಹೇ ಕರ್ನಾಟಕ ಮಾತೆ', 'ಓ ನನ್ನ ಚೇತನ', 'ನೇಗಿಲ ಹಿಡಿದ ಹೊಲದೊಳು ಹಾಡುತ', 'ಮುಚ್ಚುಮರೆ ಇಲ್ಲದೆ', 'ನಿನ್ನ ಬಾಂದಳದಂತೆ', 'ಅಂತರ ತಮ ನೀ ಗುರು', 'ಓಂ ಸಚ್ಚಿದಾನಂದ', 'ಯಾವ ಜನುಮದ ಮೈತ್ರಿ', ಜಿ.ಎಸ್.ಶಿವರುದ್ರಪ್ಪ ರಚಿತ ಕಾಣದ ಕಡಲಿಗೆ, ಎಲ್ಲೋ ಹುಡುಕಿದೆ, ಸಂತ ಶಿಶುನಾಳ ಷರೀಫ್ ರಚಿತ 'ತರವಲ್ಲ ತಗಿ ನಿನ್ನ ತಂಬೂರಿ', 'ಸೋರುತಿಹುದು ಮನೆಯ ಮಾಳಿಗೆ', 'ಕೊಡಗನ ಕೋಳಿ ನುಂಗಿತ್ತಾ', ಡಾ.ಎನ್.ಎಸ್.ಲಕ್ಷ್ಮಿನಾರಾಯಣ ಭಟ್ ರಚಿತ 'ನಿನ್ನೊಲುಮೆಯಿಂದಲೇ ಬಾಳು ಬೆಳಗಿರಲು', ಕೆ.ಎಸ್.ನರಸಿಂಹಸ್ವಾಮಿ ರಚಿತ 'ಸಿರಿಗೆರೆಯ ನೀರಲ್ಲಿ ಬಿರಿದ ತಾವರೆಯಲಿ', 'ದೀಪವೂ ನಿನ್ನದೇ', 'ನಿನ್ನ ಪ್ರೇಮದ ಪರಿಯ', ಚಂಪಾ ರಚನೆಯ 'ಎಲ್ಲೋ ಹುಟ್ಟಿ ಎಲ್ಲೋ ಬೆಳೆದು', ದರಾ.ಬೇಂದ್ರೆ ರಚಿತ 'ಮುಗಿಲ ಮಾರಿಗೆ ರಾಗರತಿಯ', 'ಮೋಹದ ಹೆಂಡತಿ', 'ಒಳಿತು ಮಾಡು ಮನುಸಾ' ಸೇರಿದಂತೆ ಇತರೆ ಕವಿಗಳ ಕವಿತೆಗಳನ್ನು ಹಾಡಿ ಪ್ರೇಕ್ಷಕರ ರಂಜಿಸಿದರು.

ಈ ಕಾರ್ಯಕ್ರಮದಲ್ಲಿ ಗಾಯಕರಾದ ಡಾ.ಎ.ಡಿ.ಶ್ರೀನಿವಾಸನ್, ಹಂಸಿನಿ, ನಾಗಲಕ್ಷ್ಮಿ, ಎನ್.ಬೆಟ್ಟೇಗೌಡ, ಡೇವಿಡ್, ಶ್ರೀಧರ್, ಪಡಿಯಾರ್ ಹಾಡಿದರು. ವಿದ್ವಾನ್ ಷಣ್ಮುಖ ಸಜ್ಜ ಕೀ ಬೋರ್ಡ್, ವಿದ್ವಾನ್ ವಿಶ್ವನಾಥ್ ಮ್ಯಾಂಡೋಲಿನ್, ವಿದ್ವಾನ್ ರಘು ತಬಲ, ವಿದ್ವಾನ್ ಇಂದುಶೇಖರ್ ತಬಲ, ವಿದ್ವಾನ್ ವಿನಯ್ ರಂಗದೊಳ್ ರಿದಂ ಪ್ಯಾಡ್ ಪಕ್ಕವಾದ್ಯ ನುಡಿಸಿದರು. ಈ ವೇಳೆ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಡಾ.ನಾಗರಾಜ ವಿ.ಬೈರಿ, ಎನ್.ಗಂಗಾಧರಪ್ಪ ಹಿರಿಯ ಸಾಹಿತಿ ಜಯಪ್ಪ ಹೊನ್ನಾಳಿ (ಜಯಕವಿ), ಕಸಾಪ ಮಾಜಿ ಜಿಲ್ಲಾಧ್ಯಕ್ಷ ಡಾ.ವೈ.ಡಿ.ರಾಜಣ್ಣ, ನಗರ ಪಾಲಿಕೆ ಮಾಜಿ ಸದಸ್ಯ ಪಾರ್ಥಸಾರಥಿ(ಪಾತಿ), ಹಿರಿಯ ಕಲಾವಿದೆ ಸುಮಾ, ಸಿರಿಬಾಬು, ಎನ್.ಬೆಟ್ಟೇಗೌಡ ಸೇರಿದಂತೆ ಉಪಸ್ಥಿತರಿದ್ದರು.

> ಇತ್ತೀಚಿನ ದಿನಗಳಲ್ಲಿ ದೇವರ ಉತ್ಸವ, ಜಾತ್ರೆ ಮೆರವಣಿಗೆ ಸೇರಿದಂತೆ ಯಾವುದೇ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಯುವಕರಲ್ಲಿ ಡಿಜೆ ಪ್ರವೃತ್ತಿ ಹೆಚ್ಚಾಗುತ್ತಿದೆ. ಇದು ನಮ್ಮ ಸಂಸ್ಕೃತಿ ಭಾಗ ಅಲ್ಲ. ಇಂತಹ ಅಭಿರುಚಿ ಯುವಕರ ಮನಸ್ಸಿನಿಂದ ಹೋಗಬೇಕು. ನಿಜವಾದ ಸಂಗೀತ ಆಲಿಸುವ ಕಡೆಗೆ ನಾವು–ನೀವು ಗಮನ ನೀಡಬೇಕು. ಅಲ್ಲದೆ ಶಿಕ್ಷಣ ಸಂಸ್ಥೆಗಳಲ್ಲೂ ವಿದ್ಯಾರ್ಥಿಗಳಿಗೆ ಕಲಿಸುವ, ಕೇಳಿಸುವ ಕೆಲಸ ಆಗಬೇಕು
> – ವಿ. ಕವೀಶ್ ಗೌಡ, ಕಾರ್ಯದರ್ಶಿ ವಿದ್ಯಾವಿಕಾಸ ಸಂಸ್ಥೆ ಹಾಗೂ ಬಿಜೆಪಿ ಮುಖಂಡರು

ನಟಿ ಊರ್ಮಿಳಾ ಕಾರು ಡಿಕ್ಕಿ: ಮೆಟ್ರೋ ಕಾರ್ಮಿಕ ಸಾವು



ಮುಂಬೈ ಡಿ.28– ಮರಾಠಿ ನಟಿ ಊರ್ಮಿಳಾ ಕೊಠಾರೆ ಅವರ ಕಾರು ಡಿಕ್ಕಿ ಹೊಡೆದ ಪರಿಣಾಮ ಮೆಟ್ರೋ ಕಾರ್ಮಿಕರೊಬ್ಬನ ಸಾವನ್ನಪ್ಪಿರುವ ಘಟನೆ ಮುಂಬೈನ ಕಂಡಿವಲಿ ಪ್ರದೇಶದಲ್ಲಿ ಶನಿವಾರ ಮುಂಜಾನೆ ನಡೆದಿದೆ. ಅಪಘಾತದಲ್ಲಿ ಮತ್ತೊಬ್ಬ ಕಾರ್ಮಿಕ ಗಂಭೀರವಾಗಿ ಗಾಯಗೊಂಡಿದ್ದಾರೆ. ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಟಿ ಊರ್ಮಿಳಾ ಕೊಠಾರೆ ಶೂಟಿಂಗ್ ಮುಗಿಸಿ ಮನೆಗೆ ಮರಳುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಸಮತಾ ನಗರ ಪೊಲೀಸ್ ಠಾಣೆಯ ಅಧಿಕಾರಿ ಪ್ರಕಾರ, ಮಧ್ಯರಾತ್ರಿಯ ನಂತರ ಕಾಂದಿವಲಿ ಪೂರ್ವ ಪ್ರದೇಶದ ಪೊಯಿಸರ್ ಮೆಟ್ರೋ ನಿಲ್ದಾಣದ ಅಡಿಯಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಕಾರ್ಮಿಕರಿಗೆ ನಟಿ ಕೊಠಾರೆ ಅವರ ಕಾರು ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಓರ್ವ ಕಾರ್ಮಿಕ ಸಾವನ್ನಪ್ಪಿದ್ದು, ಮತ್ತೋರ್ವ ಕಾರ್ಮಿಕ ಗಂಭೀರವಾಗಿ ಗಾಯಗೊಂಡಿದ್ದಾನೆ ಘಟನೆಯಲ್ಲಿ ನಟಿ ಹಾಗೂ ಆಕೆಯ ಚಾಲಕ ಕೂಡ ಗಾಯಗೊಂಡಿದ್ದಾರೆ. ಆದರೆ, ಸರಿಯಾದ ಸಮಯಕ್ಕೆ ಏರ್‌ಬ್ಯಾಗ್ ಓಪನ್ ಆಗಿದ್ದರಿಂದ ನಟಿ ಹಾಗೂ ಚಾಲಕನ ಜೀವ ಉಳಿದಿದೆ. ಚಾಲಕನ ನಿಯಂತ್ರಣ ತಪ್ಪಿ ಕಾರು ರಸ್ತೆಬದಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಿಗೆ ಡಿಕ್ಕಿ ಹೊಡೆದಿದೆ. ಈ ಸಂಬಂಧ ಪೊಲೀಸರು ಕಾರು ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ನಟಿ ಊರ್ಮಿಳಾ ಕೊಠಾರೆ ಮರಾಠಿಯಲ್ಲಿ ದುನಿಯಾದಾರಿ ಮತ್ತು ಹಿಂದಿಯಲ್ಲಿ ಥ್ಯಾಂಕ್ ಗಾಡ್ ಸೇರಿದಂತೆ ಕೆಲವು ಚಿತ್ರಗಳಲ್ಲಿ ನಟಿಸಿದ್ದಾರೆ

ಬಾರ್ಡರ್-ಗವಾಸ್ಕರ್ ಟ್ರೋಫಿ

ಭಾರತಕ್ಕೆ ನಿತೀಶ್ ರೆಡ್ಡಿ ಆಸರೆ, ಫಾಲೋಆನ್‌ನಿಂದ ಪಾರು



ಮೆಲ್ಬೋರ್ನ್, ಡಿ.28– ನಿತೀಶ್ ಕುಮಾರ್ ರೆಡ್ಡಿ ಅವರ ಚೊಚ್ಚಲ ಶತಕ ಹಾಗೂ ವಾಷಿಂಗ್ಟನ್ ಸುಂದರ್ ಅವರ ಅರ್ಧಶತಕದ ನೆರವಿನಿಂದ ಭಾರತ ಆಸ್ಟ್ರೇಲಿಯಾ ವಿರುದ್ಧ ಬಾಕ್ಸಿಂಗ್ ಡೇ ಟೆಸ್ಟ್‌ನ ಮೂರನೇ ದಿನದ ಅಂತ್ಯಕ್ಕೆ 9 ವಿಕೆಟ್ ನಷ್ಟಕ್ಕೆ 358 ರನ್ ಗಳಿಸಿದ್ದು, ಫಾಲೋ ಆನ್‌ನಿಂದ ಪಾರಾಗಿದೆ. ಅಲ್ಲದೇ ಮೊದಲ ಇನ್ನಿಂಗ್ಸ್‌ನಲ್ಲಿ ಮುನ್ನಡೆ ಸಾಧಿಸಲು 116 ರನ್ ಗಳಿಸಬೇಕಿದೆ.

ಮೊದಲ ಇನ್ನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ 474 ರನ್ ಗಳಿಸಿತ್ತು. ನಂತರ ಮೊದಲ ಇನ್ನಿಂಗ್ಸ್ ಆರಂಭಿಸಿದ ಭಾರತ 2ನೇ ದಿನದ ಅಂತ್ಯಕ್ಕೆ 165 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿದ್ದ ಭಾರತ ಇಂದು ಬಹುಬೇಗ 28 ರನ್ ಗಳಿಸಿದ್ದ ರಿಷಬ್ ಪಂತ್ ಹಾಗೂ 17 ರನ್ ಗಳಿಸಿದ್ದ ರವೀಂದ್ರ ಜಡೇಜಾ ವಿಕೆಟ್ ಕಳೆದುಕೊಂಡು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಜೊತೆಯಾದ ನಿತೀಶ್ ಕುಮಾರ್ ರೆಡ್ಡಿ ಮತ್ತು ವಾಷಿಂಗ್ಟನ್ ಸುಂದರ್ ಆಸೀಸ್ ವೇಗ ಮತ್ತು ಸ್ಪಿನ್ ಎಸೆತಗಳನ್ನು ಸಮರ್ಥವಾಗಿ ನಿಭಾಯಿಸಿ 127 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡವನ್ನು ಫಾಲೋಆನ್‌ನಿಂದ ಪಾರು ಮಾಡಿದರು. ಆ ಮೂಲಕ ಇವರಿಬ್ಬರ ತಾಳ್ಮೆಯ ಮತ್ತು ಹೊಂದಾಣಿಕೆಯ ಆಟಕ್ಕೆ ಭಾರಿ ಪ್ರಶಂಸೆ ವ್ಯಕ್ತವಾಯಿತು.

ಪಂದ್ಯದಲ್ಲಿ ಸಮಯೋಚಿತ ಆಟವಾಡಿದ ನಿತೀಶ್ ಕುಮಾರ್ ರೆಡ್ಡಿ ಚೊಚ್ಚಲ ಶತಕ ಸಿಡಿಸಿ ಸಂಭ್ರಮಿಸಿದರೇ, ವಾಷಿಂಗ್ಟನ್ ಸುಂದರ್ ಅರ್ಧಶತಕ ಸಿಡಿಸಿ ಔಟಾದರು. ಬಂದಷ್ಟೇ ವೇಗವಾಗಿ ಜಸ್‌ಪ್ರೀತ್ ಬುಮ್ರಾ ಕೂಡ ಶೂನ್ಯಕ್ಕೆ ನಿರ್ಗಮಿಸಿದರು. ಮಹಮದ್ ಸಿರಾಜ್ ಕ್ರೀಸ್‌ಗೆ ಬಂದ ಕೆಲವೇ ಕ್ಷಣಗಳಲ್ಲಿ ಮೈದಾನದಲ್ಲಿ ಮೋಡ ಕವಿದು ಮಂದ ಬೆಳಕು ಉಂಟಾಯಿತು. ಈ ವೇಳೆ ಅಂಪೈರ್‌ಗಳು ಆಟ ಸ್ಥಗಿತಗೊಳಿಸಿದರು. ಇದೇ ವೇಳೆ ಮಳೆ ಆರಂಭವಾದ್ದರಿಂದ ಅಂಪೈರ್‌ಗಳು ದಿನದಾಟ ಅಂತ್ಯಗೊಳಿಸಿದರು. ನಿತೀಶ್ ಕುಮಾರ್ ರೆಡ್ಡಿ 176 ಎಸೆತಗಳಲ್ಲಿ 1 ಸಿಕ್ಸರ್, 10 ಬೌಂಡರಿ ಒಳಗೊಂಡ 105 ರನ್, ಮೊಹಮ್ಮದ್ ಸಿರಾಜ್ 2 ರನ್ ಗಳಿಸಿ 4ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಆಸ್ಟ್ರೇಲಿಯಾ ಪರ ನಾಯಕ ಪ್ಯಾಟ್ ಕಮಿನ್ಸ್ ಮತ್ತು ಬೋಲ್ಯಾಂಡ್ ತಲಾ 3, ನಾಥನ್ ಲೈಯಾನ್ 2 ವಿಕೆಟ್ ಪಡೆದಿದ್ದಾರೆ.

ರೆಡ್ಡಿಗೆ 25 ಲಕ್ಷ ಬಹುಮಾನ

ನವದೆಹಲಿ: ಆಸ್ಟ್ರೇಲಿಯಾ ವಿರುದ್ಧದ ಬಾಕ್ಸಿಂಗ್ ಡೇ ಟೆಸ್ಟ್‌ನಲ್ಲಿ ಅಮೋಘ ಶತಕ ಸಿಡಿಸುವ ಮೂಲಕ ಭಾರತದ ಹೋರಾಟಕ್ಕೆ ಬಲ ತುಂಬಿದ ನಿತೀಶ್ ಕುಮಾರ್ ರೆಡ್ಡಿ ಅವರಿಗೆ ಆಂಧ್ರ ಕ್ರಿಕೆಟ್ ಸಂಸ್ಥೆ (ಎಸಿಎ) 25 ಲಕ್ಷ ಬಹುಮಾನ ಘೋಷಿಸಿದೆ.

ಪಂದ್ಯದಲ್ಲಿ ಭಾರತ 191 ರನ್‌ಗೆ 6 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದಾಗ ಕ್ರೀಸ್‌ಗೆ ಆಗಮಿಸಿದ ರೆಡ್ಡಿ, ಜವಾಬ್ದಾರಿಯುತ ಇನಿಂಗ್ಸ್ ಕಟ್ಟಿದರು. ವಾಷಿಂಗ್ಟನ್ ಸುಂದರ್ (50 ರನ್) ಅವರೊಂದಿಗೆ 127 ರನ್‌ಗಳ ದಾಖಲೆಯ ಜೊತೆಯಾಟವಾಡಿದರು. ಆ ಮೂಲಕ ಭಾರತ ಕನಿಷ್ಠ ಮೊತ್ತಕ್ಕೆ ಕುಸಿಯದಂತೆ ಹಾಗೂ ಫಾಲೋಆನ್ ಭೀತಿಯಿಂದ ಪಾರು ಮಾಡಿದರು.

ಎಸಿಎ ಅಧ್ಯಕ್ಷ ಕೆಸಿನೇನಿ ಶಿವನಾಥ್ ಮಾತನಾಡಿ, ಆಂಧ್ರ ಕ್ರಿಕೆಟ್ ಸಂಸ್ಥೆ ಪಾಲಿಗೆ ಇದು ಸುದೈವದ ದಿನ ಹಾಗೂ ಅತ್ಯಂತ ಸಂತಸದ ಕ್ಷಣ. ಆಂಧ್ರದ ಹುಡುಗನೊಬ್ಬ ಅಂತರರಾಷ್ಟ್ರೀಯ ಟೆಸ್ಟ್ ಹಾಗೂ ಟಿ20 ಮಾದರಿಗೆ ಆಯ್ಕೆಯಾಗಿರುವುದು ಖುಷಿ ತಂದಿದೆ. ಅದರ ಗೌರವಾರ್ಥವಾಗಿ ಆಂಧ್ರ ಕ್ರಿಕೆಟ್ ಸಂಸ್ಥೆಯು ನಿತೀಶ್ ಕುಮಾರ್ ರೆಡ್ಡಿಗೆ 25 ಲಕ್ಷ ಬಹುಮಾನ ನೀಡುತ್ತಿದೆ ಎಂದು ತಿಳಿಸಿದ್ದಾರೆ.

ತಿದ್ದುಪಡಿ

ದಿನಾಂಕ 24-12-2024 ರಂದು ಈ ಪತ್ರಿಕೆಯ 3ನೇ ಪುಟದಲ್ಲಿ ಸಾರ್ವಜನಿಕ ಪ್ರಕಟಣೆಯಡಿಯಲ್ಲಿ ಜಾಹಿರಾತು ಪ್ರಕಟಣೆಯಲ್ಲಿ ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ನೆಲ್ಲಿತಾಳಪುರ ಗ್ರಾಮಕ್ಕೆ ಸೇರಿದ ಸರ್ವೆ ನಂ. 65/3 ರಲ್ಲಿರುವ ಮಾರಾಟಗಾರರಾದ ಶ್ರೀ ಎಂ. ಎನ್. ಮಹದೇವಸ್ವಾಮಿ ರವರ ಬಾಬ್ತು 3.17 ಎಕರೆ ಜಮೀನಿಗೆ ಸಂಬಂಧಿಸಿದಂತೆ, ಶ್ರೀಮತಿ ರೇಣುಕಾ ಬಿನ್ ತಿಮ್ಮಶೆಟ್ಟಿ ಎಂದು ನಮೂದಿಸುವ ಬದಲು ಕೈ ತಪ್ಪಿನಿಂದ ದಕ್ಷಿಣೆ ಎಂದು ನಮೂದಾಗಿರುತ್ತದೆ. ಇದನ್ನು ಸೂಕ್ತವಾಗಿ ತಿದ್ದುಪಡಿ ಮಾಡಿಕೊಳ್ಳಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಎಸ್. ಸುರೇಶ ಬಿ.ಬಿ.ಎಂ. ಎಲ್.ಎಲ್.ಬಿ, (ವಕೀಲರು)
ನಂ. 974, 7ನೇ ಮೇನ್, 3ನೇ ಹಂತ, ಗೋಕುಲಂ, ಮೈಸೂರು–570 002 ಮೊಬೈಲ್: 98862–29668

FOND REMEMBRANCE

"Of all the Gifts that life has to offer, A loving MOTHER is the Greatest of them all"



Smt. SAHADEVI P. ARMUGAM
M.Sc.,N, (PhD.,N)
Founder AASHRITHA HOSPITAL, Neuro-Psychiatry, De-addiction and Rehabilitation. Retd., Principal, ANMTC, K.R. Hospital, Former Principal, Vishwabharathi Institute & College of Nursing, Mysore



6ನೇ ವರ್ಷದ ಚಿರಸ್ಮರಣೆ



ಶಾರದಮ್ಮ
(29.9.2018)

ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮ ಮನದಲ್ಲಿ.
ದುಃಖಿತಪ್ತರು : ರೂಪಾ, ರೇವಣ್ಣ ಮೈಸೂರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ನನ್ನ ಕಕ್ಷಿದಾರರಾದ ಲೇಟ್.ವೆಂಕಟಾಚಲರವರ ಮಗ ಶ್ರೀ.ವಿ.ಮಹೇಶ್‌ರವರಿಗೆ ಲೇಟ್.ಮರೀಗೌಡರವರ ಮಗ ಶ್ರೀ.ಶಂಕರ ಮತ್ತು ಕುಟುಂಬದವರಿಂದ ನೋಂದಾಯಿತ ಕ್ರಯದ ಕರಾರು ಏರ್ಪಟ್ಟಿದ್ದು ಕೆಳಗಿನ ಅನುಸೂಚಿಯ ಲ್ಲಿರುವ ಸ್ವತ್ತನ್ನು ಖರೀದಿಸಲು ಆಸಕ್ತಿ ಉಳ್ಳವರಾಗಿರುತ್ತಾರೆ.

ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಕ್ರಯ, ದಾನ, ಭೋಗ್ಯ, ಅಡಮಾನ ಅನುವಂಶೀಯತೆ, ವಿಲ್, ಪಾಲುದಾರಿಕೆ, ಬಾಡಿಗೆ, ಪರವಾನಗಿ ಅಥವಾ ಮತ್ಯಾವುದೇ ರೀತಿಯಲ್ಲಿ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಅಥವಾ ಆಸಕ್ತಿ ಹೊಂದಿದ್ದಲ್ಲಿ ಸದರಿ ವ್ಯಕ್ತಿಯು ನನ್ನ ಈ ಕೆಳಗಿನ ವಿಳಾಸಕ್ಕೆ ದಾಖಲಾತಿಗಳೊಂದಿಗೆ ಈ ದಿನದಿಂದ 14 ದಿನಗಳ ಒಳಗಾಗಿ ಸಂಪರ್ಕಿಸಲು ತಿಳಿಸಿದೆ. ತಪ್ಪಿದಲ್ಲಿ ಯಾವುದೇ ವ್ಯಕ್ತಿಗಳಿಗೂ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಅಥವಾ ಆಸಕ್ತಿ ಇಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತನ್ನು ಖರೀದಿಸಲು ಮುಂದಾಗುತ್ತಾರೆ.

ಅನುಸೂಚಿ ಸ್ವತ್ತು: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಧನಗಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.112/5 (ಹಳೇ ಸರ್ವೆ ನಂ.242/5)ರ ವಿಸ್ತೀರ್ಣ 1 ಎಕರೆ 39.08 ಗುಂಟೆ ಕೃಷಿ ಜಮೀನಿಗೆ ಚೆಕ್ಕುಬಂದಿ, ಪೂರ್ವಕ್ಕೆ : ಬ್ಲಾಕ್ 1 (ಬಸಪ್ಪ @ ಮಿಣ್ಣಯ್ಯ ರವರ ಹಿಸ್ಸೆ ಜಮೀನು) ಪಶ್ಚಿಮಕ್ಕೆ : ಬ್ಲಾಕ್ 3 (ನಾಗರಾಜುರವರ ಹಿಸ್ಸೆ ಜಮೀನು) ಉತ್ತರಕ್ಕೆ : ಲಾ ಸ ನಂ.263ರ ಜಮೀನು, ದಕ್ಷಿಣಕ್ಕೆ : ರಸ್ತೆ

ಸಹಿ/–(ಎಮ್.ಎಸ್.ಜಿನಚಂದ್ರನ್), ವಕೀಲರು,
ವಿಳಾಸ: ಶ್ರೀ.ಎಮ್.ಎಸ್.ಜಿನಚಂದ್ರನ್, ವಕೀಲರು #1206/A, CH-31/A, 1ನೇ ಮಹಡಿ, ನ್ಯೂ ಕಾಂತರಾಜ್ ಅರಸ್ ರಸ್ತೆ, ಬಲ್ಲಾಳ್ ವೃತ್ತದ ಹತ್ತಿರ, ಚಾಮರಾಜಪುರಂ, ಮೈಸೂರು–570005.
ದಿನಾಂಕ:25.12.2024, ಸ್ಥಳ: ಮೈಸೂರು

ದಿ ಮೈಸೂರು ಧಾನ್ಯ ವರ್ತಕರ ಸಂಘ (ರಿ.)

3/ಎ ಎಪಿಎಂಸಿ ಆವರಣ ಬಂಡಿಪಾಳ್ಯ ಮೈಸೂರು–25
Email: tmgma.mys@gmail.com| Ph.No:0821-2481499.

ಸರ್ವಸದಸ್ಯರ ಮಹಾಸಭೆಯ ಆಹ್ವಾನ ಪತ್ರಿಕೆ

ಮಾನ್ಯ ಸದಸ್ಯರುಗಳೇ,

ದಿನಾಂಕ: 29-12-2024 ರ ಭಾನುವಾರ ಬೆಳಗ್ಗೆ 11:00 ಗಂಟೆಗೆ ಸಂಘದ 63,64 ಮತ್ತು 65 ಹಾಗೂ 66ನೇ ವರ್ಷದ ಸರ್ವ ಸದಸ್ಯರ ಮಹಾಸಭೆಯನ್ನು ನಡೆಸಲಾಗುತ್ತಿದೆ. ಆದ್ದರಿಂದ ಆಹ್ವಾನ ಪತ್ರಿಕೆ ತಲುಪದಿರುವ ಮಾನ್ಯ ಸದಸ್ಯರು ಇದನ್ನೆ ಆಹ್ವಾನ ಪತ್ರಿಕೆ ಎಂದು ಭಾವಿಸಿ ತಪ್ಪದೆ ಸಕಾಲದಲ್ಲಿ ಸಭೆಗೆ ಹಾಜರಾಗಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ಮಾನ್ಯ ಸದಸ್ಯರು ಸಭೆಗೆ ಹಾಜರಾಗುವಾಗ ಸಂಘದ ಆಹ್ವಾನ ಪತ್ರಿಕೆಯನ್ನಾಗಲಿ, ಗುರುತಿನ ಚೀಟಿಯನ್ನಾಗಲಿ ಜೊತೆಯಲ್ಲಿ ತರಬೇಕೆಂದು ಈ ಮೂಲಕ ತಿಳಿಸುತ್ತೇವೆ.

ವಂದನೆಗಳೊಂದಿಗೆ,

ಮಹಾಸಭೆ ನಡೆಯುವ ಸ್ಥಳ: ಹೋಟೇಲ್ ಪೈವಿಸ್ತಾ, ಬೆಂಗಳೂರು ನೀಲಗಿರಿ ರೋಡ್, ಸಬರ್ಬ್ ಬಸ್ ಸ್ಟ್ಯಾಂಡ್ ಎದುರು. ಮೈಸೂರು.

ದಿನಾಂಕ: 29.12.2024
ಸ್ಥಳ: ಮೈಸೂರು
ಸಹಿ/– ಆರ್.ಆನಂದ್ (ಗೌ.ಕಾರ್ಯದರ್ಶಿ)